ಮೈಸೂರು ವಿಧಾನಸಭೆಯ ನಡೆವಳಿಕೆಗಳು

MYSORE LEGISLATIVE ASSEMBLY DEBATES

ಅಧಿಕೃತ ವರದಿ

OFFICIAL REPORT

ನಾಲ್ಕನೆಯ ವಿಧಾನಸಭೆಯ ಏಳನೆಯ ಅಧಿವೇಶನ

SEVENTH SESSION OF THE FOURTH LEGISLATIVE ASSEMBLY

೧೩ನೇ ಶುಕ್ರವಾರ, ಮಾರ್ಚಿ ೧೯೭೦ [ಫಾಲ್ಗುಣ ೨೨, ೧೮೯೧ (ಶಕ)]

FRIDAY, 13TH MARCH 1970 [PHALGUNA 22, 1891 (SAKA)]

ಸಂಪುಟ ೨೫—ಕ್ರಮಾಂಕ ೫

Vol. XXV—No. 5

4894(A)

ಮೈಸೂರು ವಿಧಾನಮಂಡಲದ ಕಾರ್ಯಾಲಯ, ಬೆಂಗಳೂರು

Mysore Legislature Secretariat, Bangalore

ಬೆಲೆ : ೨೫ ಪೈಸೆ

Price : 25 Paise

ಮೈಸೂರು ವಿಧಾನಸಭೆಯ ನಡೆವಳಿಕೆಗಳು

MYSORE LEGISLATIVE ASSEMBLY DEBATES

ಅಧಿಕೃತ ವರದಿ

OFFICIAL REPORT

ನಾಲ್ಕನೆಯ ವಿಧಾನಸಭೆಯ ಏಳನೆಯ ಅಧಿವೇಶನ

SEVENTH SESSION OF THE FOURTH LEGISLATIVE ASSEMBLY

೧೪ನೇ ಶನಿವಾರ, ಮಾರ್ಚ್ ೧೯೭೦ [ಫಾಲ್ಗುಣ ೨೩, ೧೮೯೧ (ಶಕ)]

SATURDAY, 14TH MARCH 1970 [PHALGUNA 23, 1892 (SAKA)]

ಸಂಪುಟ ೨೫—ಕ್ರಮಾಂಕ ೬

Vol. XXV—No. 6

ಮೈಸೂರು ವಿಧಾನಮಂಡಲದ ಕಾರ್ಯಾಲಯ, ಬೆಂಗಳೂರು

Mysore Legislature Secretariat, Bangalore

ಬೆಲೆ: ೨೫ ಪೈಸೆ

Price: 25 Piase

ಮೈಸೂರು ವಿಧಾನಸಭೆಯ ನಡವಳಿಕೆಗಳು

MYSORE LEGISLATIVE ASSEMBLY DEBATES

ಅಧಿಕೃತ ವರದಿ

OFFICIAL REPORT

ನಾಲ್ಕನೆಯ ವಿಧಾನಸಭೆಯ ಏಳನೆಯ ಅಧಿವೇಶನ

SEVENTH SESSION OF THE FOURTH LEGISLATIVE ASSEMBLY

೧೬ನೇ ಸೋಮವಾರ, ಮಾರ್ಚಿ ೧೯೭೦ [ಫಾಲ್ಗುಣ ೨೫, ೧೮೯೧ (ಶಕ)]

MONDAY, 16TH MARCH 1970 [PHALGUNA 25, 1891 (SAKA)]

ಸಂಪುಟ ೨೫—ಕ್ರಮಾಂಕ ೭

Vol. XXV—No. 7

ಮೈಸೂರು ವಿಧಾನಮಂಡಲದ ಕಾರ್ಯಾಲಯ, ಬೆಂಗಳೂರು

Mysore Legislature Secretariat, Bangalore

ಬೆಲೆ : ೨೫ ಪೈಸೆ

Price : 25 Paise

ಮೈಸೂರು ವಿಧಾನಸಭೆಯ ನಡವಳಿಕೆಗಳು

MYSORE LEGISLATIVE ASSEMBLY DEBATES

ಅಧಿಕೃತ ವರದಿ

OFFICIAL REPORT

ನಾಲ್ಕನೆಯ ವಿಧಾನಸಭೆಯ ಏಳನೆಯ ಅಧಿವೇಶನ

SEVENTH SESSION OF THE FOURTH LEGISLATIVE ASSEMBLY

೧೭ನೇ ಮಂಗಳವಾರ, ಮಾರ್ಚ್ ೧೯೭೦ [ಫಾಲ್ಗುಣ ೨೬, ೧೮೯೧ (ಶಕ)]

TUESDAY, 17TH MARCH 1970 [PHALGUNA 26, 1891 (SAKA)]

ಸಂಪುಟ ೨೫—ಕ್ರಮಾಂಕ ೮

Vol. XXV—No. 8

ಮೈಸೂರು ವಿಧಾನಮಂಡಲದ ಕಾರ್ಯಾಲಯ, ಬೆಂಗಳೂರು

Mysore Legislature Secretariat, Bangalore

ಬೆಲೆ: ೨೫ ಪೈಸೆ

Price: 25 Piase

ಮೈಸೂರು ವಿಧಾನಸಭೆಯ ನಡವಳಿಕೆಗಳು

MYSORE LEGISLATIVE ASSEMBLY DEBATES

ಅಧಿಕೃತ ವರದಿ

OFFICIAL REPORT

ನಾಲ್ಕನೆಯ ವಿಧಾನಸಭೆಯ ಏಳನೆಯ ಅಧಿವೇಶನ

SEVENTH SESSION OF THE FOURTH LEGISLATIVE ASSEMBLY

೧೮ನೇ ಬುಧುವಾರ, ಮಾರ್ಚಿ ೧೯೭೦ [ಫಾಲ್ಗುಣ ೨೭, ೧೮೯೧ (ಶಕ)]

WEDNESDAY, 18TH MARCH 1970 [PHALGUNA 27, 1891 (SAKA)]

ಸಂಪುಟ ೨೫—ಕ್ರಮಾಂಕ ೯

Vol. XXV—No. 9

ಮೈಸೂರು ವಿಧಾನಮಂಡಲದ ಕಾರ್ಯಾಲಯ, ಬೆಂಗಳೂರು

Mysore Legislature Secretariat, Bangalore

ಬೆಲೆ: ೨೫ ಪೈಸೆ

Price: 25 Piase

ಮೈಸೂರು ವಿಧಾನಸಭೆಯ ನಡವಳಿಕೆಗಳು

MYSORE LEGISLATIVE ASSEMBLY DEBATES

ಅಧಿಕೃತ ವರದಿ

OFFICIAL REPORT

ನಾಲ್ಕನೆಯ ವಿಧಾನಸಭೆಯ ಏಳನೆಯ ಅಧಿವೇಶನ

SEVENTH SESSION OF THE FOURTH LEGISLATIVE ASSEMBLY

೨೦ನೇ ಶುಕ್ರವಾರ, ಮಾರ್ಚ್ ೧೯೭೦ [ಫಾಲ್ಗುಣ ೨೯, ೧೮೯೧ (ಶಕ)]

FRIDAY, 20TH MARCH 1970 [PHALGUNA 29, 1891 (SAKA)]

ಸಂಪುಟ ೨೫—ಕ್ರಮಾಂಕ ೧೦

Vol. XXV—No. 10

ಮೈಸೂರು ವಿಧಾನಮಂಡಲದ ಕಾರ್ಯಾಲಯ, ಬೆಂಗಳೂರು

Mysore Legislature Secretariat, Bangalore

ಬೆಲೆ : ೨೫ ಪೈಸೆ

Price : 25 Paise

CONTENTS

		PAGES
1	Discussion for short duration on the Statement of Dr. K. L. Rao Union Minister for Irrigation *re*: Cauvery Water Dispute—(Debate concluded) ...	351—385
2	(i) Starred Questions and Answers ...	385—401
	(ii) Short Notice Questions and Answers ...	401—404
3	Budget Estimates for 1970-71 Demands for Grants— Demand No. Head 10—(19) General Administration 12—(22) Jails 13—(23) Police —(Voted) ...	404—446

CONTENTS

		Pages
1	(i) Starred Questions and Answers ...	447—466
	(ii) Short Notice Question and Answer ...	466—467
	(iii) Questions for Answers on the day (but not taken up)	467—472
2	Arrest and release of Sriyuths Vatal Nagaraj and S. Bangarappa at New Delhi ...	472
3	Personal Explanations by the Chief Minister and Sri N. Hutchmasti Gowda ...	472—488
4	Calling Attention to a Matter of Urgent Public Importance *re* : Social and Economic boycott of Harijans in Kambadanahalli, Siddlagatta Taluk ...	488—490
5	Budget Estimates for 1970-71—Demads for Grants—	
	Demand Nos. Head	
	6—13 Other Taxes and duties	
	29—43 I.N.E. and D. Works (Commercial)	
	30—44 do (Non-Commercial)	
	30A—45 Electricity Schemes	
	45—99 Capital Outlay on Irrigation, Navigation, Embankment and Drainage Works (Commercial)	
	47—101 Capital Outlay on Electricity Schemes	
	31—50 Public Works	
	31A—52 Capital Outlay on Public Works	
	43—94 Capital Outlay on Improvement of Public Health	
	48—103 Capital Outlay on Public Works	
	30B—48 Capital Outlay on Irrigation, Navigation, Embankment and Drainage Works	
	46—100 Copital Outlay on Irrigation, Navigation, Embankment and Drainage Works (Non-Commercial)	
	32—53 Ports and Pilotage	
	50—110 Capital Outlay on Ports	
	50A—114 Capital Outlay on Road and Water Transport Scheme—(Debate not concluded) ...	490—502

CONTENTS

		Pages
1	(i) Starred Questions and Answers ...	503—523
	(ii) Questions for Answers on the day (but not taken up)	524—529
2	Arrest of Sriyuths Vatal Nagaraj and S. Bangarappa at Delhi—(Ann unced) ...	529
3	Personal explenation by Minister for Finance, Planning and youth Welfere—(Postponed) ...	529
4	Calling Attention to a matter of Urgent Public Importance	
	re: Termination of Services of the Second Division Clerks by the Deputy Commissioner, Raichur ...	530—531
5	Budget Estimates for 1970-71—Demands for Grants—	
	Demand Nos. Head	
	6—(13) Other Taxes and duties	
	29—(43) I.N E. and D. Works (Commercial)	
	30—(44) do (Non-Commercial)	
	30A (45) Electricity Schemes ...	
	45—(99) Capital Outlay on Irrigation, Navigation, Embankment and Drainage Works—(Commercial)	
	47—(101) Capital Outlay on Electricity Schemes	
	31—(50) Public Works	
	31A—(52) Capital Outlay on Public Works	
	43—(94) Capital Outlay on improvement of Public Health	
	48—(103) Capital Outlay on Public Works	
	30B—(48) Capital Outlay on Irrigation, Navigation Embankment and Drainage Works	
	46—(100) Capital Outlay on Irrigation, Navigation, Embankment and Drainage Works (Non-Commercial)	
	32—(53) Ports and Pilotage	
	50—(110) Capital Outlay on Ports	
	50A—(114) Capital Outlay on road and Water Transport Scheme	
	—(Debate not concluded) ...	531—572
6	Business of the House ...	572

CONTENTS

		Pages
1	(i) Starred Questions and Answers ...	573—596
	(ii) Questi ns for Answers on the day (but not taken up)...	596—598
2	Calling Attention to a matter of urgent Public Importance *re* : Damage to Bridges across Tunga and Bhadra Rivers and necessity of constructing New Bridges ...	598—601
3	Missing of Records in the M.S.E.B. ...	602—604
4	(i) Matter under Rule: 312, *re*: Demand made by the Students of the Veterinary College ...	604—606
	(ii) Strike by some NGO's neor the Legislature Home ...	606—606
5	Personal explanation by the Minister for Finance, Planning and Youth Welfare ...	607—612
6	Budget Estimates for 1970-71—Demands for Grants—	
	Demand Nos. Head	
	6—13 Other Taxes and duties	
	29—43 I.N.E. and D. Works (Commercial)	
	30—44 do (Non-Commercial)	
	30A—45 Electricity Schemes	
	45—99 Capital Outlay on Irrigation, Navigation, Embankment and Drainage Works (Commercial)	
	47—101 Capital Outlay on Electricity Schemes	
	31—50 Public Works	
	31A—52 Capital Outlay on Public Works	
	43—94 Capital Outlay on Improvement of Public Health	
	48—103 Capital Outlay on Public Works	
	30B—48 Capital Outlay on Irrigation, Navigation, Embankment and Drainage Works	
	46—100 Capital Outlay on Irrigation, Navigation, Embankment and Drainage Works (Non-Commercial)	
	32—53 Ports and Pilotage	
	50—110 Capital Outlay on Ports	
	50A—114 Capital Outlay on Road and Water Transport Scheme	
	(Voted) ...	612—646

CONTENTS

		Pages
1	(i) Starred Questions and Answers ...	647—666
	(ii) Questions for Answers on the day (but not taken up)	666—674
2	Calling Attention to a matter of Urgent Public Importance	
	re: Fire accident at Andanoor Village of Holalkere Taluk, Chitradurga District for a Alloting time for supplementary on a Question—Speaker's Control ...	674—675
3	Papers laid on the Table—	
	Finance Accounts and Appropriation Accounts for 1968-69 Audit Report for 1970 (Civil and Commercial) ...	676
4	Business of the House ...	676
5	Budget Estimates for 1970-71—Demands for Grants—	
	Demand Nos. Head	
	2—(9) Land Revenue	
	7—(14) Stamps	
	8—(15) Registration Fees	
	33—(64) Famine Relief	
	42—(92) Payment of Compensation to Land-holders, etc., on the Abolition of Zamindari system ...	
	—(Voted) ...	676—715

CONTENTS

		Pages
1	(i) Starred Questions and Answers ...	717—733
	(ii) Short Notice Questions and Answers ...	734—740
	(iii) Questions for Answers on the day (but not taken up)	740—743
2	Mysore Co-operative Societies (Amendment) Bill, 1970 —(Introduction) ...	743
3	Statement by Sri S. Sivappa *re*: Delegation to Delhi in connection with the Mysore-Maharastra Boundary Dispute ...	644—750
4	Budget Estimates for 1970-71—Demands for Grants— Demand Nos. Head 21—(32) Rural Development 23—(34) Co-operation 25—(37) C. D. Project, N.E.S. and L. D. Works 15—(26) Miscellaneous Department 53—(124) Capital Outlay on Schemes of Government Trading —(Voted)	751—785

ಮೈಸೂರು ವಿಧಾನ ಸಭೆ,

MYSORE LEGISLATIVE ASSEMBLY

Friday, 13th March 1970:

The House met in the Assembly Chamber, Vidhana Soudha, at thirty minutes past eight of the Clock.

MR SPEAKER (SRI S.D. KOTHAVALE) in the Chair.

(Quorum formed at 8-45 P.M.,)

DISCUSSION FOR SHORT DIRECTIVE IN THE STATEMENT OF SRI K L. RAO, UNION MINISTER FOR IRRIGATION

Re: *Cauvery Water Dispute*

[Debate *contd.*]

†ಶ್ರೀ ಹೆಚ್.ಡಿ. ದೇವೇಗೌಡ (ಹೊಳೇನರಸೀಪುರ):—ಮಾನ್ಯ ಅಧ್ಯಕ್ಷರೇ, ಮಾನ್ಯ ಕೆ.ಎಲ್. ರಾವ್ ಅವರು ಪಾರ್ಲಿಮೆಂಟಿನಲ್ಲಿ ಮಾಡಿದಂತಹ ಭಾಷಣದಿಂದ ಉದ್ಭವವಾದಂತಹ ಪರಿಣಾಮ ಏನಿದೆ ಇದರ ಬಗ್ಗೆ ಸರ್ಕಾರದ ಮತ್ತು ಈ ಮಾನ್ಯ ಸಭೆಯ ಗಮನವನ್ನು ಸೆಳೆಯುವ ಬಗ್ಗೆ ಈ ಮಾನ್ಯ ಸಭೆಯಮುಂದೆ ನಿನ್ನೆ ದಿವಸ ನನ್ನ ಮಾನ್ಯ ಮಿತ್ರರಾದ ಶ್ರೀ ಹೆಚ್.ಎನ್. ನಂಜೇಗೌಡರು ಮಂಡಿಸಿರತಕ್ಕ ಸೂಚನೆಯನ್ನು ನಾನು ಸ್ವಾಗತಿಸುತ್ತೇನೆ. ಅವರು ಬಹಳ ಒಳ್ಳೆಯ ಉದ್ದೇಶದಿಂದ ಈ ಸೂಚನೆಯನ್ನು ತಂದಿದ್ದಾರೆ ಈ ಒಂದು ೧೯೨೪ನೇ ಇಸವಿಯ ಅಗ್ರಿಮೆಂಟ್ ಪರಿಶೀಲನೆಗೆ ಹೋಗುವುದಕ್ಕೆ ಮುಂಚೆ ಕಾವೇರಿ ನದಿಯ ನೀರಿನ ಒಂದು ಉಪಯೋಗವನ್ನು, ಸರಿಯಾದ ರೀತಿಯಲ್ಲಿ ಮಾಡಿಲ್ಲ, ಇದಕ್ಕೆ ಕಾರಣಕರ್ತರು ಬಹುಶಃ ೧೯೨೪ನೇ ಇಸವಿಯಿಂದ ಈಚೆಗೆ ಆಡಳಿತವನ್ನು ಹೊತ್ತಿರತಕ್ಕ ಮಾನ್ಯ ಮುಖಂಡರೇ ಎಂದು ಹೇಳಿ ನಿನ್ನೆ ರಾಜಕೀಯ ಆರೋಪಣೆಯನ್ನು ಮಾಡಿದ್ದನ್ನು ನಾನು ಈ ಸಭೆಯಲ್ಲಿ ನೋಡಿದೆ. ೧೯೬೪ರಲ್ಲಿ ಮತ್ತು ೧೯೬೫ರಲ್ಲಿ ನಾನು ಈ ಸಭೆಯಲ್ಲಿ ಈ ಕಾವೇರಿ ನದಿ ನೀರಿನ ಉಪಯೋಗದ ಬಗ್ಗೆ ಎರಡು ಖಾಸಗಿ ರೆಜುಲ್ಯೂಷನ್ ಅನ್ನು ತಂದಿದ್ದೇನೆ. ಆ ಬಗ್ಗೆ ಚರ್ಚೆಯಾದದ್ದು ಈ ಸಭೆಯ ಪ್ರೊಸಿಂಡಿಗ್ಸ್‌ನಲ್ಲಿದೆ. ಇವೊತ್ತು ನಾನು ಕಾಂಗ್ರೆಸ್ ಪಕ್ಷದ ಕಡೆ ಬಂದಿದ್ದೇನೆ, ಅದಕ್ಕಾಗಿ ಬದಲಾಯಿಸಿ ಮಾತನಾಡುತ್ತೇನೆ ಎಂದು ನನ್ನ ಮಾನ್ಯ ಮಿತ್ರರು ತಿಳಿಯಬೇಕಾಗಿಲ್ಲ. ಪಕ್ಷಾಂತರ ಮಾಡುವುದು ಅಂಥಾ ದೊಡ್ಡದೇನೂ ಅಲ್ಲ. ಆದರ ಬಗ್ಗೆ ಬೇಕಾದರೆ ಗಂಟೆಗಟ್ಟಲೇ ವ್ಯಾಖ್ಯಾನ ಮಾಡಬಹುದು. ಅದು ಹಾಗಿರಲಿ. ೧೯೫೭ನೇ ಇಸವಿಯಲ್ಲಿ ಶ್ರೀ ಗಾಡ್ಗಿಲ್ ಅವರು ರಿಪೋರ್ಟ್ ಆಫ್ ದಿ ಮೈನರ್ ಇರಿಗೇಷನ್ ವರ್ಕ್ಸ್ ಇನ್ ದಿ ಮೈಸೂರು ಸ್ಟೇಟ್ ಎನ್ನತಕ್ಕದ್ದರಲ್ಲಿ ಕೊಟ್ಟಿರತಕ್ಕ ಅಂಕಿ ಅಂಶಗಳಲ್ಲಿ ೧೯೪೫-೪೬ರಿಂದ ೧೯೫೬-೫೭ರವರೆಗೆ ಈ ರಾಜ್ಯದಲ್ಲಿ ನೀರಾವರಿಯ ಒಂದು ಹೆಚ್ಚುವರಿಯನ್ನು ರಾಜ್ಯ ಸರ್ಕಾರದವರು ಏನು ಸಾಧನೆ ಮಾಡಿದ್ದಾರೆ ಎಂಬುದನ್ನು ಹೇಳಿದ್ದಾರೆ. ಅದು ಈ ರೀತಿ ಇದೆ.

"From the above statement it is seen that the increase in irrigated area from all the sources in the period 1945-46 to 1956-57 is only 1,24,000 acres. Out of this the increase under the channel is only 0.62 lakhs."

(ಶ್ರೀ ಹೆಚ್. ಡಿ. ದೇವೇಗೌಡ)

೬೨ ಸಾವಿರ ಎಕರೆ ನೀರಾವರಿಯನ್ನು ಸುಮಾರು ೧೦–೧೨ ವರ್ಷಗಳ ಕಾಲಾವಧಿಯಲ್ಲಿ ಸಾಧನೆ ಮಾಡಿದ್ದಾರೆನ್ನತಕ್ಕದ್ದನ್ನು ಹೇಳಿದ್ದಾರೆ. ಎಂದರೆ ನಮಗೆ ಅರ್ಥವಾಗುತ್ತದೆ, ಬಹುಶಃ ೧೯೪೭ನೇ ಇಸವಿಯಿಂದ ೧೯೫೭ನೇ ಇಸವಿಯವರೆಗೆ ನಮ್ಮ ನದೀ ನೀರನ್ನು ಎಕ್ಸ್‌ಪ್ಲಾಯ್ಟ್ ಮಾಡುವ ಬಗ್ಗೆ ಸಾಕಷ್ಟು ಎಚ್ಚರಿಕೆಯನ್ನು ಜಾಗೃತಿಯನ್ನು ವಹಿಸಲಿಲ್ಲ ಆದಕ್ಕೆ ಕಾರಣ ಯಾರೇ ಇರಲಿ. ಆಗ ಅಡಳಿತದ ಹೊರೆಯನ್ನು ಹೊತ್ತಿದ್ದಂತಹವರು ಇದರ ಜವಾಬ್ದಾರಿಯನ್ನು ಅರಿತು ಕೆಲಸ ಮಾಡಬೇಕಾಗಿತ್ತು. ಏಂದರೆ ಆಗ ಶ್ರೀಮಾನ್ ಕೆ.ಸಿ.ರೆಡ್ಡಿಯವರು ಮತ್ತು ಶ್ರೀ ಕೆ.ಹನುಮಂತಯ್ಯನವರು ಮುಖ್ಯ ಮಂತ್ರಿಗಳಾಗಿದ್ದರು. ಅವರು ಈ ಕಾವೇರಿ ನದಿಯ ನೀರಿನ ಉಪಯೋಗದ ಬಗ್ಗೆ ಸಾಕಷ್ಟು ಎಚ್ಚರಿಕೆಯನ್ನು ವಹಿಸಿ ಕೆಲಸ ಮಾಡಬೇಕಾಗಿತ್ತು. ಆಗ ಅವರ ಗಮನ ಆ ಕಡೆ ಏತಕ್ಕೆ ಹರಿಯಲಿಲ್ಲ ಎಂಬುದನ್ನು ನಾವು ಕೇಳಬೇಕಾಗುತ್ತದೆ. ೧೯೨೪ನೇ ಇಸವಿಯ ಅಗ್ರಿಮೆಂಟ್ ಪ್ರಕಾರ ಪ್ರಜಾ ಸತ್ತಾತ್ಮಕ ಸರ್ಕಾರ ಬಂದಮೇಲೆ ಎಂದರೆ ೧೯೬೪ನೇ ಇಸವಿಯಿಂದ ಈ ಅಗ್ರಿಮೆಂಟ್ ಬಗ್ಗೆ ಯಾವರೀತಿಯ ಪ್ರಯತ್ನವನ್ನು ಮಾಡಬೇಕಾಗಿತ್ತೋ ಅದನ್ನು ಇವರು ಮಾಡಲಿಲ್ಲ. ಈ ಅಗ್ರಿಮೆಂಟಿನ ಬಗ್ಗೆ ಆಗತಕ್ಕಂಥ ಅನುಕೂಲ ಅನಾನುಕೂಲಗಳ ಬಗ್ಗೆ ವಿಮರ್ಶೆ ಮಾಡಬೇಕಾದಂತಹ, ಹೋಬೇಕಾದಂತಹ ಹೋಣೆಯನ್ನು ಹೊರಲಿಲ್ಲ. ಸ್ಟೇಟ್ ರೀ ಆರ್ಗ್‌ನೈಜೇಷನ್ ಆದಮೇಲೆ ೧೯೫೬ನೇ ಇಸವಿಯಿಂದ ೧೯೬೦ನೇ ಇಸವಿಯವರೆಗೆ ಶ್ರೀಮಾನ್ ಚನ್ನಬಸಪ್ಪನವರು ಪಬ್ಲಿಕ್ ವರ್ಕ್ಸ್ ಶಾಖೆಯ ಮಂತ್ರಿಗಳಾಗಿದ್ದರು. ಅವರು ನಿನ್ನೆಯ ದಿವಸ ಹೇಳಿದರು ನಾನು ಈ ಅಗ್ರಿಮೆಂಟಿನ ಬಗ್ಗೆ ಕೇಂದ್ರ ಸರ್ಕಾರಕ್ಕೆ ಪ್ರತಿಭಟನೆ ಮಾಡಿದ್ದೇನೆ, ೧೯೨೪ನೇ ಇಸವಿಯ ಅಗ್ರಿಮೆಂಟನ್ನು ರಿವೈಜ್ ಮಾಡಿ ಎಂದು ತಿಳಿಸಿದ್ದೇನೆ ಎಂದು ಹೇಳಿದರು. ಶ್ರೀಮಾನ್ ಚನ್ನಬಸಪ್ಪನವರು ಕಾವೇರಿ ನೀರನ್ನು ಉಪಯೋಗಿಸುವ ಬಗ್ಗೆ ಆಸಕ್ತಿಯಿಂದ ಇದ್ದರು ಎನ್ನುವ ವಾದವನ್ನು ನಾನು ಹೇಳುವುದಿಲ್ಲ. ಅವರಿಗೆ ಆಸಕ್ತಿಯನ್ನು ತಿಳಿಸಿದ್ದಾರೆ, ಏನೇನು ವ್ಯವಹಾರವನ್ನು ನಡೆಸಿದ್ದಾರೆ ಎನ್ನುವುದು ನಮಗೆ ಅರ್ಥವಾಗುತ್ತದೆ. ನನಗೆ ತಿಳಿದ ಹಾಗೆ ಅವರು ೧೧ನೇ ಡಿಸೆಂಬರ್ ೧೯೫೯ನೇ ಇಸವಿಯಲ್ಲಿ ಮದ್ರಾಸ್ ವರ್ಕ್ಸ್ ಮಿನಿಷ್ಟರ್ ಶ್ರೀ ಕರ್ಕ್ ಅವರಿಗೆ ಒಂದು ಪತ್ರವನ್ನು ಬರೆದಿದ್ದಾರೆ. ಕಲ್ಲಾಯ್, ಪಲ್ಲಂಬಾಡಿ, ಮೆಟ್ಟೂರ್ ಹೈಲೆವೆಲ್ ಕೆನಾಲ್ ಇವುಗಳನ್ನು ಕಟ್ಟತಕ್ಕಂಥಾದ್ದರಲ್ಲಿ ೧೯೨೪ನೇ ಇಸವಿಯ ಅಗ್ರಿಮೆಂಟ್ ಮೀರಕೂಡದು ಎಂದು ನಮ್ಮ ರಾಜ್ಯದ ಪ್ರತಿಭಟನೆಯನ್ನು ವ್ಯಕ್ತಪಡಿಸಿ ಒಂದು ಪತ್ರವನ್ನು ಬರೆದಿದ್ದಾರೆ. ಅದು ಹಾಗಿಕಲಿ. ಈ ನದೀ ನೀರಿನ ಉಪಯೋಗದ ಬಗ್ಗೆ ಅಗ್ರಿಮೆಂಟ್ ಪ್ರಕಾರ ನಮ್ಮ ಕರ್ತವ್ಯವನ್ನು ಸರಿಯಾಗಿ ಪರಿಪಾಲನೆ ಮಾಡಬೇಕಾದ್ದನ್ನು ಮಾಡಬೇಕಾಗಿತ್ತು, ಅದನ್ನು ಮಾಡಿಲ್ಲ ರಾಜಕೀಯ ದೃಷ್ಟಿಯಿಂದ, ಇದಕ್ಕೆ ಶ್ರೀಮಾನ್ ಚನ್ನಬಸಪ್ಪನವರು ಕಾರಣವಿರಬಹುದು ಅಥವಾ ಶ್ರೀಮಾನ್ ನಿಜಲಿಂಗಪ್ಪನವರು ಕಾರಣವಿರಬಹುದು. ಆದರೆ ನಮ್ಮ ಕರ್ತವ್ಯವನ್ನು ಮಾಡುವುದರಲ್ಲಿ ಯಾವ ರಾಜಕೀಯವೂ ಅಡ್ಡಿ ಇರಲಿಲ್ಲ ಎಂದು ನಾ ನು ಹೇಳುತ್ತೇನೆ.

ಕಾವೇರಿ ನದೀ ನೀರಿನ ಉಪಯೋಗಕ್ಕೆ ಸಂಬಂಧಪಟ್ಟ ಹಾಗೆ ೧೯೬೧ ನೇ ಇಸವಿಯಲ್ಲಿ ಕೇಂದ್ರಸರ್ಕಾರದಲ್ಲಿ ಒಂದು ಸಭೆ ನಡೆಯಿತು. ಆಗ ಶ್ರೀ ಹಫೀಜ್ ಇಬ್ರಾಹಿಂ ಅವರು ನೀರಾವರಿ ಮಂತ್ರಿಗಳಾಗಿದ್ದರು ಅವರ ಛೇಂಬರ್‌ನಲ್ಲಿ ಶ್ರೀಮಾನ್ ವೀರಣ್ಣಗೌಡರು, ಶ್ರೀ ಜತ್ತಿಯವರು, ಶ್ರೀ ಕಾಮರಾಜ್ ನಾಡಾರವರು, ಶ್ರೀ ಸಿ. ಸುಬ್ರಹ್ಮಣ್ಯಂ ಅವರು ಇದರಲ್ಲಿ ಭಾಗವಹಿಸಿದ್ದರು. ಆಗ ಶ್ರೀ ಹಫೀಜ್ ಇಬ್ರಾಹಿಂ ಅವರು ಆ ವಿಷಯವನ್ನು ಮೈಸೂರು ಮತ್ತು ಮದ್ರಾಸಿನವರು ಇಬ್ಬರೂ ಒಂದು ಕಡೆ ಕುಳಿತುಕೊಂಡು ಮಾತನಾಡಿಕೊಂಡು ಒಂದು ಇತ್ಯರ್ಥಕ್ಕೆ ಬನ್ನಿ ಈ ವಿಷಯವನ್ನು ನಾನು ನಿಮಗೆ ಬಿಡುತ್ತೇನೆ ಎಂದು ಹೇಳಿದರು ಮದ್ರಾಸ್ ಸರ್ಕಾರದವರು ಕಟ್ಟತಕ್ಕಂಥ ಪ್ರಾಜೆಕ್ಟುಗಳ ವಿಷಯದಲ್ಲಿ ನಮ್ಮ ಸರ್ಕಾರದವರಲು ಪ್ರೊಟೆಸ್ಟ್ ಮಾಡಿಕೊಂಡು ಬಂದಿದ್ದಾರೆ ಮತ್ತು ಪತ್ರವನ್ನು ಕೂಡ ಬರೆದಿದ್ದಾರೆ. ಆವರಿಗೆ ಆ ಪ್ರಾಜೆಕ್ಟು ಗಳನ್ನು ಕಟ್ಟುವ ಬಗ್ಗೆ ಕ್ಲಿಯರೆನ್ಸ್ ಕೊಡುವ ಕಾಲದಲ್ಲಿ ಪ್ಲಾನಿಂಗ್ ಕಮಿಷನ್ನಿಗೆ ನಮ್ಮ ರಾಜ್ಯ ಸರ್ಕಾರದವರು ಪತ್ರವನ್ನು ಬರೆದಿದ್ದಾರೆ. ನಾವು ೧೯೨೪ನೇ ಅಗ್ರಿಮೆಂಟ್ ಏನಿದೆ ಅದನ್ನು ಮೀರಿ ಹೋಗಿ ಒಪ್ಪಿಗೆ ಕೊಡುವುದಕ್ಕೆ ಸಾಧ್ಯವಿಲ್ಲ ಎನ್ನುತಂಥಾ ಪ್ರತಿಭಟನೆಯನ್ನು ನಮ್ಮ ಸರ್ಕಾರದವರು ಮಾಡಿದ್ದಾರೆ. ಈ ಅಗ್ರಿಮೆಂಟ್ ರಿವೈಜ್ ಮಾಡಬೇಕು ಎಂದು ಬರೆದಿದ್ದಾರೆ. ಆದರೆ ಆದರಲ್ಲಿ ಈ ಅಗ್ರಿಮೆಂಟನ್ನು ಒಪ್ಪುದಕ್ಕೆ ಸಾಧ್ಯವಿಲ್ಲ ಎನ್ನುವ ಅರ್ಥ ಬರುವುದಿಲ್ಲ;

†ಶ್ರೀ ಹೆಚ್ ಎಂ. ಚನ್ನಬಸಪ್ಪ:— ರೂಲ್ಸ್ ಆಫ್ ರೆಗ್ಯುಲೇಷನ್ ಬದಲಾವಣೆ ಮಾಡಬೇಕು ಎಂದು ಹೇಳಿದೆ.

† Indicate that remarks [illegible] have not been revised by the Member concerned.

ಪ್ರೊಪೋರ್ಶ್ ಫ್ಯಾಕ್ಟರ್ಸ್ ಬದಲಾವಣೆ ಆಗತಕ್ಕದ್ದನ್ನು ನೀವು ಪತ್ರಿಕೆಯಲ್ಲಿ ನೋಡಿದ್ದೀರಿ ಎಂದು ತಿಳಿದುಕೊಂಡಿದ್ದೇನೆ. But I speak with some authority. At that time, the Secretary of the Public Works Department was Sri D.K. Srinivasachar. The proporation factor is working against us in the light of the facts that have been disclosed over a period of 32 years of gauge. They were told that this must be changed. Otherwise the 1924 Agreement becomes null and void and it is difficult for us to operate it. It may not be in so many words as you say. I would like you to be conreeted.

MR. SPEAKER:—The time allotted to Sri Deve Gowda is only half-an-hour. If the Hon. Member were to yield like this, he should note that additional time will not be granted to him on that ground.

SRI H.M. CHANNABASAPPA:—This is a very important issue. There must be correct clarification.

After all, our objective is to find out the truth and see that proper action is taken before it is too late. I would submit to the Chair that this is a matter of life and death to the State. Let not the Chair say that he will hold the scales very even and even demand a pound of flesh. You must accomodate the Member a little this way or that. You should not say that you will not go beyond the comma and the full stop. We crave some indulgence from you.

MR SPEAKER:—Where is the time? It is very limited time.

ಶ್ರೀ ಹೆಚ್.ಡಿ. ದೇವೇಗೌಡ:— ನಮ್ಮ ಹಿರಿಯ ನಾಯಕರಾದಂತಹ ಚನ್ನಬಸಪ್ಪನವರ ಬಗ್ಗೆ ನಾನು ತಪ್ಪು ಅಭಿಪ್ರಾಯವನ್ನು ಕೊಡುತ್ತಾ ಇಲ್ಲ. ೧೯೫೮ರಿಂದ ಇಲ್ಲಿಯವರೆಗೆ ನೀರಿನ ಬಗ್ಗೆ ಎಷ್ಟು ಆಸಕ್ತಿ ವಹಿಸಿದ್ದಾರೆ ಎಂಬುದರ ಬಗ್ಗೆ ನನಗೆ ಸಂಶಯವಿಲ್ಲ. ಆದರೆ ಅವರು ಅಗ್ರಿಮೆಂಟ್ ಅಲ್ಲ ಎನ್ನುವ ಬಗ್ಗೆ ನಾನು ಒಪ್ಪುವುದಿಲ್ಲ.

SRI H M. CHANNABASAPPA:—Mysore's stand is that there should be revision of agreement. That is the very word I stated to Sri Deve Gowda.

ಶ್ರೀ ಹೆಚ್.ಡಿ. ದೇವೇಗೌಡ:— ಪಾರ್ಲಿಮೆಂಟಿನಲ್ಲಿ ಶಿವನಂಜಪ್ಪನವರು ಮತ್ತು ದಾಸಪ್ಪನವರು ಕೇಳಿದ ಉಪ-ಪ್ರಶ್ನೆಗಳಿಗೆ ಆಗಿನ ಕಾಲದ ಡೆಪ್ಯೂಟಿ ಮಂತ್ರಿಯವರು ಉತ್ತರ ಕೊಡುತ್ತಾ "೩ ಪ್ರೊಜೆಕ್ಟ್ ಗಳಿಗೆ ಮೈಸೂರು ಸರ್ಕಾರದವರು ಪ್ರತಿಭಟನೆ ಸಲ್ಲಿಸಿದ್ದಾರೆ, ನಾವು ಅದನ್ನು ಎಗ್ಸಾಮಿನ್ ಮಾಡುತ್ತಿದ್ದೇವೆ" ಎಂದು ಹೇಳಿದ್ದಾರೆ.

SRI H.M CHANNABASAPPA:—It is differently given in different papers. I told Sri Deve Gowda yesterday that the stand of Mysore is that the 1924 Agreement has to be revised. I showed it to him. I am sorry I did not bring it. There are three paper extracts. Some people embody some thing and some people have stated something.

ಶ್ರೀ ಹೆಚ್.ಡಿ. ದೇವೇಗೌಡ:— ಇನ್ನೊಂದು ತಾವು ಮಂತ್ರಿಯಾಗಿದ್ದ ಕಾಲದಲ್ಲಿ ಮಲ್ಲಾರಾಧ್ಯರ ಪ್ರಶ್ನೆಗೆ, ಉತ್ತರ ಕೊಡುತ್ತಾ ಈ ರೀತಿ ಹೇಳಿದ್ದೀರಿ:

"Government are taking all necessary steps. We have requested the Government of India to appoint a Tribunal in order to give what is provided in the Agreement. We have been moving in all possible manner."

ತಾವು ಟ್ರಿಬ್ಯೂನಲ್ ನೇಮಕ ಮಾಡುವುದಕ್ಕೆ ಸರ್ಕಾರ ತಕ್ಕ ಕಾರ್ಯಕ್ರಮ ತೆಗೆದುಕೊಳ್ಳುತ್ತದೆ ಎಂದು ಹೇಳಿದ್ದೀರಿ. ಆದರೆ ಟ್ರಿಬ್ಯೂನಲಿಗೆ ಪ್ರೆಸ್ ಮಾಡಿಲ್ಲ. ಎರಡೂ ರಾಜ್ಯಗಳ ಮಂತ್ರಿಗಳು ಚರ್ಚೆ ಮಾಡುವುದು ಒಳ್ಳೆಯದು ಎಂದು ಪತ್ರ ಬರೆದಿದ್ದೀರಿ. ಟ್ರಿಬ್ಯೂನಲಿಗೆ ಪ್ರೆಸ್ ಮಾಡತಕ್ಕದ್ದನ್ನು ಹೇಳಿಲ್ಲ.

SRI M H CHANNABASAPPA: The Government of India should play the part of the Tribunal.

ಶ್ರೀ ಹೆಚ್.ಡಿ. ದೇವೇಗೌಡ:— ಕೊನೆಯಲ್ಲಿ ತಾವು ಒಂದು ಮಾತು ಹೇಳಿದ್ದೀರಿ ನಾನು ಕೆ.ಎಲ್. ರಾಯರ ಪೊಸಿಶನ್ನಿನಲ್ಲಿದ್ದರೆ, ಕ್ಲಿಯರೆನ್ಸ್ ಕೊಡುತ್ತಿರಲಿಲ್ಲವೆಂದು.

SRI H.M. CHANNABASAPPA: My only reaction to that is that the Madras Government is demanding a pound of flesh ಟ್ರಿಬ್ಯೂನಲ್ಲಿಗೆ ಕಳಿಸಿ ಎಂದು ಹೇಳುತ್ತಿದ್ದಾರೆ. ಮೈಸೂರು ಟ್ರಿಬ್ಯೂನಲನ್ನು ಕೇಳುತ್ತಾ ಇಲ್ಲ. ಒಂದು ಮಾರ್ಗ ಸೆಟ್ಲ್‌ಮೆಂಟ್ ಬೈ ನೆಗೋಶಿಯೇಶನ್, ಇಲ್ಲದಿದ್ದರೆ ಅರ್ಬಿಟ್ರೇಶನಿಗೆ ಕಳಿಸತಕ್ಕದ್ದು. ನಾನು ಕೆ.ಎಲ್. ರಾಯರ ಸ್ಥಾನದಲ್ಲಿದ್ದರೆ, ಆದು ರಿವೈಸ್ ಆಗದೆ ಕ್ಲಿಯರೆನ್ಸ್ ಕೊಡುವುದಿಲ್ಲವೆಂದು ಹೇಳುತ್ತಿದ್ದೆ. I do not want the Hon. Member to exploit that situation. Otherwise I will stand by that word.

SRI M S. KRISHNAN:—Sri CHANNABASAPPA cannot convince Sri Deve Gowda. I wish he allows Sri Deve Gowda to speak.

MR. SPEAKER:—Sri Deve Gowda's time will be over by 9-15 whatever be the intervention.

ಶ್ರೀ ಹೆಚ್.ಡಿ. ದೇವೇಗೌಡ:— ಮಾನ್ಯ ಚನ್ನಬಸಪ್ಪನವರಿಗೆ ಕಾವೇರಿ ಬೇಸ್ಡಿನ ನೀರಿನ ಉಪಯೋಗದಲ್ಲಿ ಎಷ್ಟು ಆಸಕ್ತಿ ಇದೆ ಎಂಬುದರ ಬಗ್ಗೆ ನಾನು ಪ್ರಶ್ನೆ ಮಾಡುತ್ತಾ ಇಲ್ಲ. ಆದರೆ ಅವರು ಉದ್ವೇಗದಲ್ಲಿ ಆದನ್ನು ಹೇಳತಕ್ಕದ್ದು ಅವಾಯಿಡಬಲ್ ಎಂದು ಮಾತ್ರ ಹೇಳುತ್ತೇನೆ. ಅವರ ಭಾಷಣದಲ್ಲಿ ಅವರು I have got a big hammer to be nailed on the head of the Chief Minister ಎಂದು ಹೇಳಿದ್ದಾರೆ. ಇದರಲ್ಲಿ ರಾಜಕೀಯ ವ್ಯತ್ಯಾಸದ ಮೇಲೆ ಮಾತನಾಡತಕ್ಕದ್ದು ಸರಿಯಲ್ಲ. ನಮ್ಮ ಮುಂದೆ ಏನು ಸಮಸ್ಯೆ ಇದೆ, ಆದನ್ನು ಪರಿಹರಿಸುವುದಕ್ಕೆ ಪ್ರಯತ್ನ ಮಾಡುವುದು ಉತ್ತಮವೆಂದು ಹೇಳುತ್ತೇನೆ. ೧೯೫೭ನೇ ಇಸವಿಯಿಂದ ಇಲ್ಲಿಯವರೆಗೆ ಏನು ಮಾಡಿದೆ ಎಂದು ಎಲ್ಲವನ್ನೂ ನೋಡಿದರೆ ಗೊತ್ತಾಗುತ್ತದೆ.

ಮಾನ್ಯ ದೇವರಾಜ ಅರಸರು ಮಾತನಾಡುತ್ತಾ, ಕೆ. ಎಲ್. ರಾಯರ ಬಗ್ಗೆ ಹಿಂದೆ ಯಾರೂ ಪ್ರತಿಭಟನೆ ವ್ಯಕ್ತಪಡಿಸಿಲ್ಲ, ಆದರೆ ಇವತ್ತು ಅವರ ಬಗ್ಗೆ ಪ್ರತಿಭಟನೆ ವ್ಯಕ್ತಪಡಿಸಿ ಪಂಕಜ ಅನುಮಾನ ಬಂದಿದೆ ಎಂದು ಹೇಳಿದರು. ನಾನು ಈ ಸಂದರ್ಭದಲ್ಲಿ ಒಂದು ಮಾತನ್ನು ಹೇಳುತ್ತೇನೆ. ನಾವು ೧೯೫೪-೬೫ ರಲ್ಲಿ ಏನು ಚರ್ಚೆ ಮಾಡಿದ್ದೇವೆ, ಅವತ್ತು ಕೆ ಎಲ್. ರಾಯರ ಬಗ್ಗೆ ಅನುಮಾನ ವ್ಯಕ್ತಪಡಿಸಿ, ಎಲ್ಲಿಯವರೆಗೆ ಕೆ. ಎಲ್. ರಾಯರು ಕೇಂದ್ರದಲ್ಲಿ ಮಂತ್ರಿಯಾಗಿರುತ್ತಾರೋ, ಅಲ್ಲಿಯವರೆಗೆ ನಮಗೆ ನ್ಯಾಯ ದೊರೆಯುವುದಿಲ್ಲವೆಂದು ಹೇಳಿದ್ದೆವು.

9-00 A.M.

ಬಹುಶಃ ನಾನು ಇವತ್ತು ಯಾವುದೇ ಆಪಾದನೇ ಮಾಡಿದರೂ ರಾಜಕೀಯ ಹಿನ್ನಲೆಯಿಂದ ಆಪಾದನೆ ಮಾಡುತ್ತಿದ್ದೇನೆಂದು ಯಾರೂ ತಿಳಿಯುವುದಿಲ್ಲ. ಏಕೆಂದರೆ ಅವರ್ ಅವರು ಅವತ್ತಿನ ದಿವಸ ಮಾಡಿದ ಆಪಾದನೆ ಸರಿಯಾಗಿಲ್ಲ. ಇವತ್ತು ಮಾನ್ಯ ಶ್ರೀ ಕೆ. ಎಲ್. ರಾವ್ ಅವರ ನಡತೆ ಏನು ಇದೆ ಮತ್ತು ಅವರು ಮಾಡಿದ ಕುತಂತ್ರ ಏನು ಎಂದು ಎಲ್ಲರಿಗೂ ಗೊತ್ತಾಗಿದೆ. ಇಲ್ಲಿ ಅವರು ಬೆಂಗಳೂರಿಗೆ ಬಂದಾಗ ಈ ರಾಜ್ಯಕ್ಕೆ ಆಗಿರತಕ್ಕ ಅನ್ಯಾಯದ ಬಗ್ಗೆ ಹೇಳಿದ್ದೇವೆ. ಆಗ ಕೊಳ್ಳೇಗಾಲದ ಮಾನ್ಯ ಶ್ರೀ ವೆಂಕಟೇಗೌಡರು ಇದ್ದರು. ಹಿಂದೆ ಆವರು ಕೊಟ್ಟಂಥ ಆಶ್ವಾಸನೆಯನ್ನು ಇವತ್ತು ಮುರಿದಿದ್ದಾರೆಂದು ನನ್ನ ಸ್ನೇಹಿತರು ಪ್ರತಿಭಟನೆ ಮಾಡಿದ್ದಾರೆ. ಮಾನ್ಯ ಶ್ರೀ ಕೆ. ಎಲ್. ರಾವ್ ಅವರ ಹಿಂದಿನ ವರ್ತನೆ ಮತ್ತು ಇವತ್ತಿನ ವರ್ತನೆ ಬಗ್ಗೆ ಮಾನ್ಯ ಶ್ರೀ ಆರಸ್‌ರವರು ತಪ್ಪು ತಿಳಿಯಬಾರದು. ಏಕೆಂದರೆ ಮಾನ್ಯ ಶ್ರೀ ಕೆ. ಎಲ್. ರಾವ್ ಅವರು ಪಾರ್ಲಿಮೆಂಟಿನಲ್ಲಿ ಮೊನ್ನೆದಿವಸ ಉತ್ತರ ಹೇಳುವ ಕಾಲದಲ್ಲಿ ಅವರು ಹೇಳಿರುವ ಹೇಳಿಕೆಯನ್ನು ಸ್ಥೂಲವಾಗಿ ಪರಿಶೀಲನೆಮಾಡಿದರೆ ಬಹುಶಃ ನಾವು ನೊಂದ ಹೃದಯದಿಂದ ಹೇಳಬೇಕಾಗಿದೆ. ಅವರು ಮೇಲ್ದರ್ಜೆಯ ಇಂಜನಿಯರ್ ಆಗಿದ್ದಾರೆ, ತಜ್ಞರಾಗಿದ್ದಾರೆ ಈಗ ನೀರಾವರಿ ಸಚಿವರಾಗಿ ಕೇಂದ್ರಸರ್ಕಾರದಲ್ಲಿ ಅಧಿಕಾರ ವಹಿಸಿದಮೇಲೆ ಪ್ರಾಯಶಃ ಈ ದೇಶದಲ್ಲಿ ನಾನಾ ರಾಜ್ಯಗಳಲ್ಲಿರತಕ್ಕ ನದಿಗಳ ಜಗಳ, ನದಿಗಳ ನೀರಿನ ಉಪಯೋಗ-ಇವನ್ನು ನ್ಯಾಯವಾಗಿ ಮಾಡುವುದರಲ್ಲಿ ಬಹಳ ಹೆಚ್ಚಿನ ಫಲವನ್ನು ಅವರಿಂದ ಜನತೆ ಆಶೆಮಾಡಿದ್ದರು. ಇವರು ಇಂಜನಿಯರ್ ಆಗಿ ಕೆಲಸಮಾಡಿದಂಥವರು. ಇವತ್ತು ಮಂತ್ರಿಸ್ಥಾನ ಪಡೆದಮೇಲೆ ಈ ದೇಶದಲ್ಲಿ ಇಂತಹ ನಾನಾ ಸಮಸ್ಯೆಗಳನ್ನು ಮೇಲ್ಕಟ್ಟದ ರೀತಿಯಲ್ಲಿ ಬಗೆಹರಿಸುತ್ತಾರೆಂಬ ಅಭಿಪ್ರಾಯ ಮೂಡಿತ್ತು. ಅವರು ಈಗ ಕ್ಷುಲ್ಲಕ ರಾಜಕಾರಣ ಮಾಡುವುದಕ್ಕೆ ನಿಂತಿದ್ದಾರೆಂದು ಹೇಳಿದರೆ ಅದು ತಪ್ಪಾಗಲಾರದು. ಪಂಚಾಯತಿ ಮಟ್ಟದಲ್ಲಿ ಮಾಡುವ ಹಾಗೆ ಕೇಂದ್ರಸರ್ಕಾರದ ಮಂತ್ರಿಗಳು ಇಲ್ಲಿ ರಾಜಕಾರಣ ಮಾಡುತ್ತಿದ್ದಾರೆಂದು ಹೇಳಿದರೆ ಅದೇನೂ ತಪ್ಪಾಗಲಾರದು. ಅಂತಹ ಮೇಲ್ಪರ್ಜೆಯ ಇಂಜನಿಯರ್ ಇಷ್ಟು ಕೀಳುಮಟ್ಟಕ್ಕೆ ಇಳಿಯಬಾರದು. ಕಪಿನಿಗೆ ತಡೆಯಾಜ್ಞೆ ಕೊಟ್ಟು ನಿಲ್ಲಿಸಬೇಕು ಎಂದು ಹೇಳಿ ಆದರ ಖರ್ಚಿನ ಹಣವನ್ನು ಕೊಡುವುದಕ್ಕಾಗುವುದಿಲ್ಲವೆಂದು ಹೇಳಿದರೆ ಹೇಗೆ ಇದರಿಂದ ೩೦ ಸಾವಿರಎಕರೆಗಳಷ್ಟು ಜಮೀನಿಗೆ ನೀರಾವರಿಯಾಗುತ್ತದೆ ನೀರನ್ನು ಉಪಯೋಗಿಸುವುದಕ್ಕೆ ಅದು ೩ ಕೋಟಿ ರೂಪಾಯಿಗಳ ಪ್ರಾಜೆಕ್ಟ್, ೧೯ ಟಿ. ಎಂ ಸಿ. ಫೀಟ್ ಬದಲಾಗಿ ೧೦ ರಷ್ಟು ಕೆಪಾಸಿಟಿ ಇನ್‌ಕ್ರೀಜ್ ಆಗಿದೆ. ಆದ್ದರಿಂದ ಕೇಂದ್ರ ಸರ್ಕಾರ ಇಷ್ಟು ಹಣವನ್ನು ಒದಗಿಸಿಕೊಡುವುಕ್ಕಾಗುವುದಿಲ್ಲವೆಂದು ಪಾರ್ಲಿಮೆಂಟಿನಲ್ಲಿ ಹೇಳಿದ್ದಾರೆ. ಅಗ್ರಿಮೆಂಟಿನಲ್ಲಿ ಕ್ಲಿಯರ್ ಆಗಿದೆ.ಅಪಕ್ಕೆ ಯಾರ ದಾಕ್ಷಿಣ್ಯವೂ ಬೇಕಾಗಿಲ್ಲ. ಅದು ಈ ರೀತಿ ಇದೆ:

"The Mysore Government shall be at liberty to construct as an offet storage reservoir in addition to what is referred to in Clause 7 of this aggreement on one of the tributaries of Cauvery in Mysore of a capacity not exceeding 60 per cent."

ಇವತ್ತು ನಾವು ಏನು ಕಪಿನಿ ಕಟ್ಟುತ್ತಿದ್ದೆವೆಯೋ ಅಲ್ಲಿ ೩೦ ಟಿ. ಎಂ.ಸಿ. ಫೀಟ್ ನೀರನ್ನು ಉಪಯೋಗಿಸುವುದಕ್ಕೆ ಅವಕಾಶ ಇದೆ. ಆದರೆ ೧೯ ಟಿ. ಎಂ. ಸಿ ಫೀಟ್ ಉಪಯೋಗಿಸುವ ಕಾಲದಲ್ಲಿ ನಾವು ಇವತ್ತು ಆ ಅಗ್ರಿಮೆಂಟನ್ನು ಪರಿಪಾಲನೆ ಮಾಡಿದ್ದೇವೆ. ಮಾನ್ಯ ಶ್ರೀ ಕೆ. ಎಲ್. ರಾವ್‌ರು ಒಳ್ಳೆಯ ತಜ್ಞರಾದ ಇಂಜನೀಯರು ಆಗಿದ್ದಾರೆ. ಅವರಿಗೆ ಅರ್ಥವಾಗುವುದಿಲ್ಲವೆಂದು ಯಾರಾದರೂ ಹೇಳಿದರೆ ಅದಕ್ಕಿಂತ ಮೋಸ ಹೋಗತಕ್ಕದು ಮತ್ತೊಂದು ಇಲ್ಲ. ಇದು ನಿಜವಾಗಿ ಬಹಳ ವಿಷಾದಪಡಬೇಕಾದ ವಿಷಯ. ಅವರು ಈ ಧಾಟಿಯಲ್ಲಿ ಆ ಒಂದು ಅಧಿಕಾರ ಸ್ಥಾನದಲ್ಲಿ ಮುಂದುವರಿಯುವುದಾದರೆ, ಅದರಿಂದ ಈ ದೇಶಕ್ಕೆ ಒಂದು ದೊಡ್ಡ ಅಪಘಾತವಾಗುತ್ತದೆ. ಇವತ್ತು ಅದರಿಂದ ಬಹಳ ದುಷ್ಪರಿಣಾಮವುಂಟಾಗುತ್ತದೆಂದು ನಾನು ಈ ಸಂದರ್ಭದಲ್ಲಿ ತಿಳಿಸುವುದಕ್ಕೆ ಇಚ್ಛೆಪಡುತ್ತೇನೆ.

ಇವತ್ತು ೪೫ ಟಿ. ಎಂ ಸಿ. ಫೀಟ್ ಒಂದು ಲಕ್ಷ ಎಕರೆಗೆ ಬೇಕು. ಇವತ್ತು ಹೇಮಾವತಿಯೊಳಗೆ ನಾವು ಉಪಯೋಗಿಸುವುದು ಕೇವಲ ೨೦ ಟಿ. ಎಂ. ಸಿ. ಫೀಟ್. ಆದ್ದರಿಂದ ನಾವು ಯಾವ ರೀತಿಯಲ್ಲಿ ಈ ಅಗ್ರಿಮೆಂಟ್ ವೈಯಲೇಟ್ ಮಾಡಿದ್ದೇವೊ ನನಗೆ ಗೊತ್ತಾಗಲ್ಲಿಲ್ಲ. ಈ ಅಗ್ರಿಮೆಂಟಿಗೆ ಎಲ್ಲ ರೂಲ್ಸ್‌ಗಳನ್ನು ಅನ್ವಯಿಸಿ ಒಪ್ಪಿಕೊಳ್ಳುವುದಾದರೆ, ಈ ರೀತಿ ಆಗಲಿ ಎಂದು ನಾನು ಹೇಳುತ್ತೇನೆ. ಇವತ್ತು ಮೈಸೂರಿಗೆ ಹಣ ಕೊಡುವುದಿಲ್ಲವೆಂದು ಕೇಂದ್ರಸರ್ಕಾರದವರು ಹೇಳಿದ್ದನ್ನು ಮಾನ್ಯ ಶ್ರೀ ಚನ್ನಬಸಪ್ಪನವರು ಬಹಳ ಚೆನ್ನಾಗಿ ನಿನ್ನೆ ಹೇಳಿದ್ದಾರೆ. ಇವರು ಈಗ ಎಲ್ಲಿ ಹೋಗಿದ್ದಾರೆ ಅಂದರೆ,ನಮ್ಮ ಕುತ್ತಿಗೆ ಹಿಸುಕುವ ಮಟ್ಟಕ್ಕೆ ಹೋಗಿದ್ದಾರೆ. ಅವರು ಹಣ ಕೊಡುವುದಿಲ್ಲವೆಂದರೆ. ಇವತ್ತು ಯಾವುದೇ ಪಕ್ಷ ಅಧಿಕಾರದಲ್ಲಿರಲಿ, ಸರ್ಕಾರ ಆ ಹಣವನ್ನು ಒದಗಿಸುವ ಬಗ್ಗೆ ಮಾಡತಕ್ಕವ್ಯವಸ್ಥೆಗೆ ಎಲ್ಲರೂ ಒಪ್ಪುತ್ತಾರೆಂದು ನಾನು ಹೇಳುತ್ತೇನೆ.ಇದರಲ್ಲಿ

(ಶ್ರೀ ಹೆಚ್. ಡಿ. ದೇವೇಗೌಡ)

ಯಾರೂ ಸಂಶಯಪಡಬೇಕಾಗಿಲ್ಲ. ರಿಸೋರ್ಸಸ್ ಕಮಿಟಿ ಕೊಟ್ಟಿರುವ ಸಲಹೆ ಪ್ರಕಾರ ಅದು ನಡೆಯುತ್ತದೆ. ಕೇಂದ್ರಸರ್ಕಾರ ಹಣ ಕೊಡದೇ ಹೋದರೆ ಪರವಾ ಇಲ್ಲ. ಅದಕ್ಕೆ ಮಣಿಯಬೇಕಿಲ್ಲ. ನಮಗೆ ಯಾವುದೇ ಕಷ್ಟ ಬಂದರೂ ಅನ್‌ರೆಮ್ಯುನರೇಟಿವ್ ವರ್ಕ್ಸ್‌ನ್ನು ನಿಲ್ಲಿಸಿ ಈ ಕೆಲಸ ಮುಂದುವರಿಸುವುದಕ್ಕೆ ನಮ್ಮ ಬೆಂಬಲವನ್ನು ಕೊಡುವುದಕ್ಕೆ ಸಿದ್ಧರಾಗಿದ್ದೇವೆ. ನಾವು ಹಣ ಕೊಡುವುದಿಲ್ಲ, ಕೆಲಸ ನಿಲ್ಲಿಸಬೇಕೆಂದು ಹೇಳಿರುವುದು ಮಾನ್ಯ ಶ್ರೀ ಕೆ. ಎಲ್. ರಾವ್ ಅವರ ಪ್ರಯತ್ನ ಅದನ್ನು ತಿದ್ದುಪಾಟು ಮಾಡಲೇಬೇಕು. ಇನ್ನು ಅಗ್ರಿಮೆಂಟಿನಲ್ಲಿ ಇರುವ ವಾದ ಏನಿದೆಯೋ ಅದರ ಬಗ್ಗೆ, ಕೆಲವು ಮಾತುಗಳನ್ನು ಹೇಳುತ್ತೇನೆ. ನನ್ನ ಅಭಿಪ್ರಾಯದ ಪ್ರಕಾರ ೧೯೨೪ ರ ಅಗ್ರಿಮೆಂಟ್ ಕೇವಲ ಒಂದು ಪ್ರಾಜೆಕ್ಟನ್ನು ಮೈಸೂರಿನಲ್ಲಿ ಕಟ್ಟತಕ್ಕ ಸನ್ನಿವೇಶದಲ್ಲಿ ಉದ್ಭವವಾಗಿರುವ ಒಂದು ಒಪ್ಪಂದ. ಇದನ್ನು ಸಮರ್ಥನೆ ಮಾಡುವುದಕ್ಕೆ ಮದ್ರಾಸಿನ ಪಿ. ಡಬ್ಲ್ಯು. ಡಿ. ಸೆಕ್ರೆಟರಿ ಬರೆದಿರುವ ಒಂದು ಪತ್ರದಲ್ಲಿ ೧೯೨೪ರ ಅಗ್ರಿಮೆಂಟ್ ಹಿಂದೆ ಡೆವಲಪ್ ಮಾಡಿರತಕ್ಕ ಆಚ್ಚುಕಟ್ಟುಗಳು ರಕ್ಷಣೆ ಪಡೆಯುವ ಬಗ್ಗೆ ಮತ್ತು ಮುಂದೆ ಸರ್ಪ್ಲಸ್ ನೀರನ್ನುಹೇಗೆ ಉಪಯೋಗಿಸಿಕೊಳ್ಳಬೇಕೆಂಬ ಬಗ್ಗೆ ಒಂದು ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ. ಅದು ಈ ರೀತಿ ಇದೆ:—

'The Scheme of 1924 agreement has been examined by the legal experts of this State with reference to the question whether it is or is not as comprehensive arrangement dealing with the whole subject of extension of irrigation under Cauvery basin both in Mysore and Madras and it has been decided that the agreement is not exhaustive of thes rights of the two Governments."

The concluding portion of the letter is:

"On general consideration therefore there is nothing to say for the view that all rights of irrigation were covered by 1924 agreement. Hence there is no question of the 1924 agreement being one for sharing of water of Cauvery basin by the two Governments"

ಈ ರೀತಿ ಮದ್ರಾಸಿನ ಪಿ. ಡಬ್ಲ್ಯು. ಡಿ. ಸೆಕ್ರೆಟರಿ ಅವರು ನಮ್ಮ ರಾಜ್ಯಕ್ಕೆ ಬರೆದಿರುವ ಪತ್ರದಲ್ಲಿ ಮತ್ತು ಕೇಂದ್ರ ಸರಕಾರಕ್ಕೆ ೨೩—೫—೬೬ ರಲ್ಲಿ ಬರೆದಿರುವ ಪತ್ರದಲ್ಲಿ ಅವರ ಸಂಶಯವನ್ನು ವ್ಯಕ್ತಪಡಿಸಿದ್ದಾರೆ.

ಇವತ್ತಿನ ದಿವಸ ಒಂದು ಮೂಲ ಪ್ರಶ್ನೆಬಂದಿದೆ. ನಿನ್ನೆ ಮಾನ್ಯ ಚನ್ನಬಸಪ್ಪನವರು ಮಾತನಾಡುವಾಗ ೧೯೨೪ನೇ ಅಗ್ರಿಮೆಂಟಿನ ಪರಿಮಿತಿಯೊಳಗೆ ಪಂಚಾಯಿತಿಗೆ ಹೋಗಬಹುದು ಎಂದು ಹೇಳಿದರು. ಮತ್ತು ಇಂಟರ್‌ಸ್ಟೇಟ್ ವಾಟರ್ ಡಿಸ್‌ಪ್ಯೂಟಿನ ಅವಾರ್ಡ್ ಮೇಲೆ ನಾವು ಹೈಕೋರ್ಟಿಗೆ ಆಗಲೀ, ಸುಪ್ರೀಂಕೋರ್ಟಿಗಾಗಲೀ ಹೋಗಿ ಈ ಅಗ್ರಿಮೆಂಟ್ ವಿಚಾರದಲ್ಲಿ ಪ್ರಶ್ನೆ ಮಾಡುವುದಕ್ಕಾಗುವುದಿಲ್ಲವೆಂಬುದನ್ನು ಸಹ ಹೇಳಿದರು ನನ್ನ ಅಭಿಪ್ರಾಯವೇನೆಂದರೆ ಆ ರೀತಿ ಪಂಚಾಯಿತಿಗೆ ಹೋಗುವುದಕ್ಕೆ ಮುಂಚೆ ೧೯೨೪ ರ ಅಗ್ರಿಮೆಂಟಿನಲ್ಲಿರುವ ನಿಯಮಾವಳಿಗಳನ್ನು ಕೂಲಂಕುಷವಾಗಿ ಪರಿಶೀಲನೆ ಮಾಡಿ ನೋಡುವುದು ಒಳ್ಳೆಯದು. ಬೇಕಾದರೆ ಲಾ-ಡಿಪಾರ್ಟ್‌ಮೆಂಟಿನಿಂದ ಪರಿಶೀಲನೆ ಮಾಡಿಸಿ ನೋಡಲಿ. ಕಾವೇರಿ ಬೇಸಿನ್‌ಲ್ಲಿರುವ ನೀರು ಕೇರಳಾ, ಮದ್ರಾಸ್ ಮತ್ತು ಮೈಸೂರು ಮೂರು ರಾಜ್ಯಗಳಿಗೂ ಹಂಚಲ್ಪಡಬೇಕು ಎಂಬ ವಾದವನ್ನು ಮುಂದೊಡ್ಡುವುದಾದರೆ ಅದರ ಪರಿಮಿತಿಯೊಳಗೆ ೧೯೨೪ರ ಅಗ್ರಿಮೆಂಟ್ ಇದೆಯೇ ಎಂಬುದನ್ನು ಸರ್ಕಾರ ಯೋಚನೆ ಮಾಡಬೇಕಾಗಿದೆ. ಪಂಚಾಯಿತಿಗೆ ಹೋಗುವ ಅಭಿಪ್ರಾಯ ಏನಿದೆ ಅದರ ಬಗ್ಗೆ ಸರ್ಕಾರ ಎಚ್ಚರಿಕೆ ವಹಿಸಬೇಕಾಗಿದೆ. ಆ ರೀತಿ ಹೋದರೆ ಅನುಕೂಲವಾಗುತ್ತದೆಯೇ ಇಲ್ಲವೇ ಎಂಬುದನ್ನು ನೋಡಲು ನೋಡಬೇಕಾಗಿದೆ. ಏಕೆಂದರೆ ೧೯೨೪ರ ಅಗ್ರಿಮೆಂಟ್ ಏನಿದೆ ಅದು ಅಗ್ರಿಮೆಂಟ್ ಅಲ್ಲ ಎಂಬುದಾಗಿ ನಾನು ೧೯೬೪ ರಲ್ಲಿ ಮತ್ತು ೧೯೬೬ರಲ್ಲಿ ಕೂಡ ಹೇಳಿದ್ದೇನೆ. ಸುಪ್ರೀಂಕೋರ್ಟೋ, ೧೯೨೪ ರ ಅಗ್ರಿಮೆಂಟಿನ ಪರಿಮಿತಿಯೊಳಗೆ ನಮ್ಮ ಸರ್ಕಾರಕ್ಕೆ ಅನುಕೂಲವೋ ಅಥವಾ ಇಂಟರ್‌ಸ್ಟೇಟ್ ರಿವರ್ ಡಿಸ್‌ಪ್ಯೂಟ್ ಆಕ್ಟ್ ಪ್ರಕಾರ ನಮ್ಮ ಸರ್ಕಾರಕ್ಕೆ ಅನುಕೂಲವೋ ಎಂಬುದನ್ನು ಪರಿಶೀಲಿಸಬೇಕಾಗಿದೆ. ಈಗಾಗಲೇ ಈ ವಿಚಾರದಲ್ಲಿ ನಮ್ಮ ಮುಖ್ಯಮಂತ್ರಿಗಳು ಉತ್ತಮ ಹೆಜ್ಜೆ ಇಟ್ಟಿದ್ದಾರೆ. ಹೆಚ್ಚಿನ ತಜ್ಞರಾದ ಅಡ್ವೊಕೇಟ್ ಜನರಲ್ ಅವರನ್ನು ಈ ಬಗ್ಗೆ ಪರಿಶೀಲನೆ ಮಾಡಲು ನೇಮಕ ಮಾಡಿದ್ದಾರೆ. ಅವರ ಸಾಮರ್ಥ್ಯದ ಬಗ್ಗೆ ನನಗೆ ಅಪನಂಬಿಕೆ ಇಲ್ಲ. ಆದರೆ ಅವರಿಗೆ ಇರತಕ್ಕಂಥ ಕಾರ್ಯ ಕ್ರಮಗಳ ಜೊತೆಗೆ ೧೯೨೪ ರ ಅಗ್ರಿಮೆಂಟಿನ ತೊಡಕುಗಳನ್ನು ಪರಿಶೀಲನೆ ಮಾಡುವುದಕ್ಕೆ ಕಷ್ಟವಾಗಬಹುದು. ಆದ್ದರಿಂದ ಅವರಿಗೆ ಈ ಕೆಲಸವನ್ನು

ಮಾತ್ರ ಪಹಿಸಿ, ಇಲ್ಲದಿದ್ದರೆ ಇದಕ್ಕಾಗಿ ಇನ್ನೊಬ್ಬ ತಜ್ಞರನ್ನು ನೇಮಕ ಮಾಡಿ. ೫ ಜನ ಚೀಫ್ ಇಂಜಿನಿಯರ್‌ಗಳನ್ನು ಒಳಗೊಂಡಂತೆ ಇದಕ್ಕಾಗಿ ಒಂದು ಸಭೆ ಕಮಿಟಿಯನ್ನು ಮಾಡಿದ್ದೀರಿ.ಅವರು ಒಂದು ವರ್ಷ ಕಾಲ ಕೂತು ಪರಿಶೀಲನೆ ಮಾಡಿ ೫ ವಾಲ್ಯೂಮ್‌ಗಳ ಒಂದು ರಿಪೋರ್ಟ್ ಕೊಟ್ಟಿದ್ದಾರೆ ಇದನ್ನೆಲ್ಲಾ ತಮ್ಮ ಕೆಲಸದೊಡನೆ ಅಡ್ವೊಕೇಟ್ ಜನರಲ್ ಆವರು ಪರಿಶೀಲನೆ ಮಾಡಬೇಕಾದರೆ ಕಷ್ಟವಾಗುತ್ತದೆ. ಆದ್ದರಿಂದ ಅವರಿಗೆ ಈ ಕೆಲಸ ಮಾತ್ರ ಪಹಿಸಿ ಇಲ್ಲದಿದ್ದರೆ ಬೇರೆಯವರನ್ನು ನೇಮಕ ಮಾಡಿ. ಪಂಚಾಯಿತಿಗೆ ಹೋಗುವುದಕ್ಕೆ ಮೊದಲು ೧೯೨೪ರ ಅಗ್ರಿಮೆಂಟಿನ ಪರಿಮಿತಿಯೊಳಗೆ ನಮಗೆ ಎಷ್ಟರಮಟ್ಟಿಗೆ ಅನುಕೂಲವಾಗಬಹುದು ಎಂಬುದರ ಬಗ್ಗೆ ಪರಿಶೀಲನೆ ಮಾಡುವುದು ಒಳ್ಳೆಯದು.ಅವರ ಜೊತೆಗೆ ಇಂಟರ್ ಸ್ಟೇಟ್ ವಾಟರ್ ಡಿಸ್‌ಪ್ಯೂಟ್ ಆಕ್ಟ್ ಪ್ರಕಾರ ಕೂಡ ನಮಗೆ ಎಷ್ಟರಮಟ್ಟಿಗೆ ಅನುಕೂಲವಾಗಬಹುದು ಎಂಬಂಬಗ್ಗೆ ಪರಿಶೀಲನೆ ಮಾಡಬೇಕಾಗಿದೆ. ಈ ಬಗ್ಗೆ ಸರ್ಕಾರದವರು ತಳೆದಿರುವ ನಿಲವು ಏನಿದೆ ಅದುಉಮಾತ್ಮವಾದ ನಿಲುವಾಗಿದೆ. ಹಳೆಯ ಮೈಸೂರಿನ ಜನರಲ್ಲಿ ಈ ಬಗ್ಗೆ ಸಂಶಯ ಮೂಡಿದೆ. ಶ್ರೀ ವೀರೇಂದ್ರ ಪಾಟೀಲರು ಹಳೆಯ ಮೈಸೂರಿನ ಬಗ್ಗೆ ಆಸಕ್ತಿ ಇಟ್ಟುಕೊಂಡಿದ್ದಾರೆಯೇ ಇಲ್ಲವೇ ಎಂಬ ಬಗ್ಗೆ ಪ್ರಚಾರ ನಡೆದಿದೆ. ಆ ಒಂದು ಪ್ರಚಾರ ಕೇಳಿದವರಿಗೆ ಸಂಶಯ ಬರುತ್ತಿದೆ. ಇದು ಸರಿಯಲ್ಲ. ೧೯೫೪-೫೬ರಲ್ಲಿ ಮಾನ್ಯ ಮುಖ್ಯಮಂತ್ರಿಗಳು ಭಾರಿ ನೀರಾವರಿ ಯೋಜನೆಗಳ ಖಾತೆಯನ್ನು ವಹಿಸಿಕೊಂಡಮೇಲೆ ಇಲ್ಲಿಯವರೆಗೂ ಕೂಡ ಕಾವೇರಿ ಬೇಸಿನ್‌ನಲ್ಲಿರತಕ್ಕಂಥ ಯೋಜನೆಗಳನ್ನು ಕೈಕೊಳ್ಳುವುದರಲ್ಲಿ ಅಸಡ್ಡೆಯಿಂದ ವರ್ತಿಸಿಲ್ಲ ಎಂಬುದು ಅಲ್ಲಿ ನಡೆಯುತ್ತಿರುವ ಕಾರ್ಯಕ್ರಮದ ಬಗ್ಗೆ ಗೊತ್ತಾಗುತ್ತದೆ. ಈ ಬಗ್ಗೆ ಜನತೆ ಸಂಶಯ ವ್ಯಕ್ತಪಡಿಸುವುದರಲ್ಲಿ ಹುರುಳೂ ಇಲ್ಲ, ತಿರುಳೂ ಇಲ್ಲವೆಂದು ಹೇಳಬಹುದು. ಕಾವೇರಿ ಬೇಸಿನ್‌ನಲ್ಲಿರತಕ್ಕಂಥ ಯೋಜನೆಗಳನ್ನು ನಾವು ಮುಂದುವರಿಸುತ್ತೇವೆ, ಕೆಲಸ ನಿಲ್ಲಿಸುವುದಿಲ್ಲ ಎಂಬುದಾಗಿ ಮುಖ್ಯಮಂತ್ರಿಗಳು ಏನು ಒಂದು ನಿಲವು ತಳೆದಿದ್ದಾರೆ ಆ ಬಗ್ಗೆ ಬೆಂಬಲ ಕೊಡುವುದಕ್ಕೆ ನಾವು ಸಿದ್ಧರಿದ್ದೇವೆ. ಒಂದು ಪಕ್ಷ ಕೇಂದ್ರ ಸರ್ಕಾರದ ಅನುಮತಿ ಇಲ್ಲದೆ ಯೋಜನೆಗಳನ್ನು ಮುಂದುವರಿಸಿದರೆ ಮಂತ್ರಿಮಂಡಲವನ್ನು ಡಿಸ್‌ಮಿಸ್ ಮಾಡಿ ರಾಷ್ಟ್ರಪತಿಯವರ ಆಡಳಿತವನ್ನು ಜಾರಿಗೆ ತರುತ್ತೇವೆಂದು ಕೇಂದ್ರದವರು ಹೇಳಿದರೂ ಕೂಡ ಆದಕ್ಕೆ ರಾಜ್ಯಸರ್ಕಾರ ಮಣಿಯಬಾರದು ಏನು ಬಂದರೂ ಹೆದರಿಸುವುದಕ್ಕೆ ನಾವು ಸಿದ್ಧರಿದ್ದೇವೆ ಎಂಬುದನ್ನು ನಾವೆಲ್ಲಾ ಒಂದಾಗಿ ತೋರಿಸಬೇಕಾಗಿದೆ. ಈ ಬಗ್ಗೆ ಜನತೆ ಕೂಡ ಎಚ್ಚೆತ್ತಿದ್ದಾರೆ. ರಾಜ್ಯ ಸರ್ಕಾರ ಯಾವ ಹೆದರಿಕೆಗೂ ಮಣಿಯಬೇಕಾಗಿಲ್ಲ. ಏನು ಒಂದು ನಿಲುವನ್ನು ಈಗ ತಳೆಯಲಾಗಿದೆಯೋ ಅದನ್ನು ಬದಲಾವಣೆ ಮಾಡಬಾರದು ಎಂದು ಸರ್ಕಾರದವರಿಗೆ ಹೇಳಿ ನನಗೆ ಮಾತನಾಡುವುದಕ್ಕೆ ಅವಕಾಶ ಕೊಟ್ಟ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನುಮುಗಿಸುತ್ತೇನೆ.

ಶ್ರೀ ಎನ್. ಎ. ಜೆನ್ನೇಗೌಡ, (ಪಾಂಡವಪುರ) — ಸನ್ಮಾನ್ಯ ಅಧ್ಯಕ್ಷರೇ, ಶ್ರೀ ಮಾನ ನಂಜೇಗೌಡರು ಈ ಸಭೆಯ ಮುಂದೆ ತಂದಿರತಕ್ಕಂಥ ಮಸೂದೆಯನ್ನು ಹೃತ್ಪೂರ್ವಕವಾಗಿ ಬೆಂಬಲಿಸುತ್ತಾ ಒಂದೆರಡು ಮಾತಗಳನ್ನು ಹೇಳುತ್ತೇನೆ. ಕಾಲ ಮಿತಿ ಹಾಕಿರುವುದರಿಂದ ಹತ್ತು ನಿಮಿಷದೊಳಗೆ ಮುಗಿಸುವುದಕ್ಕೆ ಪ್ರಯತ್ನಮಾಡುತ್ತೇನೆ. ಭಾರತ ದೇಶದಲ್ಲಿಯೇ ಇತ್ತೀಚೆಗೆ ಒಂದು ವಿಚಿತ್ರ ರೋಗ ಕಾಣಿಸಿಕೊಂಡಿದೆ. ಅದು ರಾಜಕೀಯ ರೋಗ ಎಂದು ಹೇಳಬಹುದು. ಯಾವುದೇ ಮಾತನಾಡಲಿ, ಯಾವ ವಿಚಾರವನ್ನೆ ಚರ್ಚಿಸಲಿ, ಯಾವ ಕ್ರಮವನ್ನೆ ಕೈಕೊಳ್ಳಲಿ, ಆದಕ್ಕೆ ಒಂದು ರಾಜಕೀಯ ಬಣ್ಣ ಕೊಡುವುದು ಪರಿಪಾಠ ಬಂದಿದೆ. ಇತ್ತೀಚೆಗೆ ಕಾಂಗ್ರೆಸ್ ಪಾರ್ಟಿ ಎರಡು ಗುಂಪುಗಳು ಆದಮೇಲೆ ಈ ರಾಜಕೀಯ ರೋಗ ಹೆಚ್ಚಾಗಿದೆ. ಅದರಲ್ಲೂ ಕೇಂದ್ರ ಸರ್ಕಾರದವರು ತಮಗೆ ವಿರುದ್ಧವಾದ ರಾಜ್ಯಗಳ ಮೇಲೆ ಆಗಾಗ್ಗೆ ಬಾಂಬ್‌ಗಳನ್ನು ಹಾಕುವ ಪ್ರವೃತ್ತಿ ಬೆಳೆದುಕೊಂಡುಬರುತ್ತಿದೆ. ಕೇಂದ್ರ ಸರ್ಕಾರ ನಮ್ಮ ರಾಜ್ಯ ಸರ್ಕಾರದ ಬಗ್ಗೆ ಒಂದು ಅಸಮಾಧಾನದ ಮನೋಭಾವನೆಯನ್ನು ತಳೆದಿದೆ ಎನ್ನುವುದಕ್ಕೆ ಸಾಕಷ್ಟು ಪುರಾವೆಗಳು ಇವೆ.ನನಗೆ ಕಂಡಂತೆ ೫ನೇ ಆರ್ಥಿಕ ಆಯೋಗದವರು ನಮ್ಮ ರಾಜ್ಯದ ಮೇಲೆ ಮೊದಲನೆ ಬಾಂಬ್ ಹಾಕಿದರು. ಗಡಿ ವಿವಾದದ ಬಗ್ಗೆ ಎರಡನೆಯ ಬಾಂಬ್ ಹಾಕಲಾಯಿತು. ಈಗ ಕಾವೇರಿ ನೀರಿನ ವಿವಾದದ ಬಗ್ಗೆ ಮೂರನೆಯ ಬಾಂಬ್ ಹಾಕಿ ಜನತೆಯ ಮನಸ್ಸನ್ನು ಅಲ್ಲೋಲಕಲ್ಲೋಲ ಮಾಡುತ್ತಿದ್ದಾರೆ. ಇಂತಹ ವಿಚಾರಗಳಿಗೆ ರಾಜಕೀಯ ಬಣ್ಣಕೊಡದೆ ಆರ್ಥಿಕ ಚಿಂತನೆಯ ಮೂಲಕ ಪರಿಹಾರವನ್ನು ಕಂಡುಹಿಡಿಯುವುದಕ್ಕೆ ನಮ್ಮ ನಾಯಕರುಗಳು ಅಥವಾ ಸರ್ಕಾರಗಳು ಪ್ರಯತ್ನಮಾಡಿದ್ದರೆ ಈ ಕಷ್ಟಗಳು ನಮ್ಮ ಜನರಿಗೆ ಬರುತ್ತಿರಲಿಲ್ಲ ಎಂಬುದು ನನ್ನ ಭಾವನೆ. ೧೯೨೪ನೇ ಅಗ್ರಿಮೆಂಟ್ ಪ್ರಕಾರ ಮೈಸೂರು ಸರ್ಕಾರದವರಿಗೆ ಹಕ್ಕಿದೆಯೇ ಇಲ್ಲವೇ ಎಂಬ ಬಗ್ಗೆ ಹೇಳುವುದಕ್ಕೆ ನಾನು ಹೋಗುವುದಿಲ್ಲ. ಏಕೆಂದರೆ ಆ ಬಗ್ಗೆ ಸಾಕಷ್ಟು ಚರ್ಚೆ ಆಗಿದೆ. ತಮಿಳುನಾಡಿನವರು ಹಕ್ಕಿಲ್ಲವೆಂದರೆ ನಮ್ಮ ಹಕ್ಕು ಹಾರಿಹೋಗವುದಿಲ್ಲ. ಕೋರ್ಟುಗಳು ಹಕ್ಕನ್ನು ಉಳಿಸಿ ಕೊಡುತ್ತವೆ.

ಮೈಸೂರು ರಾಜ್ಯಕ್ಕೆ ಇರಬಹುದಾದ ರೈಪೇರಿಯನ್ ರೈಟ್ಸ್, ರಿಪ್ಟಿಪ್ಟೀವ್ ರೈಟ್ಸ್, ಈ ಕ್ವಾಲಿಟಿ ರೈಟ್ಸ್ ಬಗ್ಗೆ ನಾನು ಮಾತನಾಡುವುದಕ್ಕೆ ಇಷ್ಟಪಡುವುದಿಲ್ಲ. ನನ್ನ ಹಿಂದೆ ಮಾತನಾಡಿದಂತಹ ಮಾನ್ಯ

(ಶ್ರೀ ಎನ್. ಎ. ಚನ್ನೇಗೌಡ)

ಮಿತ್ರರು ಅನೇಕರು ಬಹಳ ವಿಶದವಾಗಿ ಮಾತನಾಡಿದ್ದಾರೆ. ನ್ಯಾಚುರಲ್ ಜಸ್ಟೀಸ್ ಮತ್ತು ಸೋಷಿಯಲ್ ಜಸ್ಟೀಸ್ ಬಗ್ಗೆ ಒಂದು ಅಂಶವನ್ನು ಈ ಸಭೆಯ ಮುಂದೆ ಇಡಬೇಕೆಂದು ಇಚ್ಛೆಪಡುತ್ತೇನೆ. ೧೯೭೪ನೇ ಇಸವಿ ಒಪ್ಪಂದದ ಪ್ರಕಾರ ಮೈಸೂರು ಸರ್ಕಾರ ಕಾವೇರಿ ಜಲಾನಯನದಲ್ಲಿ ಆಫ್ ಸೆಟ್ ರಿಸರ್ವಾಯರುಗಳನು ಕಟ್ಟಿಕೊಳ್ಳುವುದಕ್ಕೆ ಯಾವ ನಿರ್ಬಂಧವೂ ಇಲ್ಲ ಅಂತ ಅನ್ನುವುದು ಸ್ಪಷ್ಟವಾಗಿದೆ. ಆದರೂ ಕೂಡ ಮದ್ರಾಸ್ ಸರ್ಕಾರದವರು ಪದೇ ಪದೇ ೧೯೭೪ನೇ ಅಗ್ರಿಮೆಂಟ್‌ಗೆ ಒಪ್ಪಿಕೊಂಡು ನಡೆಯುವುದಾದರೆ ನಮ್ಮ ಅಭ್ಯಂತರ ಇಲ್ಲ ಎಂದು ಹೇಳುವುದು ವಿಚಿತ್ರವಾಗಿದೆ. ವಿರೋಧ ಇಲ್ಲ ಎಂದು ಹೇಳಿ ಆದರ ಪ್ರಕಾರ ಕೆಲಸ ನಡೆಯುವಾಗ ಡಾ॥ ಕೆ. ಎಲ್. ರಾವ್‌ರವರು ನೀವು ಆ ಕೆಲಸವನ್ನು ನಿಲ್ಲಿಸಿ ಎಂದರೆ ಇದು ರಾಜಕೀಯ ರೋಗ ಎಂದು ಹೇಳಬೇಕೇ ವಿನಹ ಮತ್ತೇನೂ ಅಲ್ಲ. ರೂಲ್ಸ್ ಆಫ್ ರೆಗ್ಯುಲೇಷನ್ ಮಾಡಿರುವುದು ಮೈಸೂರಿನವರಿಗೆ ಬಹಳ ಅನ್ಯಾಯ ಆಗಿದೆ ಎಂದು ಆಗ ನಮ್ಮ ದಿವಾನರಾಗಿದ್ದ ಸರ್ ಎಂ ವಿಶ್ವೇಶ್ವರಯ್ಯನವರು ಮನ ಬಿಚ್ಚಿ ಮನನೊಂದು ಹೇಳಿದ್ದಾರೆ. ಆಗಿನ ಬೇಜವಾಬ್ದಾರಿ ಸರ್ಕಾರ ಅಂದರೆ ದೇಶಿಯ ರಾಜರ ಆಡಳಿತದಲ್ಲಿ ಇದ್ದ ಸರ್ಕಾರ ಸಾರ್ವಭೌಮ ಸರ್ಕಾರದೊಡನೆ ಹೋರಾಡಿ ತನ್ನ ಹಕ್ಕನ್ನು ಸಾಧಿಸಿಕೊಳ್ಳುವುದಕ್ಕೆ ಶಕ್ತಿ ಇಲ್ಲದೆ ಆ ಒಪ್ಪಂದಕ್ಕೆ ಅನಿವಾರ್ಯವಾಗಿ ಅದು ಒಪ್ಪಿಗೆ ಕೊಡಬೇಕಾಯಿತು. ರೂಲ್ಸ್ ಆಫ್ ರೆಗ್ಯೂಲೇಷನ್‌ಗೆ ಒಪ್ಪಿಕೊಂಡಿದ್ದಾರೆ. ಆದರಂತೆ ನದಿ ಪಾತ್ರದಿಂದ ೭೫ ಭಾಗ ಮೈಸೂರಿನಲ್ಲೇರತಕ್ಕ ಪ್ರದೇಶಕ್ಕೆ ನೀರು ಬರಬೇಕಾಗಿದ್ದು ಮದ್ರಾಸಿಗೆ ೨೫ ಭಾಗ ಹೋಗಬೇಕು. ೧೯೭೪ರ ಮೊದಲು ಇದ್ದ ೧೧೯ ಲಕ್ಷ ಎಕರೆಯಿಂದ ೩೬ ಲಕ್ಷ ಜಮೀನು ಮೈಸೂರಿನಲ್ಲಿ ನೀರಾವರಿಯಾಗಿದ್ದು, ೧೨೬ ಲಕ್ಷ ಎಕರೆಯಿಂದ ೨೦೬ ಲಕ್ಷ ಎಕರೆ ನೀರಾವರಿ ಆಗಿ ಮದ್ರಾಸಿಗೆ ಹೆಚ್ಚು ಪ್ರಯೋಜನ ಆಗಿದ್ದರೂ ಈ ಅಂಶವನ್ನು ಡಾ॥ ರಾಯರು ಗಣನೆಗೆ ತೆಗೆದುಕೊಳ್ಳಲಿಲ್ಲ. ೧೯೭೪ರ ಹುಚ್ಚು ಪ್ರವಾಹವನ್ನೂ ಕೂಡ ಗೇಜಿಂಗ್‌ನಲ್ಲಿ ತೆಗೆದುಕೊಂಡು ಆ ಪ್ರಕಾರ ಲಿಮಿಟ್ ಫ್ಲೋಸ್ ಮಾಡಬೇಕೆಂದು ರೂಲ್ಸ್ ಆಫ್ ರೆಗ್ಯೂಲೇಷನ್ ಮಾಡಿರುವುದರಿಂದ ಅನುಚಿತವಾಗಿದೆ. ಇದರಿಂದ ವಿರಿಯಾ ಡೆವಲಪ್‌ಮೆಂಟಿಗೆ ಅನುಕೂಲವಾಗಿಲ್ಲ ಬದಲಾಗಿ ಪ್ರತಿಕೂಲವಾಗಿದೆ ಎಂಬುದು ನಿರ್ವಿವಾದವಾದ ವಿಚಾರ. ಈಗ ಮದ್ರಾಸ್‌ನವರೂ ಕೂಡ ಈ ವಿಚಾರದಲ್ಲಿ ಆಗಾಗ್ಗೆ ವಿರೋಧವನ್ನು ಸೂಚಿಸುತ್ತಾ ಇರುವುದನ್ನು ನೋಡಿದರೆ ತೋಳ ಕುರಿಮರಿ ಕಥೆ, ಜ್ಞಾಪಕಕ್ಕೆ ಬರುತ್ತದೆ. ನೀವು ತಪ್ಪು ಮಾಡಿದ್ದೊ, ಅವರು ತಪ್ಪು ಮಾಡಿದ್ದೊ ಏನಾದರೂ ಆಗಲಿ ನಮ್ಮ ತಪ್ಪಲ್ಲ ಎಂದೂ, ಮೈಸೂರಿನವರು ಕುರಿಮರಿಯಾಗಿರಬೇಕು ಮದ್ರಾಸಿನವರು ತೋಳವಾಗಿರಬೇಕು. ಎಂದು ಎನ್ನುವ ರೀತಿಯಲ್ಲಿ ಡಾ॥ ಕೆ ಎಲ್. ರಾವ್‌ರವರು ಈ ಸಮಸ್ಯೆಯನ್ನು ನೋಡುತ್ತಾ ಇದ್ದಾರೆ. ಶ್ರೀಮಾನ್ ಕೆ. ಎಲ್ ರಾಯರು ಕೇಂದ್ರದಲ್ಲಿ ಭಾರತ ಸರ್ಕಾರದ ಮಂತ್ರಿಯಾಗಿದ್ದಾರೆಯೇ ಹೊರತು ಆಂಧ್ರಪ್ರದೇಶದ ಒಬ್ಬ ಮಂತ್ರಿಯಾಗಿಲ್ಲ ಅಥವಾ ಮದ್ರಾಸಿನ ಒಬ್ಬ ಪ್ರತಿನಿಧಿಯಾಗಿ, ಮಂತ್ರಿಯಾಗಿ ಇಲ್ಲ. ಇಡೀ ಭಾರತದ ನೀರಾವರಿ ಅಭಿವೃದ್ಧಿಯ ಹೊಣೆಯನ್ನು ಹೊತ್ತುಕೊಂಡು ಅವರು ಮಂತ್ರಿಯಾಗಿದ್ದಾರೆ. ಅವರು ಏನಾದರೂ ಒಂದು ತೀರ್ಮಾನವನ್ನು ತೆಗೆದು ಕೊಳ್ಳುವಾಗ ಇಡೀ ರಾಷ್ಟ್ರದ ಒಂದು ಸಮಗ್ರ ಹಿತದೃಷ್ಟಿಯಿಂದ ತೆಗೆದುಕೊಳ್ಳಬೇಕು ಎಂದು ಹೇಳುತ್ತೇನೆ. ಈಗ ಮೈಸೂರಿನವರಿಗೆ ಈ ಕೆಲಸವನ್ನು ನಿಲ್ಲಿಸಿ ನಿಮಗೆ ಇದನ್ನು ಮಾಡಲು ಅವಕಾಶ ಕೊಡುವುದಕ್ಕಾಗುವುದಿಲ್ಲ. ನಿಲ್ಲಿಸದೇ ಇದ್ದರೆ ಹಣ ಕೊಡುವುದನ್ನು ನಿಲ್ಲಿಸುತ್ತೇವೆ ಎಂದು ಅವರು ಬೆದರಿಸಿರುವುದನ್ನು ನೋಡಿದರೆ ಮೈಸೂರು ದೇಶದ ಆರ್ಥಿಕಾಭಿವೃದ್ಧಿಯ ಬಗ್ಗೆ ಯಾವ ವಿಚಾರವನ್ನೂ ಮಾಡಿಲ್ಲ, ಯಾವುದೋ ಒಂದು ರಾಜಕೀಯ ಉದ್ದೇಶವನ್ನಿಟ್ಟುಕೊಂಡು ಈ ರೀತಿ ಆಡಚಣೆಗಳನ್ನು ತಂದೊಡುತ್ತಾ ಇದ್ದಾರೆ ಎಂದು ಹೇಳಬಯಸುತ್ತೇನೆ.

ಇನ್ನೊಂದು ವಿಷಯ. ಈ ಕಾವೇರಿ ಜಲಾನಯನ ಪ್ರದೇಶದಲ್ಲಿ ನೀರಾವರಿಯನ್ನು ಬಿಟ್ಟರೆ ಬೇರೆ ಏನು ಮಾರ್ಗ ಇದೆ ಎಂಬುದನ್ನು ನಾವು ನೋಡಬೇಕಾಗಿದೆ ಫಾರೆಸ್ಟ್ ಇಂಡಸ್ಟ್ರೀಸ್ ಪ್ರಾರಂಭ ಮಾಡೋಣ ಎಂದರೆ ಕೊಡಗಿನಲ್ಲಿ ಭೂಮಿಯು ಶೇಕಡ ೬೮ ಅಷ್ಟು ಅರಣ್ಯ ಸಂಪತ್ತು ಇದೆ, ಮಂಡ್ಯದಲ್ಲಿ ೩ ಪರ್ಸೆಂಟ್ ಇದೆ. ಮೈಸೂರಿನಲ್ಲಿ ೧೧.೨ ಪರ್ಸೆಂಟ್ ಇದೆ ಆದ್ದರಿಂದ ಫಾರೆಸ್ಟ್ ಇಂಡಸ್ಟ್ರೀಸ್ ಮಾಡುವುದಕ್ಕಾಗುವುದಿಲ್ಲ. ಈ ಪ್ರದೇಶದಲ್ಲಿ ಖನಿಜ ಸಂಪತ್ತಿಲ್ಲ. ಬೇರೆ ಇನ್ನಾವ ಮ್ಯಾನುಫ್ಯಾಕ್ಚರಿಂಗ್ ಇಂಡಸ್ಟ್ರೀಸ್‌ನ್ನೂ ಮಾಡುವುದಕ್ಕೆ ಸಾಧ್ಯವಿಲ್ಲ ಇಲ್ಲಿ ಇರತಕ್ಕ ಒಂದೇ ಒಂದು ಸಾಧ್ಯತೆ ಎಂದರೆ ಕಾವೇರಿ ನದಿಗೆ ಅಣೆಕಟ್ಟನ್ನು ಕಟ್ಟಿ ನೀರಾವರಿ ಸೌಲಭ್ಯ ಹೆಚ್ಚಿಸುವುದು ಒಂದೇ ಮಾರ್ಗವಾಗಿದೆ. ಆದ್ದರಿಂದ ಕೇಂದ್ರದ ಮಂತ್ರಿಯಾಗಿರತಕ್ಕ ಶ್ರೀ ಕೆ. ಎಲ್. ರಾವ್‌ರವರು ರೀಜನಲ್ ಇಂಬ್ಯಾಲೆನ್ಸ್‌ನ್ನು ಹೋಗಲಾಡಿಸಬೇಕೆಂಬುದನ್ನು ದೃಷ್ಟಿಯಲ್ಲಿಟ್ಟುಕೊಂಡು ತಮ್ಮ ಒಂದು ತೀರ್ಮಾನವನ್ನು ಮಾಡಬೇಕು ಮತ್ತು ಇದಕ್ಕೆ ಹೆಚ್ಚಿನ ಪ್ರಾಮುಖ್ಯತೆಯನ್ನು ಕೊಟ್ಟು ಕಾರ್ಯಕ್ರಮಗಳನ್ನು ಕೈಕೊಳ್ಳಬೇಕು, ಎಂದು ನಾನಾದರೂ ಒತ್ತಾಯವಾಗಿ ಹೇಳಬಯಸುತ್ತೇನೆ. ಶ್ರೀ ಕೆ. ಎಲ್. ರಾಯರ ಹೇಳಿಕೆ ವಿಕಪಕ್ಷವಾಗಿ ಸಾರ್ವಜನಿಕ ಅಭಿಪ್ರಾಯವನ್ನು ಪ್ರೆಜುಡೀಸ್ ಮಾಡುತ್ತದೆ. ಅಂತಹ ಜವಾಬ್ದಾರಿ ಸ್ಥಾನದಲ್ಲಿರುವವರು ಈರೀತಿ ಹೇಳಿಕೆ ಕೊಡಬಾರದು ಮತ್ತು ನಿಲುವನ್ನು ತೆಗೆದುಕೊಳ್ಳಬಾರದು.

ಶ್ರೀಮಾನ್ ಕೆ. ಎಲ್. ರಾಯರು ಆಂಧ್ರದವರು ಆದ್ದರಿಂದ ನಮಗೆ ಅನ್ಯಾಯ ಮಾಡುತ್ತಾರೆ ಎಂಬ ಒಂದು ರಾಜಕೀಯ ದೃಷ್ಟಿಯಿಂದ ಇಲ್ಲಿ ಮಾತನಾಡುವುದು ಬೇಡ. ನಾವು ಕೂಡ ಮೈಸೂರಿನ ಜನತೆ ಬಹಳ ಹಿಂದುಳಿದಿರುವ ಜನ. ನಾವು ತ್ಯಾಗಕ್ಕೆ ಸಿದ್ಧವಾಗಿಲ್ಲ ಎಂದು ತಿಳಿದುಕೊಳ್ಳಬಾರದು. ಕೇಂದ್ರ ಸರ್ಕಾರದವರು ಈ ದಿವಸ ನಾವು ಈ ಕೆಲಸವನ್ನು ಮುಂದುವರಿಸಿದರೆ ನಿಮಗೆ ಹಣ ಕೊಡುವುದಿಲ್ಲ ಎಂದರೆ ನಮ್ಮ ಸರ್ಕಾರದವರು ಅದಕ್ಕೆ ಹೆದರ ಬೇಕಾಗಿಲ್ಲ. ನಾವು ಬೇಕಾದಷ್ಟು ಕೇಂದ್ರ ತೆರಿಗೆಗಳನ್ನು ವಸೂಲು ಮಾಡಿ ಅವರಿಗೆ ಕೊಡುತ್ತಾ ಇದ್ದೇವೆ, ಆ ತೆರಿಗೆಗಳನ್ನು ಅವರಿಗೆ ನಾವು ಕೊಡುವುದಿಲ್ಲ ಎಂದು ಹೇಳಬಹುದು. ಕೇಂದ್ರ ಸರ್ಕಾರದವರಿಗೆ ಈ ಪ್ರಾಂತ್ಯದ ಆರ್ಥಿಕಾಭಿವೃದ್ಧಿಯನ್ನು ಮಾಡುವುದಕ್ಕೆ ಮನಸ್ಸಿಲ್ಲದಿದ್ದರೆ, ರಾಜಕೀಯ ಅಸ್ತ್ರವನ್ನು ಉಪಯೋಗಿಸಿ ಕೊಳ್ಳುವುದಾದರೆ ಅದೇ ರಾಜಕೀಯ ಅಸ್ತ್ರವನ್ನು ಉಪಯೋಗಿಸಿಕೊಂಡು ನಾವೂ ಕೂಡ ಕೇಂದ್ರ ಸರ್ಕಾರಕ್ಕೆ ಕೊಡಬೇಕಾದ ತೆರಿಗೆಗಳನ್ನು ಕೊಡುವುದಿಲ್ಲ ಎಂದು ಹೇಳಬಹುದು. ಈ ಸಂದರ್ಭದಲ್ಲಿ ಸರ್ಕಾರದವರಿಗೆ ಒಂದು ಭರವಸೆಯನ್ನು ಕೊಡುತ್ತೇನೆ, ಕಾವೇರಿ ಜಲಾನಯನದ ಜನತೆಯ ಪರವಾಗಿ, ಈ ಸಭೆಯ ಸದಸ್ಯನಾಗಿ ಈ ದಿವಸ ಸರ್ಕಾರದವರಿಗೆ ಈ ಮೂಲಕ ನಾನು ಹೇಳುವುದಾದರೂ ಇಷ್ಟೇ; ಯಾವುದೇ ತ್ಯಾಗಕ್ಕಾದರೂ ಕೂಡ ಕಾವೇರಿ ಜಲಾನಯನ ಜನತೆ ಸಿದ್ಧವಾಗಿದ್ದೇವೆ, ಈ ಕೆಲಸವನ್ನು ಮಾತ್ರ ನಿಲ್ಲಿಸಬೇಡಿ. ಏನೇ ಕಷ್ಟ ಬರಲಿ ವಾರ್‌ಘಟಿಂಗ್ ಮೇಲೆ ಇದನ್ನು ಮಾಡಿ ಇದಕ್ಕೆ ನಮ್ಮ ಸಂಪೂರ್ಣ ಬೆಂಬಲವನ್ನು ಕೊಡುತ್ತೇವೆ. ೧೯೭೭ ರಿಂದ ಕೂಡ ಈ ಕಾಂಗ್ರೆಸ್ ಸರ್ಕಾರ ಏನೂ ಮಾಡಲಿಲ್ಲ ಕೃಷ್ಣರಾಜಸಾಗರದಲ್ಲಿ ಡ್ರೆಡ್ಜಿಂಗ್ ಮಾಡಬೇಕಾಗಿತ್ತು, ಅದನ್ನೂ ಕೂಡ ಮಾಡಲಿಲ್ಲ. ನ್ಯಾಯವಾಗಿ ಎಷ್ಟು ನೀರು ನಿಲ್ಲಿಸಬೇಕಾಗಿತ್ತೊ ಅಷ್ಟೂ ಕೂಡ ತಡೆ ಹಿಡಿಯುವುದಕ್ಕೆ ಪ್ರಯತ್ನ ಮಾಡಿಲ್ಲ, ಅಲ್ಲದೇ ನಾನ್ ಪೆಡ್ಯೂಲ್ ರಿವರ್ಸ್‌ನಲ್ಲಿ ಏನು ನೀರಾವರಿ ಕಾಮಗಾರಿಗಳನ್ನು ಕೈಕೊಳ್ಳಬೇಕಾಗಿತ್ತೋ ಅದನ್ನೂ ಕೂಡ ಸ್ವಲ್ಪವೂ ಕೂಡ ಮಾಡಿಲ್ಲ ಇದೆಲ್ಲಕ್ಕೂ ಕೂಡ ಕಾಂಗ್ರೆಸ್‌ನವರ ಆಡಳಿತವೇ ಹೊಣೆ ಎಂದು ಈ ಸಂದರ್ಭದಲ್ಲಿ ಹೇಳಬೇಕಾಗುತ್ತದೆ. ಹೇಳದಿದ್ದರೆ ಕರ್ತವ್ಯ ಲೋಪ ಮಾಡಿದ ಹಾಗಾಗುತ್ತದೆ. ಪ್ರಜಾಪ್ರಭುತ್ವದ ಆಧಾರದ ಮೇಲೆ ಚುನಾಯಿತವಾದ ಈ ಸರ್ಕಾರ ತನ್ನ ಕರ್ತವ್ಯ ಲೋಪ ಮಾಡಿದೆ. ಈಗ ಕೇಂದ್ರ ಸರ್ಕಾರ ಬೇರೆ ಒಂದು ಗುಂಪಿನ ಸರ್ಕಾರ ಆಗಿದೆ ಆದ್ದರಿಂದ ಈ ಒಂದು ಕೂಗು ಮಾಡುವುದು ಎಂಬ ಅಭಿಲಾಷೆಯನ್ನೂ ಜನತೆಯ ಮುಂದೆ ಇಡಬೇಕಾಗಿಲ್ಲ. ಈಗ ನಾವು ಮಾಡಬೇಕಾಗಿರುವುದು ಇಷ್ಟೆ, ಒಂದು ನಿರ್ದಿಷ್ಟವಾದ ನಿಲುವನ್ನು ತೆಗೆದುಕೊಳ್ಳಬೇಕು. ಶ್ರೀ ಕೆ. ಎಲ್. ರಾವ್‌ರವರು ಏನಾದರೂ ಹೇಳಲಿ, ಆರ್ಥಿಕಾಭಿವೃದ್ಧಿಯ ದೃಷ್ಟಿಯನ್ನು ನಮ್ಮ ಸರ್ಕಾರದವರು ಅವರ ಮುಂದೆ ಮಂಡಿಸಲಿ ಅದಕ್ಕೂ ಕೂಡ ಅವರು ಒಪ್ಪದಿದ್ದರೆ ನೀವು ಅವರಿಗೆ ಹೆದರಬೇಕಾಗಿಲ್ಲ, ನಮ್ಮ ಜನತೆ ಎಲ್ಲಾ ತ್ಯಾಗಕ್ಕೂ ಸಿದ್ಧವಾಗಿದ್ದಾರೆ ನಿಮ್ಮ ಬೆನ್ನ ಹಿಂದೆ ಇದ್ದಾರೆ. ಇದರಲ್ಲಿ ಯಾವ ರಾಜಕೀಯ ಭಿನ್ನಾಭಿಪ್ರಾಯವೂ ಇಲ್ಲ, ಎಲ್ಲರೂ ತಮಗೆ ಸಹಕಾರ ಕೊಡುತ್ತಾರೆ ಮತ್ತು ತ್ಯಾಗ ಮಾಡುವುದಕ್ಕೆ ಸಿದ್ಧವಾಗಿದ್ದಾರೆ. ತಾವು ತಮ್ಮ ಜವಾಬ್ದಾರಿಯನ್ನು ಹೊರುವುದಕ್ಕೆ ಈ ಸಮಯದಲ್ಲಿ ಹಿಂಜರಿಯಬೇಡಿ. ಕೇಂದ್ರದಲ್ಲಿ ಬೇರೆ ಒಂದು ಗುಂಪಿನ ಸರ್ಕಾರ ಇದೆ, ನಮ್ಮ ಇನ್ನೊಂದು ಗುಂಪಿನವರು ಮೈಸೂರಿಗೆ ಪ್ರೆಸಿಡೆಂಟ್ ರೂಲ್ಸ್ ತರಿಸಬಹುದು ಅಂತ ತಾವು ಹೆದರಬೇಕಾಗಿಲ್ಲ, ಆ ಪ್ರಾಂತದ ಜನರು ಯಾವ ತ್ಯಾಗಕ್ಕಾದರೂ ಸಿದ್ಧವಾಗಿದ್ದಾರೆ. ಈ ಪ್ರದೇಶದ ಜನತೆಯ ಅಭಿಷ್ಟಕ್ಕೆ ಯಾರೇ ಅಡ್ಡಿ ಬರಲಿ ಅವರು ಶಾಪಗ್ರಸ್ತರಾಗುತ್ತಾರೆ ಎಂದು ಬಿನ್ನೆ ವಿಸಿಕೊಂಡು ಮಾತನಾಡಲು ಅವಕಾಶ ಕೊಟ್ಟ ಅಧ್ಯಕ್ಷರನ್ನು ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

9-30 A.M.

ಶ್ರೀ ಎಂ. ನಾಗಪ್ಪ (ರಾಯಚೂರು).—ಮಾನ್ಯ ಅಧ್ಯಕ್ಷರೇ, ಈಗ ನಾನು ಡಾ॥ ಕೆ ಎಲ್. ರಾಯರು ಕೊಟ್ಟ ಹೇಳಿಕೆಯ ಹಿನ್ನೆಲೆಯೇನು ಮತ್ತು ಅದರ ಪ್ರೊಪ್ರೈಟಿ ಹೇಗಿದೆ ಎಂಬುದರ ಬಗ್ಗೆ ನನ್ನ ಅಭಿಪ್ರಾಯವನ್ನು ವ್ಯಕ್ತಪಡಿಸುತ್ತೇನೆ. ಕಾವೇರಿ ಟೆಕ್ನಿಕಲ್ ಆಸ್ಪೆಕ್ಟ್ ನೀರು ಮೈಸೂರಿಗೆಷ್ಟು ಬರಬೇಕು, ಎಷ್ಟು ಉಪಯೋಗಿಸಬೇಕು, ಮದ್ರಾಸು ಎಷ್ಟು ಉಪಯೋಗಿಸಬೇಕು ಎಂಬ ವಿಚಾರ ಈಗ ಬೇಡ. ಹೊಸ ರಾಜಕೀಯ ಉಲ್ಬಣ ಹುಟ್ಟುವುದಕ್ಕೆ ಮುಂಚೆ ಕೇಂದ್ರದಲ್ಲೂ ಮತ್ತು ರಾಜ್ಯದಲ್ಲೂ ಒಂದೇ ಆಡಳಿತ ಪಕ್ಷವಿತ್ತು, ಮದ್ರಾಸು ರಾಜ್ಯದಲ್ಲೂ ಕೂಡ ಹಿಂದೆ ಕಾಂಗ್ರೆಸ್ ಪಕ್ಷವೇ ಅಧಿಕಾರದಲ್ಲಿತ್ತು, ಈಗ ಡಿಎಂಕೆ ಇದೆ. ಈಗ ರಾಜಕೀಯ ಪರಿಸ್ಥಿತಿ ಉಲ್ಬಣವಾಗಿದೆ. ನಮ್ಮ ರಾಜ್ಯ ಸರಕಾರ ಸಬ್‌ಮಿಸಿವ್ ಆಗಿರುವುದರಿಂದ ನಮಗೆ ಒರಬೇಕಾದ್ದನ್ನು ಕಳೆದುಕೊಂಡಿದ್ದೇವೆ ಎಂಬುದು ನನ್ನ ಅಭಿಪ್ರಾಯ. ಎರಡನೆಯದಾಗಿ ಅಗ್ರಿಮೆಂಟಿನ ಬಗ್ಗೆ ಅಭಿಪ್ರಾಯವನ್ನು ದೇವೇಗೌಡರು ಹೇಳಿದರು. ೧೯೨೪ರ ಅಗ್ರಿಮೆಂಟನ್ನು ೧೯೨೪ರ ಅಗ್ರಿಮೆಂಟಿನ ಬೇಸಿಸ್ ನೋಲೆ ಮಾತಾಡ್ತಾರೆಂದು ಹೇಳಿದರು. ಇದು ರಿವೈಜ್ ಆಗಬೇಕಾದರೆ ಐತಿಹಾಸಿಕವಾದ ಕೆಲವು ಕಾರಣಗಳಿವೆ. ಕೆ. ಆರ್. ಸಾಗರವನ್ನು ಕಟ್ಟುವಾಗ ಮತ್ತು ಎತ್ತರ ಹೆಚ್ಚಿಸಬೇಕಾದಾಗ

(ಶ್ರೀ ಎಂ. ನಾಗಪ್ಪ)

ಮದ್ರಾಸು ಮತ್ತು ಮೈಸೂರು ಸರಕಾರಗಳು ಈ ಅಗ್ರಿಮೆಂಟಿಗೆ ಒಪ್ಪಿದುವು. ಈ ಅಂಗ್ರಿಮೆಂಟಿನ ಒಂದರಿಂದ ೯ರವರೆಗಿರುವ ಕ್ಲಾಜುಗಳನ್ನು ಓದಿದರೆ ಹಿಂದಿನ ಇತಿಹಾಸ ಮಾನ್ಯ ಸದಸ್ಯರಿಗೆ ಗೊತ್ತಾಗುವುದು. ಮಾನ್ಯ ಸದಸ್ಯರು ಹೇಳಿದಂತೆ ಕಾವೇರಿ ನದಿ ಅಥವ ಅದರ ಉಪನದಿಗಳಿಂದ ಬರುವ ನೀರು ಎಷ್ಟು, ಅದರಲ್ಲಿ ಮೈಸೂರು ಎಷ್ಟು ಉಪಯೋಗಿಸಬೇಕು ಮತ್ತು ಮದ್ರಾಸು ಎಷ್ಟು ಉಪಯೋಗಿಸಬೇಕು ಎಂಬುದನ್ನು ಪ್ರಸ್ತಾಪಿಸಿಲ್ಲ, ಅಂದರೆ ಕಾವೇರಿ ವ್ಯಾಲಿಯಲ್ಲಿ ಮೈಸೂರಿಗೆ ಎಷ್ಟು ನೀರು ಸಿಕ್ಕಬೇಕು, ಮದ್ರಾಸಿಗೆ ಎಷ್ಟು ಸಿಕ್ಕಬೇಕು ಎಂಬುದು ಒಪ್ಪಂದದಲ್ಲಿ ಸ್ಪಷ್ಟವಾಗಿ ನಮೂದಾಗಿಲ್ಲ, ಇದಕ್ಕೆ ಒಂದು ಕಾರಣ ಮೊನ್ನೆ ಹಾರಂಗಿ ಇದರಲ್ಲಿ ಸೇರಿಲ್ಲ ಎಂದು ಕೆ. ಎಲ್. ರಾಯರು ಹೇಳಿದ್ದಾರೆ. ಇದರಿಂದ ಕಾವೇರಿ ವ್ಯಾಲಿಯಲ್ಲಿರುವ ನೀರು ಹಂಚಿಕೆ ಯಾವ ದೃಷ್ಟಿಯಿಂದಾಗಬೇಕು ಎಂಬುದು ಈ ಅಂಗ್ರಿಮೆಂಟಿನಲ್ಲಿ ಬರುವುದಿಲ್ಲವೆಂಬುದು ಸ್ಪಷ್ಟವಾಗುವುದು. ಅದು ಕೇವಲ ಕೃಷ್ಣರಾಜಸಾಗರದ ವಿಚಾರ ಅಥವ ನೀರಿಷ್ಟು ಕೊಡಬೇಕು ಎಂಬುದನ್ನು ತಿಳಿಸುವುದು. ಪ್ರಪೋರ್ಷನ್ ಆಫ್ ವಾಟರ್ ಟುಬಿ ಡಿಸ್‌ಚಾರ್ಜ್‌ಡ್ ಫ್ರಾಂದಿ ಕೃಷ್ಣರಾಜ ಸಾಗರ್ ಮಾತ್ರ ಅದು ತಿಳಿಸುವುದು ಕಾವೇರಿ ವ್ಯಾಲಿಯಲ್ಲಿ ಬರುವ ನೀರಿನ ಹಂಚಿಕೆ ಬಗ್ಗೆ ವಾದ ಮಾಡಬೇಕಾದ ಪರಿಸ್ಥಿತಿ ಇದೆ ಮೊದಲು ಮೈಸೂರು ರಾಜ್ಯವು ಮಹಾರಾಜರ ಆಳ್ವಿಕೆಯಲ್ಲಿತ್ತು. ಅದಾದನಂತರ ೫೬ರಲ್ಲಿ ರಾಜ್ಯ ಪುನರ್ವಿಂಗಡಣೆಯಾದನಂತರ ವಿಶಾಲಮೈಸೂರಾಯಿತು. ಆ ಸಮಯದಲ್ಲಿ ಐತಿಹಾಸಿಕ ಹಿನ್ನೆಲೆ ನೋಡಿದರೆ ಮದ್ರಾಸಿನ ಕೆಲವು ಭಾಗ ಮೈಸೂರಿಗೆ ಬಂತು ಕೆಲವು ಭಾಗ ಕೇರಳಕ್ಕೆ ಹೋಯಿತು. ಅಂದರೆ ಕಾವೇರಿ ವ್ಯಾಲಿಯ ವಿಭಾಗದಲ್ಲಿನ ಕೆಲವು ಭಾಗ ಮೈಸೂರು ಮತ್ತು ಕೇರಳಗಳಿಗೆ ಸೇರಿದೆ. ಆದುದರಿಂದ ಮದರಾಸು ಮತ್ತು ಕೇರಳ ಈ ಎರಡು ದೇಶಗಳೂ ಒಪ್ಪಂದಕ್ಕೆ ಭಾಗಿಯಾಗುವುವು. ಇಂದು ಕೃಷ್ಣರಾಜಸಾಗರದಿಂದ ಒಪ್ಪಂದದ ಪ್ರಕಾರ ನೀರು ಹೋದರೂ ಕೇರಳಕ್ಕೆ ಈ ವಿಚಾರದಲ್ಲಿ ಮಹತ್ವವಿಲ್ಲ. ಆದುದರಿಂದ ಒಪ್ಪಂದವೇನಿದೆ ಅದು ಸರಿಯಲ್ಲ, ಕಾವೇರಿ ನೀರಿನ ಹಂಚಿಕೆ ಮತ್ತೆ ಸರಿಯಾಗಿ ಆಗಬೇಕು ಎಂದು ಕೇರಳ ಕೇಳುತ್ತಿದೆ. ಈ ದೃಷ್ಟಿಯಿಂದ ನೋಡಿದರೆ, ಸ್ಟೇಟ್ಸ್ ರೀಆರ್ಗನೈಜೇಷನ್ ಆಕ್ಟ್ ನೋಡಿದರೆ ಏನು ಮಾಡಬೇಕೆಂದು ಗೊತ್ತಾಗುವುದು. ಸ್ಟೇಟ್ಸ್ ರೀಆರ್ಗನೈಜೇಷನ್ ಆಕ್ಟ್ ಪಾಸ್ ಆಗಿ ಅದಕ್ಕೆ ಕನ್‌ಸೆಂಟ್ ಸಿಕ್ಕಿರುವುದು ೫೦ನೇ ಆಗಸ್ಟ್ ೧೯೫೬ರಲ್ಲಿ. ಅದಕ್ಕೆ ಮುಂಚೆ ಪಾರ್ಲಿಮೆಂಟ್ ಎರಡು ಆಕ್ಟ್ ಮಾಡಿತು. ಒಂದು ಆಕ್ಟ್ ೩೩ ಆಫ್ ೧೯೫೬, ೨೮ನೇ ಏಪ್ರಿಲ್ ೧೯೫೬ರಲ್ಲಿ ಜಾರಿಗೆ ಬಂತು. ಇನ್ನೊಂದು ಇಂಟರ್ ಸ್ಟೇಟ್ಸ್ ವಾಟರ್ ಡಿಸ್‌ಪ್ಯೂಟ್ಸ್ ಆಕ್ಟ್ ೧೯೫೬ ಆಕ್ಟ್ ನಂಬರ್ ೪೯ ಆಫ್ ೫೬ ರೀಆರ್ಗನೈಜೇಷನ್ ಆಕ್ಟ್ ಜಾರಿಗೆ ಬರುವಾಗ ಇಂಟರ್‌ಸ್ಟೇಟ್ಸ್ ವಾಟರ್ ಡಿಸ್‌ಪ್ಯೂಟ್ಸ್ ಆಕ್ಟ್ ೧೯೫೬ ಜಾರಿಯಲ್ಲಿತ್ತು ಎಂಬುದು ಸ್ಪಷ್ಟವಾಗಿದೆ. ಇಂಥ ಒಂದು ಸೆಕ್ಷನ್ ಜಾರಿಯಲ್ಲಿರುವಾಗ ರೀಆರ್ಗನೈಜೇಷನ್ ಆಕ್ಟ್ ಮಾಡುವಾಗ ಯಾವುದಾದರೂ ಒಪ್ಪಂದವಾಗಿದ್ದು ಯಾವುದೇ ಅಂತರ ರಾಜ್ಯಗಳ ನೀರಿನ ಬಗ್ಗೆ ಯಾವುದಾದರೂ ಒಪ್ಪಂದ ಹಿಂದೆ ಇದ್ದರೆ ಅದರ ಬಗ್ಗೆ ತಕರಾರು ಬಂದರೆ ಯಾವ ಆಧಾರದ ಮೇಲೆ ನಿರ್ಣಯವಾಗಬೇಕು ಎಂಬುದು ಆ ಸೆಕ್ಷನ್ನಿನಲ್ಲಿ ಸ್ಪಷ್ಟವಾಗಿದೆ. ೧ನೇ ನವೆಂಬರ್ ೧೯೫೬ರ ಒಳಗೆ ಆಗಿರುವ ಒಪ್ಪಂದ ಒಪ್ಪಿಕೊಳ್ಳಬೇಕೇ ಅಥವ ರ್ಯಾಟಿಫಿಕೇಷನ್ ಮಾಡಬೇಕೇ, ಈ ಎರಡೂ ಇಲ್ಲದಿದ್ದರೆ ಒಪ್ಪಂದದ ವಿಚಾರವೇನಾಗುವುದು ಎಂಬುದು ಆ ಸೆಕ್ಷನ್ನಿನಲ್ಲಿ ನಮೂದಾಗಿದೆ. ಆ ಸೆಕ್ಷನ್ನಿನ ಕೆಲವು ಭಾಗವನ್ನು ಈ ಸಭೆ ಗಮನಕ್ಕೆ ತರುತ್ತೇನೆ. ಅದರಲ್ಲಿ ಹೀಗಿದೆ;

"108. (1) Any agreement or arrangement entered into between the Central Government and one or more existing States or between two or more existing States, relating to:

(*a*) the administration maintenance and operation of any Project executed before the appointed day, or

(*b*) distribution of benefits, such as, the right to receive and utilise water or electric power, to be derived as a result of the execution of such project,

which was subsisting immediately before the appointed day shall continue in force, subject to such adaptations and modifications, if any (being of a character not affecting the general operation of the agreement or arrange-

ment as may be agreed upon between the Central Government and the successor State concerned or between the successor States concerned as the case may be by the first day of November, 1957, or, if no agreement is seached by the said date, as may be made therein by order of the Central Government."

ನಮ್ಮ ಸರಕಾರ ಮತ್ತು ಮದ್ರಾಸು ಸರಕಾರ ಕೂಡ ಮಾಡಬೇಕು. ಈ ಒಪ್ಪಂದ ನೋಡಿದರೆ ೧ನೇ ನವೆಂಬರ್ ೧೯೫೭ರ ಒಳಗೆ ಕೇರಳ ನಮ್ಮ ಸರ್ಕಾರ ಮತ್ತು ಮದ್ರಾಸ್ ಸರ್ಕಾರ ಅಗ್ರಿಮೆಂಟನ್ನು ರಾಟಿಫೈಮಾಡಬೇಕು. ಈ ರೀತಿ ೩ ಸರಕಾರಗಳೂ ಮಾಡದಿದ್ದರೆ ರದ್ದಾಯಿತೆಂದು ತಿಳಿಯಬೇಕು ೧ನೇ ನವೆಂಬರ್ ೧೯೫೭ರಲ್ಲಿ ಈ ಒಪ್ಪಂದ ಅಸ್ತಿತ್ವದಲ್ಲಿಲ್ಲ ಎಂಬ ಭಾವನೆ ಬರುವುದು. ಅನಾಮಲಸ್ ಆಗಿ ವಿಚಾರಮಾಡುವಂತಿಲ್ಲ. ಒಪ್ಪಂದವಿದ್ದರೇನು ಮಾಡಬೇಕು, ಇಲ್ಲದಿದ್ದರೇನು ಮಾಡಬೇಕು ಎಂಬುದನ್ನು ವಿಚಾರಮಾಡಬೇಕು. ಒಪ್ಪಂದವಿಲ್ಲವೆಂದು ವಿಚಾರಮಾಡಿದರೆ ನಿರ್ದಿಷ್ಟ ಕಾರ್ಯಕ್ರಮ ತೆಗೆದುಕೊಳ್ಳಬೇಕು ಎಂದು ಹೇಳುವುದು ಸರಿಯಲ್ಲ. ಇಂದು ಒಪ್ಪಂದ ಅಸ್ತಿತ್ವದಲ್ಲಿಲ್ಲ ಎಂದು ಹೇಳಬಹುದು.

ಈಗ ಅಗ್ರಿಮೆಂಟ್ ಅಸ್ತಿತ್ವದಲ್ಲಿಲ್ಲ ಎಂದು ಹೇಳಿದರೆ, ಎರಡನೆ ಅಭಿಪ್ರಾಯವೇನೆಂದರೆ, ಡಾಕ್ಟರ್ ಕೆ. ಎಲ್. ರಾವ್ ಅವರು ಹೇಳಿದಂತೆ ನಾವು ಈ ವಿಷಯವನ್ನು ನೋಡಬೇಕಾಗಿದೆ. ಮೈಸೂರು ಒಪ್ಪದೆ ಇದ್ದರೆ ಟ್ರಿಬ್ಯುನಲ್ಲಿಗೆ ಹೋಗುತ್ತೇವೆಂದು ಹೇಳಿದ್ದಾರೆ. ಟ್ರಿಬ್ಯುನಲ್‌ಗೆ ಹೋಗುತ್ತೇನೆಂದು ಅವರೇ ಹೇಳುತ್ತಿದ್ದಾರೆ. ಒಪ್ಪದೆ ಇದ್ದರೆ ಟ್ರಿಬ್ಯುನಲ್‌ಗೆ ಹೋಗುತ್ತೇವೆಂದರೆ. ಅಗ್ರಿಮೆಂಟ್ ಕ್ಲಾಜ್ ಪ್ರಕಾರ ಆರ್ಬಿಟ್ರೇಷನ್ನಿಗೆ ಹೋಗತಕ್ಕುದು. ಯಾವಾಗ ಅಗ್ರಿಮೆಂಟ್ ಇಲ್ಲ ಎಂದು ಹೇಳುತ್ತಾರೆ ಆವಾಗ ಟ್ರಿಬ್ಯುನಲ್ ಪ್ರಶ್ನೆಯೇ ಬರುವುದಿಲ್ಲ. ಆದು ಇಂಟರ್ ಸ್ಟೇಟ್ ವಾಟರ್ ಡಿಸ್‌ಪ್ಯೂಟ್ಸ್ ಆಕ್ಟ್ ೧೯೫೬ರಲ್ಲಿದೆ. ಅಗ್ರಿಮೆಂಟ್ ಕ್ಲಾಜ್ ೧೦ (೧)ರಲ್ಲಿ ಒಂದು ಪಂಚಾಯಿತಿಗೆ ಹಾಕಬೇಕು ಎಂಬ ವಿಧಿ ಆದರಲ್ಲಿದೆ. ಅಗ್ರಿಮೆಂಟ್ ಪ್ರಕಾರ ನಾವೇ ನಮಗೆ ಬೇಕಾದವರನ್ನು ನೇಮಿಸ ಬಹುದು. ನಮಗೆ ಇಬ್ಬರಿಗೂ ಒಪ್ಪಿಗೆಯಾಗದೆ ಇದ್ದರೆ ಕೇಂದ್ರ ಸರ್ಕಾರ ಅಗ್ರಿಮೆಂಟಿನಲ್ಲಿ ಹೇಳಿರುವಂತೆ ನಡೆಯಬೇಕು. ನನ್ನ ಅಭಿಪ್ರಾಯದಲ್ಲಿ ಅಗ್ರಿಮೆಂಟ್ ಇಲ್ಲ ಎಂದು ಭಾವಿಸುತ್ತೇನೆ ಅಗ್ರಿಮೆಂಟ್ ಇಲ್ಲ ಅಂದ ಮೇಲೆ ಕೇಂದ್ರ ಸರ್ಕಾರಕ್ಕೆ ಇಂಥ ಒಂದು ಅಧಿಕಾರವಿದೆಯೇ, ಇಂಟರ್‌ಸ್ಟೇಟ್ ವಾಟರ್ ಡಿಸ್‌ಪ್ಯೂಟ್ಸ್ ೧೯೫೬ರ ಪ್ರಕಾರ ಒಂದು ಟ್ರಿಬ್ಯುನಲ್ ನೇಮಕ ಮಾಡತಕ್ಕ ಅಧಿಕಾರವುಂಟೇ ಎನ್ನುವುದನ್ನು ಸ್ಪಷ್ಟಪಡಿಸುತ್ತೇನೆ ಈ ಆಕ್ಟ್‌ನಲ್ಲಿ ಸೆಕ್ಷನ್ ೩ ಬಹಳ ಮುಖ್ಯವಾದುದು.

The Inter-State Water Disputes Act 1956 :

3. If it appears to the Govenment of any State that a water dispute with the Government of any other state has arisen or is likely to arise by reason of the fact that the interests of the State or of any of the inhabitants thereof in the waters of an inter-State river or river valley have been or are likely to be affected prejudicially by :

(a) any executive action, legislation, taken or proposed to be taken or passed by the other State ;

ಇದಂತೂ ಬರುವುದಿಲ್ಲ

(b) failure of the other State to operate or exercise any of the powers with respect to the use, distribution or control of such waters

.....

ಇದೂ ಅದರಲ್ಲಿ ಬರುವುದಿಲ್ಲ.

(c) failure of the other State to implement the terms of any agreement relating to the use distribution or control of such waters

ಇಲ್ಲಿ ಬರತಕ್ಕ ಶಬ್ದಗಳು,

(ಶ್ರೀ ಎಂ. ನಾಗಪ್ಪ)

"Use" distribution and "control" ಈ ಮೂರು ವಿಷಯಗಳನ್ನು ಟ್ರಿಬ್ಯುನಲ್‌ಗೆ ರೆಫರ್ ಮಾಡುಬಹುದು. ಆಗ್ರಿಮೆಂಟ್ ಬೇಸಿಸ್ ಮೇಲೆ ಸೆಕ್ಷನ್ 3 (3) ಪ್ರಕಾರ ಮಾಡುತ್ತೇವೆಂದು ಹೇಳ ಬಹುದು. ನಮ್ಮ ಆಗ್ರಿಮೆಂಟಿನಲ್ಲಿ ಇರತಕ್ಕುದು ಕ್ಲಾಜ್ 2 ಅದನ್ನು ದಯವಿಟ್ಟು ನೋಡಬಹುದು.

Agreement : 7. "Whereas as a result of such negotiations, certain rules of regulation of the K. R S. were framed as agreed to by the Chief Engineers of the Mysore and Madras Government on the 26th day of July 1921, such rules of regulation forming annexure 2 of this agreement..... ..."

ಈ ಇಡೀ ಆಗ್ರಿಮೆಂಟ್ ಏಕೆ ಆಗಿದೆ ಎಂದರೆ

for regulation of the water from Krishnarajasagar to downward areas,

how much water is to be released ?

So it is regulation of water between Madras Government and Mysore Government. It is not for the *use, distribution or control.*

How much water has to be used in Cauvery valley, how much water is to be distributed in cauvery valley connot come under the purview of section 3 (c) of the Inter State Water Disputes Act.

ಅದಕ್ಕಾಗಿ ಡಾಕ್ಟರ್ ಕೆ. ಎಲ್. ರಾವ್ ಅವರು ಈ ವಿಷಯದಲ್ಲಿ ಏನು ಹೇಳುತ್ತಿದ್ದಾರೆ ಅದ ಸರಿಯಾದುದಲ್ಲ. ಹಾಗಿದ್ದರೆ ಈಗ ಬಂದಿರತಕ್ಕುದು ಇಡೀ ಕಾವೇರಿ ಕಣಿವೆ ಬಗ್ಗೆ. ಕಾವೇರಿ ಕಣಿವೆಯಲ್ಲಿ ಮೈಸೂರು ರಾಜ್ಯಕ್ಕೆ ಒರತೆಕ್ಕ ನೀರಿದೆ, ಮದ್ರಾಸಿಗೆ ಹೋಗತಕ್ಕ ನೀರಿದೆ, ಕೇರಳಕ್ಕೆ ಹೋಗತಕ್ಕದ್ದೂ ಇತ್ತು. ಇದಕ್ಕೂ ಸಂಬಂಧಪಡುವಂಥ ಒಂದು ಕಾನೂನನ್ನು ಕೇಂದ್ರ ಸರ್ಕಾರದವರು ಮಾಡಿದ್ದಾರೆ.

River Boards Act 1956 – Act 49 of 1956. important section 4 (1) therin Reads thus :

> "The Central Government may on request received in this behalf from a State Government or otherwise by notification in the Official Gazette, establish a river board for advising the Governments interested inrelation to such matters concerning the regulation"....." regulation" is important "or development of the inter-state River or river valley or any specific part thereof, and for performing such other functions as may be specified in the notification; and different Boards may be established for different rivers or river valley".

ಇಲ್ಲಿ ನಮಗೆ ಒಂದಿರತಕ್ಕ ನ್ಯಾಯವನ್ನು ನೋಡಲಿಕ್ಕೆ ಹೋದರೆ ರೆಗ್ಯುಲೇಷನ್ ಆಫ್ ವಾಟರ್‌ನಲ್ಲಿ ಡಿಸ್‌ಪ್ಯೂಟ್ ಬಂದಿದೆ. ಸೆಕ್ಷನ್ 4 (1)ರ ಪ್ರಕಾರ ಕಾವೇರಿ ಕಣಿವೆಯಲ್ಲಿ ಬರತಕ್ಕ ಪ್ರತಿಯೊಂದು ಅಂಶ ನೀರು ಯಾರಿಗೆ ಎಷ್ಟು ಸೇರಬೇಕು ಎನ್ನುವ ನಿರ್ಣಯ ಕೊಡತಕ್ಕ ಅಧಿಕಾರ ಬೋರ್ಡಿಗೆ ಉಂಟು.

Section 22 — Arbitration —

ಇದನ್ನು ನೋಡಿದರೆ ಇನ್ನಷ್ಟು ಸ್ಪಷ್ಟವಾಗುತ್ತದೆ.

"Where any dispute or difference arises between two or more Governments interested with respect of any other matter covered by this and touching, arising out of any or the Government interested and in such form and in such matter as may be prescribed; refer the matter in dispute to arbitration."

ನಾವು ಆರ್ಬಿಟ್ರೇಷನ್ ಎನ್ನುವ ಶಬ್ದ ತೆಗೆದುಕೊಂಡರೆ ರೆಗ್ಯುಲೇಷನ್ ಆಫ್ ವಾಟರ್ ಅಗ್ರಿಮೆಂಟ್ಸ್‌ನ ಪ್ರಕಾರ ಆರ್ಬಿಟ್ರೇಷನ್‌ನಲ್ಲಿ ಬರುತ್ತದೆ. ಆ ದೃಷ್ಟಿಯಿಂದ ಆರ್ಬಿಟ್ರೇಷನ್‌ಗೆ ಕಾನೂನು ಪ್ರಕಾರ ಒಂದು ಬೋರ್ಡ್ ರಚನೆ ಮಾಡಬೇಕು ಮತ್ತು ನೀರನ್ನು ಯಾವ ದೃಷ್ಟಿಯಿಂದ ಹಂಚಿಕೆ ಮಾಡಬೇಕು ಎನ್ನುವುದು ಮಾತ್ರ ಈ ಕಾಯದೆಯಲ್ಲಿ ಬರುತ್ತದೆ. ಆ ದೃಷ್ಟಿಯಿಂದ ನಾವು ನೋಡಿದಾಗ ರಿವರ್ ಬೋರ್ಡ್ಸ್ ಆಕ್ಟ್ ೧೯೫೬ ಸೆಕ್ಷನ್ ೪(೧) ಪ್ರಕಾರ ಇಡೀ ಮೈಸೂರು ರಾಜ್ಯ, ಮದ್ರಾಸ್ ಮತ್ತು ಕೇರಳ ರಾಜ್ಯಗಳಿಗೆ ಸಂಬಂಧ ಪಟ್ಟಂತೆ ಒಂದು ಬೋರ್ಡ್ ಮಾಡುವುದು ಸರಿಯಾದ ಮಾರ್ಗ. ಅದಕ್ಕೆ ಪಂಚಾಯಿತಿ ಎಂದು ಕರೆಯುರಿ ಏನಾದರೂ ಹೆಸರಿನಿಂದ ಕರೆಯಿರಿ ಆ ದೃಷ್ಟಿಯಿಂದ ಆರ್ಬಿಟ್ರೇಷನ್ ಮಾಡಿದರೆ ಒಳ್ಳೆಯದು.

Section 8 : Inter State Water Disputes Act 1956 spescifially says :

"Notwithstanding anything contained in section 3 or ection 5, no reference shall be made to the tribunal and no dispute that may arise regarding any matter which may be referred to arbitration under the River Boards Act 1956..."

ಎಂದರೆ ರಿವರ್ ಬೋರ್ಡ್ಸ್ ಆಕ್ಟ್ ಪ್ರಕಾರ ಮಾಡಿದಂಥ ಆರ್ಬಿಟ್ರೇಷನ್ನಿಗೆ ಯಾವ ವಿಷಯ ಹೋಗ ಬೇಕು ಎನ್ನುವ ನಿರ್ಣಯಕ್ಕೆ ಬಂದರೆ ಅದು ಸರಿಯಾದ ನಿರ್ಣಯ. ಆದರೆ ಅದಕ್ಕಾಗಿ ಇಂಟರ್‌ಸ್ಟೇಟ್ ವಾಟರ್ ಡಿಸ್‌ಪ್ಯೂಟ್ಸ್ ಆಕ್ಟ್ ಪ್ರಕಾರ ಟ್ರಿಬ್ಯುನಲ್ ಮಾಡುವುದಕ್ಕೆ ಬರುವುದಿಲ್ಲ ಎನ್ನುವಂಥ ಸ್ಪೆಸಿಫಿಕ್ ಪ್ರಾವಿಜನ್ ಆಕ್ಟ್‌ನಲ್ಲಿದೆ. ಆ ದೃಷ್ಟಿಯಿಂದ ನಾವು ಡಾಕ್ಟರ್ ಕೆ. ಎಲ್. ರಾವ್ ಅವರ ಹೇಳಿಕೆಯನ್ನು ನೋಡಿದರೆ ಅವರಿಗೆ ವಾಸ್ತವಿಕವಾದ, ಸರಿಯಾದ ಮಾಹಿತಿಯನ್ನು ಕಾಯದೆ ಪ್ರಕಾರ ಕೇಂದ್ರ ಸರ್ಕಾರ ದವರು ಮಾಡಿಕೊಟ್ಟಿಲ್ಲ ಅಥವಾ ಅವರು ಅಂಥ ಒಂದು ಕಾಯದೆಯ ಸಹಕಾರವನ್ನು ಕೇಂದ್ರದಲ್ಲಿ ಪಡೆದಿಲ್ಲ. ಅವರು ಹೇಳತಕ್ಕ ಮಾತುಗಳು ವಿಶೇಷ ಕಾಂಟ್ರಡಿಕ್ಟರಿಯಾಗಿವೆ. ಅವರು ನಮಗೆ ಒಂದು ಬೆದರಿಕೆಯನ್ನೂ ಹಾಕಿದ್ದಾರೆ. ಈಗ ನೀವು ಈ ಅಗ್ರಿಮೆಂಟ್ ಪ್ರಕಾರ ನಡೆಯಲಿಕ್ಕೆ ಒಪ್ಪದೆ ಇದ್ದರೆ, ಕೆಲಸವನ್ನು ನಿಲ್ಲಿಸದೆ ಇದ್ದರೆ ಕೇಂದ್ರ ಸರ್ಕಾರದವರು ಅದಕ್ಕೆ ತಡೆಕೊಡುತ್ತೇವೆಂದು ಹೇಳದೆ ಇದ್ದರೂ ಆ ಕೆಲಸಗಳಿಗೆ ಹಣವನ್ನು ಕೊಡುವುದಿಲ್ಲ ಎನ್ನುವ ಮಾತನ್ನು ಹೇಳಿದ್ದಾರೆ. ಈಗಾಗಲೇ ಹಿರಿಯ ಸದಸ್ಯರಾದ ಶ್ರೀಮಾನ್ ಚನ್ನ ಬಸಪ್ಪ ನವರು ಹೇಳಿದ್ದಾರೆ, ಈಗ ಪ್ಲಾನಿಂಗ್ ಕಮಿಷನ್ ಆಗಲೀ, ಅಥವಾ ಸೆಂಟ್ರಲ್ ವಾಟರ್ ಅಂಡ್ ಪವರ್ ಕಮಿಷನ್ ಆಗಲೀ ಇವೆರಡೂ ಸ್ಯಾಚ್ಯೂಟರಿ ಬಾಡೀಸ್ ಆಲ್ಲ, ಇವು ಯಾವುದಾದರೂ ಕಾನ್‌ಸ್ಟಿಟ್ಯೂಟ್ ಆಗಬೇಕಾಗಿದ್ದರೆ ರಿವರ್ ಬೋರ್ಡ್ಸ್ ಆಕ್ಟ್ ಪ್ರಕಾರ ಆಗ ಬೇಕಾಗಿತ್ತು ಅಥವಾ ಇಂಟರ್ ಸ್ಟೇಟ್ ವಾಟರ್ ಡಿಸ್‌ಪ್ಯೂಟ್ ಆಕ್ಟ್ ಪ್ರಕಾರ ಆಗಬೇಕಾಗಿತ್ತು. ಇವೆರಡೂ ಬಾಡೀಸ್ ಕಾನ್‌ಸ್ಟಿಟ್ಯೂಟ್ ಆಗಿದ್ದು ಇವೆರಡೂ ಕಾಯದೆಯಲ್ಲಿ ಬರುವುದಿಲ್ಲ. ನೀರು ಹಂಚಿಕೆಯಲ್ಲಿ ಮಾಡಬೇಕಾದ ಅಧಿಕಾರ, ಕೇಂದ್ರ ಸರ್ಕಾರ ಕೊಟ್ಟಿರುವುದು, ಇವೆರಡೂ ಕಾಯದೆಗಳು ಆಸ್ತಿತ್ವದಲ್ಲಿ ಬಂದಿದೆ. ಸಂವಿಧಾನದ ೨೬೨ನೇ ಆರ್ಟಿಕಲ್ ಪ್ರಕಾರ ಇದಾಗಿದೆ ಎಂದು ನಾನು ಭಾವಿಸಿದ್ದೇನೆ.

Article 262 :

"Parliament may by law provide for adjudication of any dispute or complaint with respect of the use distribution or control of the waters of any inter-State River or River valley..."

ಈ ಎರಡು ಕಾಯದೆ ಇರತಕ್ಕ ಪರಿಸ್ಥಿತಿಯಲ್ಲಿ, ಸಿಡಬ್ಲ್ಯೂಸಿ ಅಗಲಿ ಪ್ಲಾನಿಂಗ್ ಕಮಿಷನ್ ಆಗಲಿ ಕಾಯದೆಯ ಕಕ್ಷೆಯಲ್ಲಿ ಬರುವುದಿಲ್ಲ, ಅವರು ಕೊಟ್ಟಂಥ ನಿರ್ಣಯ ನಮ್ಮ ಮೇಲೆ ಹೇರತಕ್ಕಂಥಾದ್ದು ಸರಿಯಲ್ಲ, ಅದಕ್ಕೆ ನಾವು ಭಾಗಿಗಳಾಗಬೇಕು ಎಂಬುದು ಸರಿಯಲ್ಲ. ಇವರಲ್ಲಿ ಕೇಂದ್ರ ಸರಕಾರ ಹಸ್ತಕ್ಷೇಪ ಮಾಡಿ ತನ್ನ ಅಧಿಕಾರ ದುರುಪಯೋಗ ಮಾಡುತ್ತಿದೆ ಎಂದು ನಾನು ಹೇಳುತ್ತೇನೆ. ಆರ್ಟಿಕಲ್ ೨೬೨

(ಶ್ರೀ ಎಂ. ನಾಗಪ್ಪ)

ಪ್ರಕಾರ ಆಡ್ಮಿನಿಸ್ಟ್ರೇಷನ್ ಪವರ್ ಕೇಂದ್ರಕ್ಕೆ ಇದೆ. ಕೇಂದ್ರ ಸರಕಾರ ಇರತಕ್ಕಂಥ ಪ್ರೊವಿಜನ್ನಿನಿಂದ ಅಧಿಕಾರವನ್ನು ನಮ್ಮ ಮೇಲೆ ನಡೆಸಬಹುದು, ಆಜ್ಞೆ ಕೊಡಬಹುದು. ೨೫೬ ಆರ್ಟಿಕಲ್ ಮಹತ್ವದ್ದಾಗಿದೆ. ಅದು ಹೀಗಿದೆ :

> "256. Administrative relations :— The executive power of every State shall be so exercised as to ensure compliance with the laws made by parliament and any existing laws which apply in the State. The executive power of the Union Government shall extend to the giving of such directions to a State as may appear to the Goverment of India to be necessary for the purpose."

ಇದರ ಇಂಟರ್‌ಪ್ರಿಟೇಷನ್‌ಗೆ ನಾನು ಮಾಡುವುದಕ್ಕೆ ಹೋಗುವುದಿಲ್ಲ. ಇದರ ಇಂಟರ್‌ಪ್ರಿಟೇಷನ್ ಕಲಕತ್ತಾ ಹೈಕೋರ್ಟ್ ಎ ಐ ಆರ್ ೧೯೫೯ ಪೇಜ್ ೫೦೬ ನಲ್ಲಿ ಮಾಡಿದ್ದಾರೆ. ಇಂಟರ್ ಸ್ಟೇಟ್ ವಾಟರ್ ಡಿಸ್‌ಪ್ಯೂಟ್ ಹಾಗೂ ರಿವರ್ ಬೋರ್ಡ್ ಆಕ್ಟಿನಲ್ಲಿ ಕೇಂದ್ರ ಸರಕಾರಕ್ಕೆ ಅಧಿಕಾರ ಕೊಟ್ಟಿದ್ದು ಅದನ್ನು ಚಲಾಯಿಸಬಹುದು. ರಾಜ್ಯ ಸರಕಾರದ ಮೇಲೆ ಪ್ರತಿಬಂಧಕ ಅಧಿಕಾರ ಕೊಟ್ಟಿದ್ದರೆ ಮಾತ್ರ ಕೇಂದ್ರ ಸರಕಾರ ಕ್ರಮ ಕೈಕೊಳ್ಳ ಕೂಡದು ಎಂದು ಹೇಳಬಹುದು, ಹಾಗೆಆಜ್ಞೆ ಕೊಡಬಹುದು. ಈ ಎರಡೂ ಆಕ್ಟಿನಲ್ಲಿ ಅಂಥ ಅಧಿಕಾರ ಕೇಂದ್ರ ಸರಕಾರಕ್ಕೆ ಕೊಟ್ಟಿಲ್ಲ. ಅದರ ಇಂಟರ್ ಪ್ರಿಟೇಷನ್ ಈ ರೀತಿ ಇದೆ :

A. I. R. 1959 (Calcutta) Page 506 :

" Held further on the question whether the writ could issue upon Respondent N. 3, namely, the State of West Bengal, that according to Article 256 the executive power of every State is to be exercised not so as to comply with arbitrary direction of the Government of India in exercise of its executive power. The State Government is only bound to comply with the direction of the Government of India so as to ensure compliance with the laws made by Parliament or any other law in existence., If these directions are issued under any laws that are made by Parliament then only that order issued by the Central Government is binding on the State or else we shall take it as a waste paper.

ಅಂಥ ಆಜ್ಞೆ ಕೇಂದ್ರ ಸರಕಾರ ಕೊಡತಕ್ಕಂಥ ಪರಿಸ್ಥಿತಿಯಲ್ಲಿಲ್ಲ. ಕೆ. ಎಲ್. ರಾವ್ ಅವರೇ ಇರಲಿ ಕೇಂದ್ರ ಮಂತ್ರಿ ಪಂಡಿತ್ ಇರಲಿ ಅಂಥ ಆಜ್ಞೆ ಕೊಟ್ಟರೆ ಅದನ್ನು ಉಲ್ಲಂಘನೆ ಮಾಡುವುದು ಕಾನೂನಿಗೆ ವಿರುದ್ಧವಾಗುವುದಿಲ್ಲ ಆದುದರಿಂದ ಕೆ ಎಲ್. ರಾವ್ ಅವರ ಹೇಳಿಕೆ ಕಾನೂನಿದೆ ಪ್ರಕಾರ ಇಲ್ಲ. ಅದು ಮೈಸೂರು ರಾಜ್ಯಕ್ಕೆ ವಿರೋಧವಾಗಿಗೆ ಆಲ್ಲದೆ ಕೆಟ್ಟ ಪರಿಣಾಮ ಉಂಟು ಮಾಡುತ್ತದೆ. ದಯವಿಟ್ಟು ಅದನ್ನು ಅವರು ಪುನರ್ ವಿಮರ್ಶಿಸಿ ಅದನ್ನು ಪರಿಶೀಲಿಸಬೇಕು ಮತ್ತು ವಿವೇಚಿಸಿ ನೋಡಿ ತೀರ್ಪು ಕೊಡಬೇಕು ಎಂದು ಕೇಳುತ್ತೇನೆ. ಮಾನ್ಯ ಅಧ್ಯಕ್ಷರು ನನಗೆ ಮಾತನಾಡಲು ಈ ಸನ್ನಿವೇಶ ಒದಗಿಸಿಕೊಟ್ಟದ್ದಕ್ಕೆ ಅವರನ್ನು ವಂದಿಸಿ ನನ್ನ ಮಾತು ಮುಗಿಸುತ್ತೇನೆ.

ಶ್ರೀ ಬಿ ದೊಡ್ಡಬೋರೇಗೌಡ (ಶ್ರೀರಂಗಪಟ್ಟಣ) : ಸನ್ಮಾನ್ಯ ಸಭಾಧ್ಯಕ್ಷರೇ, ಕಾವೇರಿ ಕಣಿವೆ ಯೋಜನೆ ಕುಂಠಿತವಾಗಿ ಅವ್ಯವಸ್ಥಿತವಾಗಿ ಹಳೇ ಮೈಸೂರು ಭಾಗದ ಒಂದೂ ಕಾಲು ಕೋಟಿ ಜನಕ್ಕೆ ಮಹದನ್ಯಾಯವಾಗಿದೆ. ೧೯೪೭ ರಿಂದ ಇಲ್ಲಿಯವರೆಗೆ ಆಳುವ ಪಕ್ಷದ ಎಲ್ಲಾ ಮಂತ್ರಿಮಂಡಲಗಳವರು ಈ ವಿಚಾರದಲ್ಲಿ ಪೂರ್ಣ ಅನ್ಯಾಯ ಮಾಡಿದ್ದಾರೆ. ಮುಂದಿನ ಪೀಳಿಗೆಯ ಜನ ಇವರನ್ನು ಶಪಿಸುತ್ತಾರೆ. ಮೂರು ಪಂಚವಾರ್ಷಿಕ ಯೋಜನೆಗಳಾಗಿ ಹೋದರೂ ಕಾವೇರಿ ಕಣಿವೆಯ ಯೋಜನೆಯ ಬಗ್ಗೆ ಅಂದಾಜು ಆಗಲಿ, ಎಸ್ಟಿಮೇಟು ಆಗಲಿ, ಪ್ಲಾನ್ ಆಗಲಿ ಯಾವುದೂ ನಿಖರವಾಗಿ ಪ್ರಾಜೆಕ್ಟ್ ಕಾರ್ಯಕ್ರಮ ಕೈಕೊಂಡಿಲ್ಲ. ಈಗಿನ ಮುಖ್ಯ ಮಂತ್ರಿಗಳಾದ ವೀರೇಂದ್ರ ಪಾಟೀಲರು ಇನ್-ಕ್ಯಾಮರಾ ಮೀಟಿಂಗ್ ಮಾಡುತ್ತೇನೆ, ಆಲ್ಪೋ ಕೇಟ್ ಜನರಲ್‌ರನ್ನು ಕರೆಸಿ ಮಾತನಾಡುತ್ತೇವೆ ಎಂದು ಹೇಳಿ ಎಲ್ಲಾ ಸದಸ್ಯರನ್ನು ಕರೆಸುತ್ತೇವೆ ಎಂದು

ಎರಡು ಸಾರಿ ಕರೆಸಿದರು. ಟ್ರಿಬ್ಯೂನಲ್‌ಗೆ ಹೋಗಲು ಸಿದ್ಧವಾಗಿದ್ದೇವೆ ಕಾವೇರಿ ಯೋಜನೆ ಕಾರ್ಯಗತ ಮಾಡುವುದನ್ನು ನನಗೆ ಬಿಟ್ಟು ಕೊಡಿ ನಾನು ಮಾಡುತ್ತೇನೆ ಎಂದು ಹೇಳಿದರು. ಹಿಂದಿನ ಮುಖ್ಯ ಮಂತ್ರಿಗಳಾದ ಶ್ರೀಮಾನ್ ನಿಜಲಿಂಗಪ್ಪನವರು ಕಳೆದ ಐದು ವರ್ಷದಲ್ಲಿ ಕಾವೇರಿ ಕಣಿವೆ ಯೋಜನೆ ಬಗ್ಗೆ ಎಲ್ಲಾ ನನಗೆ ಬಿಟ್ಟುಬಿಡಿ ನಾನು ಮಾಡುತ್ತೇನೆ ಎಂದು ಹೇಳಿದರು. ಆದರೆ ಅಧಿಕಾರದ ವ್ಯಾಮೋಹದಿಂದ ಕೇಂದ್ರದಲ್ಲಿ ರಾಜಕೀಯ ಬಿಕ್ಕಟ್ಟು ಉಂಟಾಗಿ ಪರಿಸ್ಥಿತಿ ಬಿಗಡಾಯಿಸಿ ಕಾಂಗ್ರೆಸ್ಸು ಒಂದು ಪಾರ್ಟಿ ಇದ್ದುದು ಎರಡು ಪಾರ್ಟಿಯಾಯಿತೆಂದರಿಂದ ಇಂದು ಈ ಭಾಗದ ರೈತರು ಕಂಗಾಲಾಗಿದ್ದಾರೆ. ಈ ಬಗ್ಗೆ ಈ ವರ್ಷದ ಆಯುವ್ಯಯ ಪಟ್ಟಿಯನ್ನು ಮಂಡಿಸಿದ ಹಣಕಾಸಿನ ಮಂತ್ರಿಯವರಾದ ರಾಮಕೃಷ್ಣ ಹೆಗಡೆಯವರು ತಮ್ಮ ಭಾಷಣದಲ್ಲಿ ರಾಜ್ಯದ ನೀರಾವರಿ ಬಗ್ಗೆ ಒಂದು ಮಾತು ಹೀಗೆ ಹೇಳಿದ್ದಾರೆ :

ಇವು ಗಣನೀಯ ಸಾಧನೆಗಳು. ಆದರೂ ಈ ಪ್ರಗತಿಯ ರೀತಿ ಏಕ ಪ್ರಕಾರವಾಗಿಲ್ಲ ; ನಿರಾಶಾದಾಯಕ ಲಕ್ಷಣಗಳೂ ಕಂಡು ಬಂದಿವೆ. ನೀರಾವರಿಯ ಅಭಿವೃದ್ಧಿ ಅಪೇಕ್ಷಿತ ವೇಗದಲ್ಲಿ ಆಗಿಲ್ಲ ; ನೀರಾವರಿಗೆ ಒಳಗಾಗಿರುವ ಪ್ರದೇಶ ಶೇಕಡ ೧೦ಕ್ಕಿಂತ ತುಸು ಮಾತ್ರ ಹೆಚ್ಚು .

ಎಂದು ಹೇಳಿದ್ದಾರೆ ಕೋಟಿಗಟ್ಟಲೆ ಸಾಲ ಮಾಡಿ ಶೇಕಡ ೧೦ರಷ್ಟು ನೀರಾವರಿ ಮಾತ್ರ ಆಗಿದೆ ನಮ್ಮ ರಾಜ್ಯದಲ್ಲಿ ನೀರಾವರಿ ಬಗ್ಗೆ ಯಾಕೆ ಉಪೇಕ್ಷೆ ಮಾಡಿದ್ದು ಎಂದು ಕೇಳುತ್ತೇನೆ ೧೯೭೪ರ ಅಗ್ರೀಮೆಂಟ್ ಪ್ರಕಾರ ೫೦ ವರ್ಷದ ಅವಧಿಯಲ್ಲಿ ಅಂದರೆ ೧೯೭೪ರ ಒಳಗಾಗಿ ಒಂದು ನಿರ್ದಿಷ್ಟ ಯೋಜನೆ ಹಾಕಿಕೊಂಡು ಏತಕ್ಕೆ ಕಾರ್ಯಗತ ಮಾಡಲಿಲ್ಲ ? ಉದಾಸೀನ ಮನೋಭಾವನೆ ಏತಕ್ಕೆ ತಾಳಿದರು. ? ಕೇಂದ್ರ ಸರಕಾರ ಹೇಳಿದಂತೆ ಕೇಳದೆ ಹೋದರೆ ತನ್ನ ಅಧಿಕಾರಕ್ಕೆ ಚ್ಯುತಿ ಬರುತ್ತದೆ ಎಂದು ಪೊಳ್ಳು ಆದೇಶ ನೀಡಿ ಪ್ರಚಾರ ಮಾಡಿ ನಮ್ಮ ರಾಜ್ಯಕ್ಕೆ ಅನ್ಯಾಯ ಮಾಡಿದ್ದಾರೆ ಕಾವೇರಿ ಯೋಜನೆಗೆ ೯೦ ಕೋಟಿ ರೂಪಾಯಿ ಅಂದಾಜು ಮಾಡಿದೆ ಎಂದು ಕಳೆದ ಸೆಪ್ಟೆಂಬರ್‌ನಲ್ಲಿ ಒಂದು ಬಿಲ್ಲು ಸಭೆಯ ಮುಂದೆ ಬಂದಾಗ್ಗೆ ಹೇಳಿದ್ದಾರೆ. ಈ ಹಣ ಏತಕ್ಕೆ ಒದಗಿಸಲಿಲ್ಲ ? ನೀರಾವರಿ ಯೋಜನೆಗಳ ಬಗ್ಗೆ ಅಸಡ್ಡೆ ಮನೋಭಾವನೆ ಇದೆ ಎಂದು ಸ್ಪಷ್ಟವಾಗಿ ಅರ್ಥವಾಗುತ್ತದೆ ಅಲ್ಲವೇ ಅಲ್ಲ ಮಗಳ ಗಂಡ ಎನ್ನುವ ಅರ್ಥ ಬರುವ ಮಾತನ್ನು ಶ್ರೀಮಾನ್ ದೇವೇಗೌಡರು ಹೇಳಿದರು. ಖಚಿತವಾಗಿ ಕಾವೇರಿ ಯೋಜನೆ ಬಗ್ಗೆ ಅನ್ಯಾಯ ಮಾಡಿದ್ದಾರೆ. ಇದಕ್ಕೆ ಹಣ ಒದಗಿಸಿ ಕೆಲಸವನ್ನು ಎರಡು ಮೂರು ಭಾಗವಾಗಿ ವಿಂಗಡಿಸಿ ಪ್ರಾಜೆಕ್ಟ್ ಕಾರ್ಯ ತೀವ್ರವಾದ ರೀತಿಯಲ್ಲಿ ನಡೆಯುತ್ತದೆ ಎಂದು ತಿಳಿದುಕೊಂಡಿದ್ದೆವು. ಈಗಿನ ಮುಖ್ಯಮಂತ್ರಿಗಳು ಬೇಕಾದ ಹಣವನ್ನು ಕೊಡುತ್ತೇವೆ ಎಂದು ಹೇಳಿ ಒಂದು ರಿಸೋರ್ಸಸ್ ಕಮಿಟಿ ಮಾಡಿ ಸದರಿ ಕಮಿಟಿಯಲ್ಲಿ ೧೦ ಕೋಟಿ ರೂಪಾಯಿ ಉಳಿತಾಯ ಮಾಡಿ ಈ ಹಣವನ್ನು ಅಧಿಕಾರಿಗಳಿಗೆ ಸಂಬಳಸಾರಿಗೆಗೆ ಒದಗಿಸಿರುವುದು ಈ ಬಗ್ಗೆ ಇವರಿಗೆ ಇರುವ ಉದಾಸೀನ ಪ್ರತ್ಯಕ್ಷವಾಗಿ ಅಪ್ರತ್ಯಕ್ಷವಾಗಿ ಕಾವೇರಿ ನೀರಿನ ಯೋಜನ ಬಗ್ಗೆ ಸರಕಾರ ಮಹತ್ ಅನ್ಯಾಯಮಾಡಿದೆ. ಕಳೆದ ೧೩ ವರ್ಷಗಳಲ್ಲಿ ಅಂದರೆ ಹೊಸ ರಾಜ್ಯ ನಿರ್ಮಾಣವಾದ ಮೇಲೆ ಕಾವೇರಿ ಯೋಜನೆ ಕಾರ್ಯಗತ ಮಾಡಿ ಎಷ್ಟು ನೀರು ಎಷ್ಟು ಎಕರೆ ಭೂಮಿಗೆ ಸರಬರಾಜು ಮಾಡಿದ್ದಿರಿ ? ನಿಮ್ಮ ಯೋಜನೆಗಳು ಕಾರ್ಯಗತವಾಗಿವೆಯೇ ? ಯೋಜನೆ ಕೈಕೊಳ್ಳಲು ಹಣ ಇಲ್ಲ ಎಂದು ಮಾತ್ರ ಹೇಳುತ್ತೀರಿ. ಕೇಂದ್ರ ಸರಕಾರ ರೊಕ್ಕ ಕೊಡಲಿಲ್ಲ, ತೊಂದರೆಯಾಗಿದೆ ಎಂದು ಹೇಳುತ್ತೀರಿ. ಆದರೆ ಕೇಂದ್ರ ಸರಕಾರ ಮಲತಾಯಿ ಧೋರಣೆ ನಮ್ಮ ರಾಜ್ಯದ ಬಗ್ಗೆ ತಳೆಯುತ್ತಿದೆ. ಆಂಧ್ರದವರು ನಾಗಾರ್ಜುನ ಸಾಗರ ಯೋಜನೆ ಎರಡನೇ ಸ್ಟೇಜನ್ನು ಒಪ್ಪಿದ್ದರೂ ಮುಂದುವರಿಸಿದರು ಮೂರನೆ ಸ್ಟೇಜಿಗೆ ಕೇಂದ್ರ ಅವರಿಗೆ ಅನುಮತಿ ಕೊಟ್ಟಿದೆಯೇ ? ಈ ವಿವಾದ ಟ್ರಿಬ್ಯೂನಲ್ಲಿಗೆ ತೆಗೆದುಕೊಂಡು ಹೋಗುತ್ತೇವೆ ಎಂದು ಹೇಳುತ್ತಿದ್ದಿರಿ. ಆದರೆ ಅದನ್ನು ಮಾಡದೆ ಇಂದು ಅಧಿಕಾರದ ಭದ್ರತೆಯ ಹಿಂದೆ ರಾಜ್ಯಕ್ಕೆ ಅನ್ಯಾಯ ಮಾಡುತ್ತಿದ್ದೀರಿ.

10 A.M.

ತಮಗೆ ಈ ಜನರ ಬಗ್ಗೆ ಕರುಣೆಯಿದ್ದರೆ ಕೂಡಲೆ ರಾಜೀನಾಮೆ ಕೊಡಬೇಕೆಂದು ಹೇಳುತ್ತೇನೆ. ಈ ಹಿಂದೆ ನಮ್ಮ ಮುಖ್ಯ ಮಂತ್ರಿಗಳು ನಮ್ಮ ೧೯೭೪ರ ಅಗ್ರಿಮೆಂಟ್ ಮುಗಿಯುವುದಕ್ಕೆ ಇನ್ನೂ ೪ ವರ್ಷಗಳು ಇದ್ದಹಾಗೆಯೆ ಕಾವೇರಿ ಕಣಿಯಲ್ಲಿ ಕೈಗೊಳ್ಳಬೇಕಾದ ಎಲ್ಲ ನೀರಾವರಿ ಯೋಜನೆಗಳನ್ನೂ ಕೈಗೊಂಡು ಅವುಗಳನ್ನು ಮುಗಿಸುವುದಕಾಗುತ್ತದೆಂದು ಪೂರ್ಣ ಆಶ್ವಾಸನೆಯನ್ನು ನೀಡಿದ್ದರು. ಹಾಗೆ ಕೊಡಲಾಗಿದ್ದ ಭರವಸೆಯನ್ನು ಈಡೇರಿಸದಿರುವುದಕ್ಕೆ ರಾಜ್ಯದಲ್ಲಿ ಯಾವ ಯುದ್ಧಗಳ ಅಥವಾ ಕ್ರಾಂತಿಗಳ ಉಪಟಳವಿರಲಿಲ್ಲ. ನಮ್ಮ ಮನುಧರ್ಮ ಶಾಸ್ತ್ರದಲ್ಲಿಯೂ ಮತ್ತು ಕೌಟಿಲ್ಯ ಶಾಸ್ತ್ರದಲ್ಲಿಯೂ ಯಾವ ದೇಶದಲ್ಲಿ ದೊಡ್ಡ ದೊಡ್ಡ ನೀರಾವರಿ ಯೋಜನೆಗಳಿರುವುದಿಲ್ಲವೋ ಅಲ್ಲಿ ಸದಾ ಕ್ಷಾಮಡಾಮರುಗಳ ಕಾಟ ಇದ್ದೇ ಇರುತ್ತವೆಂದು ಹೇಳಿದ್ದಾರೆ ಹಾಗಿದ್ದರೂ ಇಲ್ಲಿ ಆಡಳಿತವನ್ನು ನಡೆಸತಕ್ಕ ಪಕ್ಷದವರು ಇವರ ಮೇಲೆ ಅವರು ಅವರ ಮೇಲೆ ಇವರು ತಕರಾರುಗಳನ್ನು ಹೇಳುತ್ತಾ ಕಳೆದ ೧೫-೧೬ ವರ್ಷಗಳಿಂದಲೂ ರಾಜ್ಯದ ಅಭಿವೃದ್ಧಿಯನ್ನು ಅಸಡ್ಡೆ ಮಾಡಿದ್ದಾರೆ. ಗಂಡಹೆಂಡಿರ ಜಗಳದಲ್ಲಿ ಕೂಸು ಬಡವಾಯಿತೆಂದ ಹಾಗೆ ಇವರ ಜಗಳದಲ್ಲಿ ರಾಜ್ಯಕ್ಕೆ ದೊಡ್ಡ

(ಶ್ರೀ ಬಿ. ದೊಡ್ಡ ಬೋರೇಗೌಡ)

ಅನ್ಯಾಯವಾಗಿದೆ. ನಮ್ಮ ಸರಕಾರದ ಧೋರಣೆಯಿರುವುದು ಕಂಟ್ರಾಕ್ಟರನ್ನು ಬೆಳೆಸಬೇಕು ಎಂಬುದು: ಅನಂತರ ಅಧಿಕಾರಿಗಳನ್ನು ಸಾಕಬೇಕು ಎನ್ನುವುದು. ಇಷ್ಟೆಲ್ಲಾ ಆದನಂತರ ಅಧಿಕಾರಕ್ಕೆ ಅಂಟಿಕೊಂಡು ಇರಬೇಕು ಅನ್ನತಕ್ಕ ಮನೋಭಾವದಿಂದ ಕೆಲಸ ಮಾಡತಕ್ಕದ್ದು ಇವು ಇಲ್ಲಿಯ ರಾಜಕೀಯದ ಲಕ್ಷಣ. ಈ ಸರಕಾರಕ್ಕೆ ಒಂದು ಒಳ್ಳೆಯ ಹೆಸರನ್ನು ಗಳಿಸಿಕೊಳ್ಳಬೇಕಾಗಿದ್ದರೆ ಮತ್ತು ಮುಂದಿನ ಚೀಳಿಗೆ ಇವರನ್ನು ಸ್ಮರಣೆ ಮಾಡಬೇಕಾಗಿದ್ದರೆ ಇವರು ಆಹೋರಾತ್ರಿ ಕೆಲಸ ಮಾಡಿ ಆ ನೀರಾವರಿ ಯೋಜನೆಗಳನ್ನೆಲ್ಲಾ ಪೂರ್ಣಮಾಡಬೆಕೆಂದು ಹೇಳುತ್ತೇನೆ. ಅಲ್ಲದೆ ಹಿಂದೆ ಮದ್ರಾಸಿನವರು ನಮ್ಮ ೧೯೨೪ರ ಅಗ್ರಿಮೆಂಟಿಗೆ ವಿರೋಧವಾಗಿ ಅಲ್ಲೀ ಭವಾನಿಮತ್ತು ಅಮರಾವತಿ ಎಂಬ ಯೋಜನೆಗಳನ್ನು ಮಾಡಿದ್ದು ತಪ್ಪೆಂದು ತಡೆಹಿಡಿಯದೆಬಿಟ್ಟಿದ್ದು ಇವರ ತಪ್ಪಾಗಿದೆ. ನಮಗೊ ಆವರಿಗೆ ಆಗಿದ್ದ ಒಪ್ಪಂದ ಮೆಟ್ಟೂರು ಡ್ಯಾಂ ಒಂದಕ್ಕೆ ಮಾತ್ರ ಆಗಿತ್ತು. ಅವರು ಹೇಗೆ ಉಲ್ಲಂಘನೆ ಮಾಡಿ ಕೆಲಸ ಮಾಡಿದ್ದಾರೋ ಹಾಗೆ ಇಲ್ಲಿಯೂ ನಾವು ಹಾರಂಗಿ, ಕಂಬದಕಡ, ಹೇಮಾವತಿ ಇತ್ಯಾದಿ ನೀರಾವರಿ ಯೋಜನೆಗಳನ್ನು ಆದಷ್ಟು ಬೇಗ ಮುಗಿಸಲೇಬೇಕೆಂದು ಹೇಳುತ್ತೇನೆ ಆದರೆ ನಮ್ಮಲ್ಲಿ ಇಲ್ಲಿಯವರೆಗೂ ಹತ್ತು ವರ್ಷಗಳು ಕಳೆದಾಗ್ಲೂ ಕಬಿನಿ ಪ್ರಾಜೆಕ್ಟ್ ಇನ್ನೂ ಆಗದಿರುವುದನ್ನು ನೋಡಿದರೆ ಇಲ್ಲೀತಕ್ಕ ನಮ್ಮ ಇಂಜಿನಿಯರು ಮತ್ತು ಅಧಿಕಾರಿಗಳು ಬಹಳ ಅದಕ್ಷರೆಂಬುದನ್ನು ಎತ್ತಿ ತೋರಿಸುತ್ತದೆ. ಈಗ ಸರ್ಕಾರದವರು ಬಹಳ ಚಾಕಚಕ್ಯತೆಯಿಂದ ಹಗಲೂ ರಾತ್ರಿ ಎನ್ನದೆ ದಿನಕ್ಕೆ ೩-೪ ಷಿಫ್ಟ್‌ಗಳಲ್ಲಿ ಕೆಲಸವನ್ನು ನಡೆಸಿ ಈ ಯೋಜನೆಗಳನ್ನೆಲ್ಲಾ ಮುಗಿಸಬೇಕೆಂದು ಕೇಳಿಕೊಂಡು ನನಗಿಷ್ಟು ಮಾತನಾಡುವುದಕ್ಕೆ ಅವಕಾಶ ಮಾಡಿಕೊಟ್ಟ ಅಧ್ಯಕ್ಷರಿಗೆ ನನ್ನ ವಂದನೆಗಳನ್ನರ್ಪಿಸಿ ನನ್ನ ಮೊತುಗಳನ್ನು ಮುಗಿಸುತ್ತೇನೆ ಜೈಹಿಂದ್.

SRI D. B. KALMANKAR (ALAD) : Sir, it appears to me as if a bad lawyer is supporting a very good case because from the various points that were made out by various Hon Members of this House it appears that we have slept over our rights the Government thought all these days that because there was a Congress Government at the Centre here and in Tamil Nadu, the matter could be negotiated and decided and that there was no need to look into our legal rights. That was the way in which the whole problem was viewed by the then Chief Minister SriNijalingappa and also by the present Government. They never applied their minds as to what they should do legally to safeguard our very important rights in the Cauvery basin. It appearsfrom newspaper reports that there is no need for us to think that the 1924 Agreement is a very sacred one. Action should have been taken within a period of 10 years to see that the agreement is binding on the parties. That being so, the agreeement is not binding on us. Secondly, as Sri Nanje Gowda has pointed out, it is not binding on us because it was entered into as a result or coersion and pressrue.

We all know very well that this Government treats the Oppostion in our State in a hostile manner and the same is happening to this Government *vis-a-vis* the Central Government. This Government never takes up any development works in thet constituencies of the Opposition Members So I do not blame the Cenral Govermnet if they also try to make some capital out of this dispute. If they want that this should not happen, then it also becomes the responsibility of the party in power to see that it does not look to the Opposition only at the time of crisis and that it takes all the people intotheir confidence and takesup development works in all the constituencies without showing partiality to any of the parties Because this

Government has taken up such an attitude towards the Opposition parties in this State in its day to day administration a similar attitude is being shown by the Central Government towards this Government. It has boomeranged against this Government. So, if the Government wants to have the support of the Opposition it must also see to it that it does not behave in a hostile manner politically towards the Opposition. Both are chips of the same block both are different faces of the same coin and I do not find any difference between this Government and the Central Government. So I do not blam the Central Government if they try to make some political capital out of this present dispute

The Fifth Finance Commission singled out Mysore and gave it an unfabourable award in the border dispute the Centre's decision has gone against the interests of the State. Again in the Cauvery water dispute we see that Dr. K. L. Rao is siding with Tamil Nadu It does not mean that Tamil Nadu is correct and that we have no good case but all this has happend because our Government happens to be a Government of the Syndicate and the Government at the Centre happens to be a Government of the Indicate That is why the Government at the Centre is trying to put all types of pressure to subdue this Government.

That is all what I have seen about the attitude of the Government. For that, this Government is responsible when these questions were there, they never took any action. They should have taken action to see that the interests of our State are safeguarded. But the elder brotherly attitude of the then Chief Minister Sri. Nijalingappa is responsible for this impasse He was unwise in thinking that our rights could be settled and established bacause the same Party was ruling at the Centre and in this State. No sooner the split came in the Congress, see what hardship we are facing to vindicate our rights. That being the case, I would request this Government not to seek the support of the Opposition only at the time of crisis. I wish the Government displays the same attitude throughout with the parties in Opposition and see that they are treated honourably and their constituencies do not suffer on account of the bias the party in power has got. It is only then I think we will really be in a position to see that our interests are safeguarded. Then alone it can be said the Opposition has been taken into confidence. It is only then that we can take some concerted action.

With these few words, I conclude.

ಶ್ರೀ ಎಸ್. ಪುಟ್ಟಸ್ವಾಮಿ (ಚಾಮರಾಜನಗರ)—ಸನ್ಮಾನ್ಯ ಅಧ್ಯಕ್ಷರೇ, ಈ ಮನೆಯಲ್ಲಿ ನಿನ್ನೆ ದಿವಸ ಮತ್ತು ಈವೊತ್ತು ಇಷ್ಟು ಹೊತ್ತು ಕೂಡ ೧೦ನೇ ಮಾರ್ಚಿ ೧೯೭೦ನೆಯ ದಿನಾಂಕ ಶ್ರೀಮಾನ್ ಕೆ. ಎಲ್. ರಾವ್ ಅವರು ಲೋಕಸಭೆಯಲ್ಲಿ ಕಾವೇರಿ ನೀರಿನ ಬಗ್ಗೆ ಅವರು ಕೊಟ್ಟಂಥ ಹೇಳಿಕೆಯನ್ನು ಕುರಿತು ಚರ್ಚೆ ನಡೆದಿದೆ. ಅನೇಕ ಜನ ಹಿರಿಯರು ಮತ್ತು ಮಾನ್ಯ ಸ್ನೇಹಿತರು ಇದರ ಬಗ್ಗೆ ಹೆಚ್ಚಿನ ಅಭ್ಯಾಸ ಮಾಡಿ ಕಾನೂನಿನ ಚೌಕಟ್ಟಿನಲ್ಲಿ ನಮ್ಮ ಸರ್ಕಾರದ ನಿಲುವು ಏನು ಇರಬೇಕು ಮತ್ತು ಈ ನೀರನ್ನು ಉಪಯೋಗಿಸುತಕ್ಕ ಅಧಿಕಾರದ ಬಗ್ಗೆ ನಮ್ಮ ದಿಟ್ಟವಾದ ನಿಲುವು ಏನು ಎನ್ನುವುದರ ಬಗ್ಗೆ ಅವರು ಚರ್ಚೆ ಮಾಡಿ ಈ ಸರ್ಕಾರಕ್ಕೆ ಸಲಹೆಯನ್ನು ನೀಡಿದ್ದಾರೆ. ನಾನಾದರೂ ಕೂಡ ಈಗ ಸರ್ಕಾರದ ಬಗ್ಗೆ ೧೯೭೨

(ಶ್ರೀ ಎಸ್. ಪುಟ್ಟಸ್ವಾಮಿ)

ರಿಂದ ೧೯೭೦ನೇ ಇಸವಿ ತನಕ ಕಾವೇರಿ ಬೇಸಿನ್‌ನಲ್ಲಿರತಕ್ಕ ನೀರನ್ನು ನಾವು ೧೯೪೪ರ ಅಗ್ರಿಮೆಂಟನ್ನು ಅನುಸರಿಸಿದರೂ ಕೂಡ ನಮ್ಮ ಪ್ರಾಜೆಕ್ಟ್‌ಗಳನ್ನು ಕಟ್ಟತಕ್ಕ ಬಗ್ಗೆ ಮತ್ತು ನಮಗೆ ಇರತಕ್ಕಂಥ ನೀರಿನ ಹಕ್ಕನ್ನು ಉಪಯೋಗಿಸಿಕೊಳ್ಳುವುದರ ಬಗ್ಗೆ ನಾವು ಯಾವರೀತಿ ಹಿಂದೆ ಬಿದ್ದಿದ್ದೇವೆ ಎಂದೂ ಹೇಳಬೇಕಾಗಿದೆ. ೧೯೪೭ ರಿಂದ ಯಾರು ಯಾರು ಸರ್ಕಾರದ ಜವಾಬ್ದಾರಿಯನ್ನು ಹೊತ್ತಿದ್ದರೋ, ಯಾರು ಯಾರು ಮುಖ್ಯಮಂತ್ರಿಗಳಾಗಿದ್ದರೋ ಮತ್ತು ಸಂಬಂಧಪಟ್ಟ ಮಂತ್ರಿಗಳು ಇವರೆಲ್ಲಾ ಅದರ ಕಾರ್ಯವನ್ನು ನಿರ್ವಹಿಸಿದ್ದರು. ಆದುದರಿಂದ ಅವರೆಲ್ಲರ ಬಗ್ಗೆ ನಾವು ಟೀಕೆ ಮಾಡತಕ್ಕ ಸಂದರ್ಭ ಈವೊತ್ತು ಒದಗಿದೆ. ಈವೊತ್ತು ಶ್ರೀಮಾನ್ ನಿಜಲಿಂಗಪ್ಪನವರ ಮೇಲೆ ಆಗಲಿ, ಶ್ರೀಮಾನ್ ವೀರೇಂದ್ರ ಪಾಟೀಲರವರ ಮೇಲಾಗಲಿ ಟೀಕೆ ಮಾಡಿದರೂ ಸಹ ೧೯೪೭ ರಿಂದ ಈ ಸರ್ಕಾರದಲ್ಲಿ ಇದ್ದಂಥ ಎಲ್ಲರ ಮೇಲೂ ಈ ಜವಾಬ್ದಾರಿ ಬಿದ್ದಿದೆ. ೧೯೫೬ನೇ ಇಸವಿಯಲ್ಲಿ ರಾಜ್ಯವಿಸ್ತಾರವಾದ ಮೇಲೆ ರಿವರ್ ಡಿಸ್ಪ್ಯೂಟ್ ಆಕ್ಟ್ ಪ್ರಕಾರ ಇರತಕ್ಕಂಥ ನಿಯಮಗಳನ್ನೂ ಉಪಯೋಗಿಸಿಕೊಂಡು, ಇಂಟರ್‌ಸ್ಟೇಟ್ ವಾಟರ್ ಡಿಸ್ಪ್ಯೂಟ್ ಆಕ್ಟ್‌ನಲ್ಲಿ ಇರತಕ್ಕಂಥ ನಿಯಮಗಳನ್ನು ಉಪಯೋಗಿಸಿಕೊಂಡು ೧೯೭೪ರ ಅಗ್ರಿಮೆಂಟನ್ನು ಪುನರ್ವಿಮರ್ಶೆ ಮಾಡುವುದಕ್ಕೆ ಇದುವರೆಗೆ ನಮ್ಮ ರಾಜ್ಯದಲ್ಲಿ ೨-೩ ಸರ್ಕಾರಗಳು ಆದರೂ ಅವರು ಈ ಬಗ್ಗೆ ಆಸಕ್ತಿವಹಿಸಲಿಲ್ಲ. ಮತ್ತು ಅವರು ಒಂದು ದಿಟ್ಟತನದ ನಿಲುವನ್ನೂ ಕೂಡ ತೆಗೆದುಕೊಳ್ಳಲಿಲ್ಲ. ೧೯೪೭ ರಿಂದ ೧೯೫೬ ರ ತನಕ ನಮ್ಮ ರಾಜ್ಯದಲ್ಲಿ ಕಾಂಗ್ರೆಸ್ ಸರ್ಕಾರ ರಾಜ್ಯಭಾರ ನಡೆಸಿದರೂ ಕೂಡ ಮೈಸೂರು ರಾಜ್ಯದಲ್ಲಿರುವ ಕಾಂಗ್ರೆಸ್ ಸಂಸ್ಥೆಗಳಲ್ಲಿ ಒಳಜಗಳಗಳನ್ನು ಸರಿಪಡಿಸತಕ್ಕಂಥ, ಒಬ್ಬ ಅಧಿಕಾರಿಯನ್ನು ತರತಕ್ಕಂಥ, ಒಬ್ಬ ಅಧಿಕಾರಿಯನ್ನು ಇಳಿಸತಕ್ಕಂಥ ಕೆಲಸದಲ್ಲಿ ತೊಡಗಿದ್ದರು. ಎನ್ನುವ ಈ ಒಂದು ಹಿನ್ನೆಲೆಯನ್ನು ೧೯೪೭ ರಿಂದ ೫೬ರ ತನಕ ಕಾಣಬಹುದು. ೧೯೫೬ ರಿಂದ ಈಚೆಗೆ ರಾಜ್ಯವಿಸ್ತಾರವಾದ ಮೇಲೆ ಹಾಗೂ ಕಾಂಗ್ರೆಸ್ ಸರ್ಕಾರ ಈವೊತ್ತಿನವರೆಗೆ ರಾಜ್ಯದ ಆಡಳಿತವನ್ನು ಹಿಡಿದುಕೊಂಡು ನಡೆಸುತ್ತಾ ಇದ್ದರೂ ಸಹ ಕಾಂಗ್ರೆಸ್ ಮಂತ್ರಿಮಂಡಲವನ್ನು ಬದಲಾಯಿಸತಕ್ಕಂಥಾದ್ದು, ಇಳಿಸತಕ್ಕಂಥಾದ್ದು, ಇನ್ನೊಬ್ಬರನ್ನು ತರತಕ್ಕಂಥಾದ್ದು, ಈ ಪಾರ್ಟಿ ವೈಷಮ್ಯವನ್ನು ಬೆಳೆಸತಕ್ಕಂಥಾದ್ದು ನಮ್ಮ ಮೈಸೂರು ರಾಜ್ಯದಲ್ಲಿ ನಡೆದಿವೆ ಎಂದು ಹೇಳಬೇಕಾಗಿದೆ. ಅದು ಏನೇ ಇರಲಿ ಈವೊತ್ತು ಸರ್ಕಾರ. ಕಾಂಗ್ರೆಸ್ ಸರ್ಕಾರವೇ ಇರಲಿ, ಜವಾಬ್ದಾರಿ ಹೊತ್ತಂತಹ ಎಲ್ಲಾ ಮಂತ್ರಿಮಂಡಲಗಳ ಮೇಲೂ ಈ ಒಂದು ಟೀಕೆಯನ್ನು ಸಾರ್ವಜನಿಕರು ಮಾಡಿದ್ದಾರೆ. ಕಾವೇರಿ ಬೇಸಿನ್‌ನ ಸಮಸ್ಯೆಯನ್ನು ರಿವರ್‌ಬೋರ್ಡ್‌ನಲ್ಲಿರತಕ್ಕಂಥ ನಿಯಮಗಳಿಗನುಸಾರವಾಗಿ ನ್ಯಾಯ ಇಲಾಖೆಗೆ ಸಂಬಂಧಪಟ್ಟವರೊಡನೆ ಪರಿಶೀಲನೆ ನಡೆಸಿ ಸ್ಟೇಟ್ ರೀಆರ್ಗನೈಸೇಷನ್ ಆಕ್ಟ್ ಮತ್ತು ಇಂಟರ್‌ಸ್ಟೇಟ್ ವಾಟರ್ ಡಿಸ್ಪ್ಯೂಟ್ ಆಕ್ಟ್ ಈ ಎರಡನ್ನು ಪರಿಶೀಲಿಸಿ ಇಂಟರ್ ಸ್ಟೇಟ್ ವಾಟರ್ ಡಿಸ್ಪ್ಯೂಟ್ ಆಕ್ಟ್ ಪ್ರಕಾರ ೧೯೭೪ ರ ಒಪ್ಪಂದವನ್ನು ಬದಲಾವಣೆ ಮಾಡಿ ಮೈಸೂರು ರಾಜ್ಯಕ್ಕೆ ಕಾವೇರಿ ನದಿರ ಮತ್ತು ಅದಕ್ಕೆ ಸಂಬಂಧಪಟ್ಟ ನದಿಗಳ ಮತ್ತು ಉಪನದಿಗಳ ಜಲಾಶಯಗಳಿಂದ ಉಪಯೋಗ ಮಾಡಿಕೊಳ್ಳಬೇಕು ಅದಕ್ಕನುಗುಣವಾಗಿ ಭೂಮಿ ಮತ್ತು ನೀರಿನ ಹಕ್ಕು ಎಷ್ಟುಬರಬೇಕು. ಈಗ ಎಷ್ಟು ಉಪಯೋಗಿಸಿದ್ದಾರೆ ಅದನ್ನೂ ಕೂಲಂಕುಷವಾಗಿ ಪರಿಶೀಲಿಸಿ ಕೇಂದ್ರ ಸರ್ಕಾರದ ಜೊತೆ ವ್ಯವಹಾರ ಮಾಡಿ ಒಂದು ಪಂಚಾಯಿತಿಗೆ ಒಪ್ಪಿಸಿದರೆ ಈ ಪುನರ್ವಿಮರ್ಶಿತ ಒಪ್ಪಂದ ಮಾಡುವುದಕ್ಕೆ ಈ ಒಂದು ನಿಲುವನ್ನು ಸರ್ಕಾರ ಜರೂರಾಗಿ ಮಾಡತಕ್ಕದ್ದು ಸರಿ ಎಂದು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ.

ಇನ್ನು ಕಾವೇರಿ ಬೇಸಿನ್‌ನಲ್ಲಿರತಕ್ಕ ನೀರನ್ನು ಉಪಯೋಗ ಮಾಡಿ ಅದರ ಆಶ್ರಯ ಪಡೆದಿರುವ ಲಕ್ಷಾಂತರ ಜನರ ಜೀವನವನ್ನು ಸುಧಾರಿಸಬೇಕು. ಈ ಸರ್ಕಾರ ನಡೆಸತಕ್ಕಂಥಾವರು ಯಾರೇ ಆಗಿರಲಿ ಸರ್ಕಾರದ ಮುಖ್ಯಮಂತ್ರಿಗಳಾಗಿರುವವರು ಅವರು ಹೈದ್ರಾಬಾದ್ ಕರ್ನಾಟಕದಿಂದ ಬಂದವರೇ ಆಗಿರಲಿ, ಮದ್ರಾಸ್ ಕರ್ನಾಟಕದಿಂದ ಬಂದವರೇ ಆಗಿರಲಿ ಅಥವಾ ಬಾಂಬೆ ಕರ್ನಾಟಕದಿಂದ ಬಂದವರೇ ಆಗಿರಲಿ, ಕೊಡಗಿನಿಂದ ಬಂದವರೇ ಆಗಿರಲಿ, ಕಾವೇರಿ ಬೇಸಿನ್‌ನಲ್ಲಿರತಕ್ಕಂಥ ನೀರನ್ನು ಉಪಯೋಗಿಸಿಕೊಂಡು ಜನತೆಯ ಜೀವನವನ್ನು ಸುಧಾರಿಸಲು ಅವಕಾಶ ಮಾಡಬೇಕು ಇದು ಬಹುದಿನದ ಪ್ರಶ್ನೆ. ಇದನ್ನು ಜವಾಬ್ದಾರಿ ಹೊತ್ತಂತ ಮುಖ್ಯಮಂತ್ರಿಗಳು ತಿಳಿಯಬೇಕು ಎಂದು ಈ ಸಂದರ್ಭದಲ್ಲಿ ಹೇಳುತ್ತೇನೆ. ಈವಾಗ ಜನತೆಯ ಭಾವನೆ ಏನು ಇದೆ ಎಂದರೆ, ಇವರು ಹೈದರಾಬಾದ್ ಕರ್ನಾಟಕದಿಂದ ಬಂದಂಥ ಮುಖ್ಯಮಂತ್ರಿಗಳು. ಅವರು ತಮಗೆ ಬೇಕಾದ ಕೃಷ್ಣಾ ಬೇಸಿನ್‌ನ್ನು ಡೆವಲಪ್ ಮಾಡಿಕೊಳ್ಳುತ್ತಾರೆ. ಹಳೆಯ ಮೈಸೂರು ರಾಜ್ಯದಲ್ಲಿ ಶ್ರೀಮಾನ್ ಕೆ. ಹನುಮಂತಯ್ಯನವರು ಮುಖ್ಯಮಂತ್ರಿಗಳಾಗಿದ್ದಾಗ ಅವರ ಕಾಲದಲ್ಲಿ ತುಂಗ ಮತ್ತು ಭದ್ರ ಬೇಸಿನ್‌ನ್ನು ಅಭಿವೃದ್ಧಿಮಾಡುವುದಕ್ಕೆ ಪ್ರಯತ್ನ ಮಾಡಿದರು. ಇದರಿಂದಾಗಿ ದುರ್ದೈವದಿಂದ ಕಾವೇರಿ ಬೇಸಿನ್‌ನಲ್ಲಿರತಕ್ಕಂಥಾದ್ದನ್ನು ಅಭಿವೃದ್ಧಿ ಮಾಡುವುದಕ್ಕೆ ಆ ಪ್ರದೇಶದ ಮುಖ್ಯ

ಮಂತ್ರಿಗಳಾಗಿ ಯಾರೂ ಬರುವ ಅವಕಾಶ ಸಿಕ್ಕಲಿಲ್ಲ. ಈ ಸಮಯದಲ್ಲಿ ಸ್ವಲ್ಪ ಅವಕಾಶ ಸಿಕ್ಕಿದಾಗ ಶ್ರೀಮಾನ್ ಟಿ. ಮರಿಯಪ್ಪನವರು ಹಣಕಾಸಿನ ಮಂತ್ರಿಗಳಾಗಿದ್ದರು, ಶ್ರೀಮಾನ್ ಹೆಚ್. ಎಂ. ಚನ್ನಬಸಪ್ಪನವರು ಪಿ. ಡಬ್ಲ್ಯೂ. ಡಿ. ಮಂತ್ರಿಗಳಾಗಿದ್ದಾಗ ಇದರಲ್ಲಿ ಒಂದು ಹೆಚ್ಚಿನ ಆಸ್ತಿ ಇಹಿಸಿ ಇದರ ಅಂಕೆಅಂಶಗಳನ್ನು ಕೂಡಿ ಹಾಕಿದರು. ಅವರು ಈ ಪ್ರಾಜೆಕ್ಟ್ ರಿಪೋರ್ಟ್‌ನ್ನು ತಯಾರಿಸಿ ಕ್ಲಿಯರೆನ್ಸ್ ತೆಗೆದು ಕೊಳ್ಳುವ ಕಾಲಕ್ಕೆ ಮಂತ್ರಿಗಳ ಜವಾಬ್ದಾರಿ ಬಿಟ್ಟು ಹೊರಗೆ ಬಂದರು. ಇದನ್ನು ನೋಡಿದರೆ ಬಹುಶಃ ಕಾವೇರಿ ಬೇಸಿನ್‌ನಲ್ಲಿರತಕ್ಕಂಥವರು ಯಾರಾದರೂ ಮುಖ್ಯಮಂತ್ರಿಗಳಾಗಿದ್ದರೆ ಕಾವೇರಿ ಬೇಸಿನ್‌ನಲ್ಲಿ ಅಗತಕ್ಕಂಥ ಪ್ರಾಜೆಕ್ಟ್‌ಗಳನ್ನು ತೆಗೆದುಕೊಂಡು ೪-೫ ವರ್ಷಗಳಲ್ಲೇ ಮುಗಿಸಿ ಅದನ್ನು ಅಭಿವೃದ್ಧಿ ಪಡಿಸುತ್ತಿದ್ದರು ಎನ್ನುವುದು ಸ್ಪಷ್ಟಪಡುತ್ತದೆ. ಈ ಒಂದು ದೃಷ್ಟಿಯಿಂದಲಾದರೂ ಶ್ರೀಮಾನ್ ವೀರೇಂದ್ರ ಪಾಟೀಲರು ತಮ್ಮ ಸ್ಥಾನವನ್ನು ತೆರವು ಮಾತಿ, ಅದು ಸಾಧ್ಯವಿಲ್ಲದಿದ್ದರೆ ಅವರೇ ಕಾವೇರಿ ಬೇಸಿನ್‌ಗೆ ಸೇರಿದಂಥವರು ಎನ್ನುವ ದೃಷ್ಟಿಯಿಂದಲಾದರೂ ಇದು ನಮ್ಮದು ಎಂದು ತಿಳಿದುಕೊಂಡು, ಇನ್ನು ೪-೫ ವರ್ಷದಲ್ಲಾದರೂ ಕೃಷ್ಣಾ ಬೇಸಿನ್‌ಗೆ ಮತ್ತು ಬೇರೆ ಬೇಸಿನ್‌ಗೆ ಸ್ವಲ್ಪ ಕಡಿಮೆ ಹಣ ಕೊಟ್ಟು ಈ ಕಾವೇರಿ ಬೇಸಿನ್‌ಗೆ ಹೆಚ್ಚಿನ ಹಣಹಾಕಿ ಈಗ ತೆಗೆದುಕೊಂಡಿರತಕ್ಕಂಥ ಪ್ರಾಜೆಕ್ಟ್‌ಗಳನ್ನು ಮುಗಿಸಿ, ಅಲ್ಲಿನ ಜನರು ಈ ನೀರನ್ನು ಉಪಯೋಗಿಸಿಕೊಳ್ಳುವ ಹಾಗೆ ಅವಕಾಶ ಮಾಡಿಕೊಡಬೇಕೆಂದು ನಾನು ವಿನಂತಿ ಮಾಡಿಕೊಳ್ಳುತ್ತೇನೆ- ಮತ್ತು ೧೯೨೪ ರ ಅಗ್ರಿಮೆಂಟನ್ನು ಪುನರ್ವಿಮರ್ಶೆ ಮಾಡಿಕೊಳ್ಳುವುದಕ್ಕೆ ಕೇಂದ್ರ ಸರ್ಕಾರ ಮತ್ತು ಮದ್ರಾಸ್ ಸರ್ಕಾರದೊಂದಿಗೆ ವ್ಯವಹರಿಸಿ ಇದರ ಬಗ್ಗೆ ಒಂದು ಹೊಸ ಒಪ್ಪಂದವನ್ನು ಮಾಡಿಕೊಳ್ಳುವುದಕ್ಕೆ ಪ್ರಯತ್ನ ಮಾಡಬೇಕೆಂದು ಸಲಹೆ ನೀಡಿ ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಎಂ. ಎಸ್. ಕೃಷ್ಣನ್ (ಮಲ್ಲೇಶ್ವರಂ):—ಮಾನ್ಯ ಅಧ್ಯಕ್ಷರೇ, ನಮ್ಮ ಅನೇಕ ಮಾನ್ಯ ಮಿತ್ರರು ಕಾವೇರಿ ನದಿ ನೀರಿನ ವಿವಾದದ ಬಗ್ಗೆ ಇಲ್ಲಿ ಅನೇಕ ವಿಂಶಗಳನ್ನು ಈ ಸಭೆಯ ಮುಂದೆ ಇಟ್ಟಿದ್ದಾರೆ. ನಾನಾದರೂ ಸಹ ಇಲ್ಲಿ ಎಲ್ಲಾ ವಿಷಯಗಳನ್ನು ಕುರಿತು ಮಾತನಾಡಲು ಸಾಧ್ಯವಿಲ್ಲ ಏಕೆಂದರೆ ನನಗೆ ಇರುವ ವೇಳೆ ಬಹಳ ಕಡಿಮೆ. ಮೊದಲನೆಯದಾಗಿ ಇಷ್ಟು ಮಾತ್ರ ಹೇಳುತ್ತೇನೆ. ಈ ಕೆಲಸಗಳನ್ನು ಮಾಡಿರುವುದು ಸರಿಯಲ್ಲವೆಂದು ಈ ಕಡೆಯಿಂದ ಮತ್ತು ಆ ಕಡೆಯಿಂದ ಇಬ್ಬರೂ ಹೊಣೆಗಾರಿಕೆ ಹೊರಿಸುವುದನ್ನು ಬಿಟ್ಟು ಎಲ್ಲರೂ ಒಗ್ಗಟ್ಟಿನಿಂದ ಮುಂದೆ ಹೋಗುವ ಯೋಚನೆ ಮಾಡಬೇಕು. ಕಾಂಗ್ರೆಸ್ಸು ಸರಕಾರ ಇದ್ದರೂ ಅವರು ಮಾಡಲಿಲ್ಲ ಎಂದು ಅವರ ಮೇಲೆ ಹೊಣೆಗಾರಿಕೆ ಹೊರಿಸುವುದು ತಪ್ಪು ಮತ್ತು ಹಾಗೆ ಹೊರಿಸುವುದೂ ಸರಿಯಾದುದಲ್ಲ ಶ್ರೀಮಾನ್ ದೇವೇಗೌಡರವರು ಮತ್ತು ಶ್ರೀ ಗಂಗಾಧರ್‌ರವರು ಇದರ ಬಗ್ಗೆ ಹೇಳುತ್ತಾ ಹಿಂದೆ ಏನಾಗಿದೆ ಅದನ್ನು ವಿಮರ್ಶೆ ಮಾಡಿದ್ದರೆ ಇಂತಹ ಪರಿಸ್ಥಿತಿಯೇ ಇರುತ್ತಿರಲಿಲ್ಲ ಎಂದು ಹೇಳಿದರು. ಹಿಂದೆ ಏನಾಗಿದೆ ಎನ್ನುವುದನ್ನು ನಾನು ಇಲ್ಲಿ ವಿಮರ್ಶೆ ಮಾಡುವುದಕ್ಕೆ ಹೋಗುವುದಿಲ್ಲ. ಇವನ್ನೆಲ್ಲಾ ಮಾನ್ಯ ಸದಸ್ಯರಾದ ಶ್ರೀ ಮಾನ್ ಚನ್ನಬಸಪ್ಪನವರು ಈಗಾಗಲೇ ಚರ್ಚೆ ಮಾಡಿದ್ದಾರೆ, ಇವೊತ್ತಿನ ದಿನದ ಪರಿಸ್ಥಿತಿಗೆ ಮೂಲಭೂತ ಕಾರಣ ಸರಕಾರ ಎನ್ನುವುದನ್ನು ಯಾರೂ ಮರೆಯುವಂತಿಲ್ಲ ಅಂದು ಕಾಂಗ್ರೆಸ್ ಒಂದಾಗಿತ್ತು. ಇಂದು ಕಾಂಗ್ರೆಸ್ಸು ಇಬ್ಭಾಗವಾಗಿ ಇಂಡಿಕೇಟು ಹಾಗೂ ಸಿಂಡಿಕೇಟು ಆಗಿದೆ ಅಷ್ಟೇ. ಆದರೆ ಸರಕಾರ ಇದರ ಹೊಣೆಗಾರಿಕೆಯನ್ನು ಇಲ್ಲಿ ಕಳೆದುಕೊಳ್ಳುವುದು ಸಾಧ್ಯವಿಲ್ಲ. ಹನ್ನೊಂದು ವರ್ಷಗಳಿಂದಲೂ ಈ ವಿವಾದ ಇತ್ತು. ಹನ್ನೊಂದು ವರ್ಷಗಳಿಂದಲೂ ಏನು ಸರಕಾರ ಇತ್ತೋ ಅದೇ ಕಾಂಗ್ರೆಸ್ಸು ಸರಕಾರ ಈಗಲೂ ಇದೆ. ಸಿಂಡಿಕೇಟು ಸರಕಾರ ಇದೆ ಎಂದು ನಾವು ಎಲ್ಲ ಜವಾಬ್ದಾರಿಯನ್ನು ಅವರ ಮೇಲೆ ಹೊರಿಸುವುದು ಸರಿಯಾದುದಲ್ಲ. ಎರಡನೆಯದು ಈ ಪ್ರಶ್ನೆ ಬಗ್ಗೆ ಮುಂದೆ ನಾವೇನು ಮಾಡಬೇಕು ಎಂದು ನಮ್ಮ ಕೆಲವು ಸ್ನೇಹಿತರು ಇಲ್ಲಿ ಕೇಳಿದರು. ಇನ್ನೊಂದು ಪ್ರಶ್ನೆ ಶ್ರೀಮಾನ್ ಚನ್ನಬಸಪ್ಪನವರು ಎತ್ತಿದ್ದುದು ಇದನ್ನು ಆರಬಿಟ್ರೇಷನಗೆ ಕಳುಹಿಸಬೇಕೋ ಇಲ್ಲವೇ ಅಡಿಜುಡಿಕೇಷನಗೆ ಕಳುಹಿಸಬೇಕೋ ಎಂಬುದು ಆರಬಿಟ್ರೇಷನ್‌ಗೆ ಒಪ್ಪಿಕೊಳ್ಳದೇ ಬರೀ ಅಡ್‌ಜುಡಿಕೇಷನ್‌ಗೆ ಒಪ್ಪಿಕೊಳ್ಳಬೇಕು ಎಂದರೆ, ನಾವು ಮಾಡಿಕೊಂಡಿರುವ ಅಗ್ರಿಮೆಂಟು ಪ್ರಕಾರ ಸರಿಯಾಗುವುದಿಲ್ಲ. ಇದನ್ನು ಕಾನೂನು ಬಾಹಿರವಾದ ಅಗ್ರಿಮೆಂಟು ಎಂದು ಕೋರ್ಟಿಗೆ ಹೋದಾಗ ವಾದ ಮಾಡುವುದಕ್ಕೆ ಸಾಧ್ಯವಾಗುತ್ತದೆ. ನಮ್ಮ ಘಟನಾವಳಿಯಲ್ಲಿ ೨೬೨ರಲ್ಲಿ ಏನು ಹೇಳುತ್ತದೆ ಎಂದರೆ ;

Parliament may by law provide for the adjudication of any dispute or complaint with respect to the use, distribution or control of the waters of, or in, any inter-State river or river valley.

ಇದರಂತೆ ನಾವು ಅಷ್ಟು ಸುಲಭವಾಗಿ ಕೇಳುವ ಹಾಗಿಲ್ಲ ಎಂದು ತೋರುತ್ತದೆ. ಏನೇ ಆಗಲೀ ಈ ಅಗ್ರಿಮೆಂಟು ಸರಿಯಾದುದಲ್ಲ ಎನ್ನುವುದನ್ನು ನಾವು ಇಲ್ಲಿ ಅರ್ಥಮಾಡಿಕೊಳ್ಳಬೇಕು. It was an agreement between two unequal parties ; it was not an

(ಶ್ರೀ ಎಂ. ಎಸ್. ಕೃಷ್ಣನ್)

agreement between equal parties. It was an agreement with a sovereign power directly controlled by the Queen and it is not an agreement between States like Tamilnadu and Mysore. ನಾವು ಮಾಡಿಕೊಂಡಿರುವ ಅಗ್ರಿಮೆಂಟಿನಿಂದ ಒಂದು ಕಡೆ ನ್ಯಾಯ ಇನ್ನೊಂದು ಕಡೆ ಅನ್ಯಾಯವಾಗಕೂಡದು. ಆದುದರಿಂದ ಸರಕಾರದಲ್ಲಿರುವ ಟೆಕ್ನಿಕಲ್ ಎಕ್ಸ್‌ಪರ್ಟ್‌ಗಳು ಈ ಅಗ್ರಿಮೆಂಟನ್ನು ಮೂಲಭೂತವಾಗಿ ಪುನರ್ವಿಮರ್ಶಿಸಬೇಕು. Dr. K. L. Rao. also confirmed a request from the Tamil Nadu Government for referring the dispute for adjudication to a tribunal as Mysore was not willing to guarantee that the 1924 accord would be adhered to. But even Tamil Nadu has given up 1924 Agreement, and they want adjudication outside and not under the agreement itself.

ತಮಿಳುನಾಡು ಸರ್ಕಾರದವರೇ ಅಗ್ರಿಮೆಂಟನ್ನು ವೈಯಲೇಟ್ ಮಾಡಿ ಅಮರಾವತಿ ಹಾಗೂ ಇನ್ನೂ ಅನೇಕ ಪ್ರಾಜೆಕ್ಟ್‌ಗಳನ್ನು ಕಟ್ಟಿಬಿಟ್ಟಿದ್ದಾರೆ ಹೀಗೆ ಮಾಡಿರುವಾಗ ನಾವು ಇದರ ಬಗ್ಗೆ ಆರ್‌ಬಿಟ್ರೇಷನ್‌ಗೆ ಇಲ್ಲವೇ ಅಡ್‌ಜುಡಿಕೇಷನ್ ಹೋಗುವ ಮುನ್ನ ನಮ್ಮಲ್ಲಿರುವ ಯೋಜನೆಗಳ ವಿವರಗಳನು ಪೂರ್ತಿಯಾಗಿ ಪುನರ್ವಿ ಮರ್ಶೆ ಮಾಡಿ ಇಲ್ಲಪೆ ಅನಂತರ ಕೋರ್ಟಿಗೆ ಹೋಗಬಹುದು. ಆಗ ಇದ್ದ ಸರಕಾರದಲ್ಲಿ ಯಾವ ರೀತಿಯಾದ ಅಗ್ರಿಮೆಟು ಆಗಿದೆ ಅದರಲ್ಲಿ ನಮ್ಮ ಹಕ್ಕು ಯಾವ ರೀತಿಯಾಗಿ ಇತ್ತು ಮತ್ತು ಇದರಲ್ಲಿ ಏನಾದರೂ ದುರುಪಯೋಗ ವಾಗಿದೆಯೇ ಮತ್ತು ಆಗ ಆಗಿರುವ ಅಗ್ರಿಮೆಂಟನ್ನು ಇಲ್ಲಿಚರ್ಚೆ ಮಾಡುವಾಗ ಅದರ ಬಗ್ಗೆ ಸ್ಪಷ್ಟವಾಗಿ ನಾಳೆ ಆರ್‌ಬಿಟ್ರೇಷನಗೆ ಹೋಗುವುದಕ್ಕೆಮುನ್ನ ನಮ್ಮ ಇಷ್ಯೆಸ್‌ಗಳು ಕ್ಲಿಯರ್ ಆಗಿದರೆ ಸರಿಯಾಗಿರುತ್ತೆ. ಈಗ ನಮ್ಮ ಇಷ್ಯೂಗಳೇನು ಎನ್ನುವುದೇ ಇನ್ನೂ ಸರಿಯಾಗಿ ಕ್ಲಿಯರ್ ಆಗಿಲ್ಲ. ನಾವೇ ಅನಾವಶ್ಯಕವಾಗಿ ಇದನ್ನು ಟ್ರಿಬ್ಯುನಲ್ ಮುಂದೆ ತಂದು ಅಡ್‌ಜುಡಿಕೇಷನ್ ಮಾಡುವಾಗ ೧೯೨೪ರಲ್ಲಿ ಮಾಡಿರುವ ಅಗ್ರಿಮೆಂಟು ಸರಿಯಾಗಿಲ್ಲ ಎಂದು ಸ್ಪಷ್ಟವಾಗಿ ಹೇಳಬೇಕೇ ಹೋದರೆ ಇದರ ಬಗ್ಗೆ ಸರಿಯಾದ ತೀರ್ಮಾನ ತೆಗೆದುಕೊಳ್ಳುವುದಕ್ಕೆ ಆಗುವುದಿಲ್ಲ. ಆದರೆ ತಮಿಳುನಾಡಿನ ಸರಕಾರ ೧೯೨೪ರ ಅಗ್ರಿಮೆಂಟು ಪ್ರಕಾರ ಸರಿಯಾಗಿಲ್ಲ ಎಂದು ಹೇಳುತ್ತಾ ಅವರ ಇಷ್ಯೂಗಳೇನು ಎನ್ನುವುದನ್ನೂ ಸ್ಪಷ್ಟವಾಗಿ ಹೇಳಿಲ್ಲ. ಇದು ಒಂದಕ್ಕೊಂದು ವಿರೋಧವಾಗುತ್ತದೆ. ರಿವರ್ ವಾಟರ್ ಡಿಸ್‌ಪ್ಯೂಟ್ಸ್ ಆಕ್ಟ್ ಪ್ರಕಾರ ರೆಪೇರಿಯನ್ ರೈಟ್ಸ್‌ಗಳು ಬರುತ್ತವೆ. ಇದರಂತೆ ಅಪ್ಪರ್ ರೀಜನ್‌ನಲ್ಲಿ ನೀರು ಬರದೇ ಇದ್ದರೆ ತೊಂದರೆಯಾಗುತ್ತದೆ, ಲೋಯರು ರೀಜನ್‌ನಲ್ಲಿ ನೀರು ಬಂದರೆ ಅವರಿಗೇನೂ ತೊಂದರೆ ಇಲ್ಲ. ಆದನ್ನು ಅವರು ಕಾಪಾಡಿಕೊಂಡು ಬರುತ್ತಾರೆ. ರಿವರ್ ಡಿಸ್‌ಪ್ಯೂಟ್ಸ್ ಆಕ್ಟ್ ಬಗ್ಗೆ ಅನೇಕ ಚರ್ಚೆಗಳೇ ಇವೆ. ಇದನ್ನು ನಾವು ನೋಡಿದರೆ ನಮಗೆ ಎಲ್ಲಾ ಗೊತ್ತಾಗುತ್ತದೆ ಮತ್ತು ಎಷ್ಟೋ ನಿದರ್ಶನಗಳೂ ನಮಗೆ ಸಿಗುತ್ತವೆ. ಅಪ್ಪರು ರೀಜನ್‌ನಲ್ಲಿ ನಮಗೆ ತೊಂದರೆಯಾಗಿದೆ ಎಂದು ನಾವುಹೇಳುತ್ತಿದ್ದರೂ ಆ ಕಡೆ ತಮಿಳುನಾಡು ಸರ್ಕಾರದವರ ಭವಾನಿ ಹಾಗೂ ಅಮರಾವತಿ ಇಂತಹ ಪ್ರಾಜೆಕ್ಟ್‌ಗಳನ್ನು ಆಗಲೇ ಕಟ್ಟಿಬಿಟ್ಟಿದ್ದಾರೆ. ಆದ್ದರಿಂದ ಅವರು ನಾವು ಅಗ್ರಿಮೆಂಟು ಅನುಸರಿಸುತ್ತಿಲ್ಲ ಎಂದು ಹೇಳುವುದರಲ್ಲಿ ಏನೂ ಅರ್ಥವಿಲ್ಲ ಟೆಕ್ನಿಕಲ್ ಎಕ್ಸ್‌ಪರ್ಟ್ ಈ ಅಗ್ರಿಮೆಂಟನ್ನು ಪೂರ್ತಿಯಾಗಿ ಪುನರ್ವಿಮರ್ಶೆ ಮಾಡಬೇಕು. ಇದರ ಬಗ್ಗೆ ನಮ್ಮ ಸರಕಾರದವರು ತಮಿಳು ನಾಡು ಸರಕಾರ ಹಾಗೂ ಕೇಂದ್ರ ಸರಕಾರ ಇವರಡರ ಜೊತೆಯಲ್ಲಿ ಚರ್ಚೆ ಮಾಡಬೇಕು. ಆದರೆ ಇಂದು ತಮಿಳುನಾಡು ಸರಕಾರದವರು ಕೇಂದ್ರದವರ ಮೇಲೆ ಒತ್ತಾಯ ತಂದು ತುರ್ತಾಗಿ ಇದರ ತೀರ್ಮಾನ ಮಾಡಬೇಕು ಇಲ್ಲದಿದ್ದರೆ ತಮಗೆ ಹಾನಿಯಾಗುತ್ತದೆ ಎಂದು ಹೇಳುವುದು ನೋಡಿದರೆ ನನಗೆ ಬಗ್ಗೆ ಒಂದು ಸಂದೇಹ ಬರುತ್ತಿದೆ. ಶ್ರೀ ಕೆ ಎಲ್ ರಾವ್ ರವರು ಇದರ ಬಗೆ ಏನು ಹೇಳಿದ್ದಾರೆಂದರೆ.

Dr. Rao was not willing to make public the proposals he had made to the Mysore Chief Minister for settlement of water dispute. ಇದು ಮಾನ್ಯ ಸಭೆಗೆ ಗೊತ್ತಿಲ್ಲ ಮತ್ತು ಮಾನ್ಯ ಮುಖ್ಯ ಮಂತ್ರಿಗಳು ಏನು ಹೇಳಿದ್ದಾರೋ ಅದೂ ನಮಗೆ ಗೊತ್ತಿಲ್ಲ. ಮುಖ್ಯಮಂತ್ರಿಗಳಿಗೆ ಕೆ. ಎಲ್. ರಾವ್ ಏನು ಹೇಳಿದ್ದಾರೆ ಎಂಬ ಸಂಶಯ ನಮಗೆ ಬರುತ್ತಿದೆ. ಅದನ್ನು ಅವರು ನಮ್ಮಿಂದ ಮರೆಮಾಚುತ್ತಿದ್ದಾರೆಂದು ಹೇಳಬಹುದು. ನಾವು ಏನು ಹೇಳುತ್ತೇವೆ ಎಂಬುದನ್ನು ಮೊದಲು ತಿಳಿದುಕೊಳ್ಳೋಣ ಎಂದು ಅವರು ಉದ್ದೇಶಪಟ್ಟಿರಬಹುದೆಂದು ಕಾಣುತ್ತದೆ. ಕೇಂದ್ರದ ಮಂತ್ರಿಗಳಿಂದ ಪತ್ರ ಬಂದ ಮೇಲೆ ವಿರೋಧಪಕ್ಷದವರನ್ನು ಸಮಾಲೋಚನೆಗಾಗಿ ಕರೆಸಿದ್ದರು. ನಾನು ಸಹ ಹೋಗಿದೆ. ಆಗಲೂ ಕೂಡ ವಿಷಯ ಏನು ಎಂಬುದನ್ನು ಸ್ಪಷ್ಟವಾಗಿ ಹೇಳಲಿಲ್ಲ. ಸಭೆಯಲ್ಲಿ ಏನಾದರು ಹೇಳಬಹುದು ಎಂದು ನಿರೀಕ್ಷೆ ಮಾಡಿದ್ದೇನೆ. ನಮ್ಮ ಸಂಶಯ

ಮೊದಲು ಹೋಗಬೇಕಾಗಿದೆ. ಶ್ರೀಮಾನ್ ಕೆ. ಎಲ್. ರಾವ್ ಅವರದ್ದು ನೆಗೆಟಿವ್ ಅಪ್ರೋಚ್, ಪಾಸಿಟೀವ್ ಅಪ್ರೋಚ್ ಅಲ್ಲ. ಅವರು ಹೇಳಿಕೆ ಕೊಡುವುದಕ್ಕೆ ಮೊದಲು ಎಲ್ಲರ ಅಭಿಪ್ರಾಯವನ್ನು ಕೇಳಬೇಕಾಗಿತ್ತು. ಬೇರೆ ರಾಜ್ಯದವರು ಅಗ್ರಿಮೆಂಟ್ ಪ್ರಕಾರ ನಡೆದುಕೊಂಡಿದ್ದಾರೆಯೇ ಎಂಬುದನ್ನು ಅವರು ಆಳವಾಗಿ ಯೋಚನೆ ಮಾಡಬೇಕಾಗಿತ್ತು. ಯೋಜನೆಯನ್ನು ಮುಂದುವರಿಸದರೆ ಹಣವ ಸಹಾಯ ಮಾಡುವುದಿಲ್ಲ ಎಂದು ಹೇಳಿರುವುದು ಸರಿಯಾದುದು ಅಲ್ಲ He has stated that we are not going to aid if you start project They must come to our aid taking into consideration the overall picture of the River Valley Project both in Tamil Nadu and Mysore State. ಶ್ರೀ ಕೆ. ಎಲ್ ರಾವ್ ಅವರು ಈ ರೀತಿ ಹೇಳಿರುವುದು ತೀರಾ ಅನ್ಯಾಯ ಕೇಂದ್ರದ ಮಂತ್ರಿಗಳು ಏನು ಹೇಳಿದ್ದಾರೆ ಆ ಬಗ್ಗೆ ಸರ್ಕಾರದವರು ವಿಚಾರ ಮಾಡಿ, ಪಂಚಾಯಿತಿಗೆ ಹೋಗುವುದಕ್ಕೆ ಕ್ರಮ ಕೈಕೊಳ್ಳಬೇಕು ಎಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

10-30 A M.

ಶ್ರೀ ಜಿ. ಎಂ. ಮಂಜುನಾಥಯ್ಯ (ಸೋಮವಾರಪೇಟೆ) :—ಮಾನ್ಯ ಅಧ್ಯಕ್ಷರೇ, ಕಾವೇರಿ ನದಿ ನೀರನ್ನು ಉಪಯೋಗಿಸುವ ಬಗ್ಗೆ ತುಂಬಾ ಚರ್ಚೆಯಾಗುತ್ತಿದೆ. ಈ ಮಧ್ಯೆ ನಾನು ಕೊಡಗಿನ ವಿಚಾರವನ್ನು ಹೇಳುವುದಕ್ಕೆ ನಿಂತಿದ್ದೇನೆ. ೧೯೫೪ ನೇ ಇಸವಿಯಲ್ಲಿ ಮೈಸೂರಿಗೂ ಮದ್ರಾಸಿಗೂ ಅಗ್ರಿಮೆಂಟ್ ಆಗುವ ಸಮಯದಲ್ಲಿ ಕೊಡಗೂ ಪ್ರತ್ಯೇಕವಾಗಿತ್ತು. ಈ ಅಗ್ರಿಮೆಂಟ್ ವಿಚಾರದಲ್ಲಿ ನಾವು ಏನು ಹೇಳುವುದಕ್ಕೂ ಅವಕಾಶ ಇರಲಿಲ್ಲ. ೧೯೫೬ ನೇ ಇಸವಿ ನವೆಂಬರ್ ತಿಂಗಳಲ್ಲಿ ಮೈಸೂರು ರಾಜ್ಯದೊಂದಿಗೆ ಕೊಡಗು ವಿಲೀನವಾದನಂತರವೂ ಕೂಡ ಈ ವಿಚಾರದಲ್ಲಿ ನಮಗೆ ಏನನ್ನೂ ಮಾತನಾಡುವುದಕ್ಕೆ ವಾಯ್ಸ್ ಇಲ್ಲ ಎಂಬ ಪರಿಸ್ಥಿತಿ ಬಂದಿದೆ. ಈ ವಿಚಾರದಲ್ಲಿ ನಮ್ಮ ಕೊಡಗಿನ ಜನರಿಗೆ ಬಹಳ ಕಳವಳ ಬಂದಿದೆ. ಶ್ರೀಮಾನ್ ಚೆನ್ನಬಸಪ್ಪನವರು ಮಂತ್ರಿಗಳಾಗಿದ್ದಾಗ ಅತಿ ಅವಸರದಿಂದ ಕಂಬದಕಡ, ಹಾರಂಗಿ ಮತ್ತು ಹೇಮಾವತಿ ಪ್ರಾಜೆಕ್ಟ್‌ಗಳ ಕೆಲಸವನ್ನು ಪ್ರಾರಂಭ ಮಾಡುವುದರಲ್ಲಿ ಇದ್ದರು. ಆಗ ಕೊಡಗಿನ ಜನರು ಈ ಯೋಜನೆಗಳನ್ನು ಕೈಕೊಳ್ಳುವುದರ ವಿರುದ್ಧ ಒಂದು ಪ್ರೊಟೆಕ್ಷನ್ ಕಮಿಟಿ (Protection of Coorg Committee) ಮಾಡಿ, ಆ ಕಮಿಟಿಯ ಮೂಲಕ ಒಂದು ಮನವಿಯನ್ನು ಸರ್ಕಾರಕ್ಕೂ ಇನ್ನೊಂದು ಮನವಿಯನ್ನು ಪ್ರೆಸಿಡೆಂಟರಿಗೂ ಸಲ್ಲಿಸಲಾಯಿತು. ಈ ವಿಚಾರದಲ್ಲಿ ಎಷ್ಟೋ ಚರ್ಚೆಗಳು ಆದವು ಶ್ರೀ ನಿಜಲಿಂಗಪ್ಪನವರನ್ನು ಕರೆಸಿಕೊಂಡು ಒಂದು ಕಾನ್‌ಫರೆನ್ಸ್ ಸಹ ನಡೆಸಲಾಯಿತು. ಈ ಯೋಜನೆಗಳನ್ನು ಕೈಕೊಳ್ಳುವುದರ ಬಗ್ಗೆ ಜನತೆ ಏನು ಹೇಳುತ್ತದೆ ಮತ್ತು ಯಾವ ರೀತಿ ಕಳವಳಪಟ್ಟಿದಾರೆ ಎಂಬ ತಿಳಿವಳಿಕೆಯನ್ನು ಶ್ರೀ ನಿಜಲಿಂಗಪ್ಪನವರಿಗೆ ಮನವರಿಕೆಮಾಡಿಕೊಟ್ಟೆವು ಶ್ರೀ ಕೆ. ಎಲ್. ರಾವ್ ಅವರು ಕೂಡ ಕೊಡಗಿಗೆ ಬಂದು ಹಾರಂಗಿ ಯೋಜನೆಯನ್ನು ಇಂತಹ ಸ್ಥಳದಲ್ಲಿ ಕಟ್ಟಬಹುದು ಎಂಬ ಬಗ್ಗೆ ಒಂದು ನಿಶ್ಚಯ ಕೈಕೊಂಡರು. ಕಂಬದಕಡ ಪಿಕ್ ಅಪ್‌ಅನ್ನು (pick up) ಕಟ್ಟಬಹುದು ಎಂಬ ಅಭಿಪ್ರಾಯವನ್ನು ಸರ್ಕಾರದವರು ಕೊಟ್ಟಿದ್ದಾರೆಂಬುದು ನನ್ನ ನಂಬಿಕೆಯಾಗಿದೆ ಈ ಪಿಕ್‌ಅಪ್‌ಅನ್ನು ಕಟ್ಟುವುದಕ್ಕೆ ಕೂಡ ಕೊಡಗಿನ ಜನರು ಕಳವಳ ವ್ಯಕ್ತಪಡಿಸಿದ್ದಾರೆ. ಇನ್ನತ್ತು ಹಾರಂಗಿ ಯೋಜನೆಯನ್ನು ಕೈಕೊಳ್ಳಬೇಕೆಂದು ನಿಶ್ಚಯಮಾಡಿ ಆ ಡ್ಯಾಗ್ಗೆ ಕೆಲಸ ಪ್ರಾರಂಭ ಮಾಡಿದ್ದಾರೆ. ಹೇಮಾವತಿ ಯೋಜನೆಯ ಬಗ್ಗೆ ಡ್ಯಾಮ್ ಕಟ್ಟುತ್ತಿದ್ದಾರೆ. ಹೇಮಾವತಿ ಯೋಜನೆ ಮುಗಿದ ಮೇಲೆ ಕೊಡಗಿನ ಕೆಲವು ಭಾಗಗಳು ಮುಳುಗಡೆಯಾಗುತ್ತವೆ. ಅದರಂತೆ ಹಾರಂಗಿ ಯೋಜನೆಯಿಂದ ಕೂಡ ಎಷ್ಟೋ ಭಾಗಗಳು ಮುಳುಗಡೆಯಾಗುತ್ತವೆ. ಲಕ್ಷ್ಮಣತೀರ್ಥ ಯೋಜನೆಯ ಬಗ್ಗೆ ಕೂಡ ಪ್ಲಾನ್ ಹಾಕುತ್ತಿದ್ದಾರೆ. ಕಂಬದಕಡ ಯೋಜನೆಯಿಂದ ಎಷ್ಟು ಭಾಗ ಮುಳುಗಡೆಯಾಗುತ್ತದೆ ಎಂಬುದನ್ನು ಅಲೋಚನೆ ಮಾಡಬೇಕಾಗುತ್ತದೆ.

SRI H. N. NANJE GOWDA:—The scope of the debate is very limited. We are discussing over the statement made by Dr. Rao. Therefore there is no scope for the Hon. Member to ventilate his grievances here.

SRI G. M. MANJUNATHIAH:—To make it very clear I am going to read a portion of the memorandum submitted by the Coorg Protection Committee to the then Minister for P. W. D. Sri H. M. Channabasappa. It reads:

(SRI G. M. MANJUNATHIAH)

The people of Coorg wish to point out that the States Re-organisation Commission while recommending the integration of Coorg in the Karnataka State have specifically recommended that Coorg should be demarcated as a 'separate District of the prospective Karnataka State' (new Mysore State) which in effect is in unqualified assurance for the maintenance of the integrity of the Coorg District. It is not mere sentiment that has influenced the people of Coorg against the proposed High Dams in as much as the construction of any storage dams across the Cauvery and the Harangi Rivers in Coorg will directly result in the submersion of thousands of acres of coffee, cardamom, orange, rubber and other plantations as well as thousands of acres of fertile paddy fields apart from the adverse consequences....."

ಶ್ರೀ ಎಚ್. ಎನ್. ನಂಜೇಗೌಡ:—ಈ ಬಗ್ಗೆ ಸಂದರ್ಭದಲ್ಲಿ ನಾನು ಮಾನ್ಯ ಸದಸ್ಯರನ್ನು ಪ್ರಾರ್ಥನೆ ಮಾಡಿಕೊಳ್ಳುವುದೇನೆಂದರೆ, ಪಿ. ಡಬ್ಲ್ಯೂ. ಡಿ ಡಿಮ್ಯಾಂಡ್ ಬಂದಾಗ ಈ ವಿಚಾರಗಳನ್ನು ಹೇಳಬಹುದು. ಈಗ ಇದನ್ನೆಲ್ಲಾ ಹೇಳಿದರೆ ನಾವು ಮಾಡುತ್ತಿರುವ ಚರ್ಚೆಯು ತೂಕ ಕಡಿಮೆಯಾಗುತ್ತದೆ. ಆದ್ದರಿಂದ ವಿಷಯದ ಬಗ್ಗೆ ಮಾತನಾಡುವುದು ಒಳ್ಳೆಯದು.

SRI G. M. MANJUNATHIAH:—I am speaking on behalf of Coorg. I will read the quotation:

"..... apart from the adverse consequences, both direct and indirect, arising out of marshiness and waterlogging of extensive areas and submersion of major bridges and two highways connecting north and south Coorg"

ಕಂಬದಕಡ ರಿಜರ್‌ವಾಯರ್ ಕಟ್ಟಿದರೆ ಕೊಡಗನ್ನೇ ಎರಡು ಭಾಗ ಮಾಡಿದಂತೆ ಆಗುತ್ತದೆ ಇದರಿಂದ ಏನು ತೊಂದರೆಯಾಗುತ್ತದೆ ಎಂಬುದು ಅನೇಕರಿಗೆ ಗೊತ್ತಾಗುತ್ತಿಲ್ಲ ಕಾವೇರಿ ನದಿ ಇಡಿ. ಕೊಡಗಿನ ಪ್ರದೇಶದಲ್ಲಿ ಅಡ್ಡವಾಗಿ ಹರಿಯುತ್ತಿದೆ. ಕಂಬದಕಡ ರಿಜರ್‌ವಾಯರ್ ಕಟ್ಟುವುದರಿಂದ ಕೊಡಗು ಎರಡು ಭಾಗವಾಗುವುದಲ್ಲದೆ ಸುಮಾರು ೨೫ ಮೈಲಿಗಳಷ್ಟು ಪ್ರದೇಶ ಮುಳುಗಡೆಯಾಗುತ್ತದೆ. ಭಾಗಮಂಡಲದ ಹತ್ತಿರವಿರುವ ತಲಕಾವೇರಿಯಲ್ಲಿ ಸ್ನಾನ ಮಾಡಲು ಹಿಂದೂಸ್ತಾನದ ಎಲ್ಲಾ ಭಾಗದಿಂದಲೂ ಕೂಡ ಯಾತ್ರಾರ್ಥಿಗಳು ಬರುತ್ತಿದ್ದಾರೆ. ಕಂಬದಕಡ ಯೋಜನೆಗೂ ಭಾಗಮಂಡಲಕ್ಕೂ ಇರುವ ಅಂತರ ೧೮೦ ಅಡಿಗಳು ಮಾತ್ರ. ಕಂಬದಕಡ ಯೋಜನೆಯಿಂದ ಯಾತ್ರಾರ್ಥಿಗಳಿಗೂ ಕೂಡ ಬಹಳ ತೊಂದರೆಯಾಗುತ್ತದೆ. ಆದ್ದರಿಂದ ಈ ಯೋಜನೆಯನ್ನು ಅನೇಕರು ಪ್ರತಿಭಟನೆ ಮಾಡುತ್ತಿದ್ದಾರೆ. ಈ ಯೋಜನೆಯಿಂದ ಮೈಸೂರು ಸರ್ಕಾರಕ್ಕೂ ಕೂಡ ಅನೇಕ ರೀತಿಯಿಂದ ಬರುತ್ತಿದ್ದ ಆದಾಯ ತಪ್ಪಿಹೋಗುತ್ತದೆ ಆದ್ದರಿಂದ ಇವನ್ನು ಸರ್ಕಾರದವರು ಆರ್ಥಿಕ ದೃಷ್ಟಿಯಿಂದ ವಿಚಾರ ಮಾಡಿ ನೋಡುವುದು ಒಳ್ಳೆಯದು.

ಅಧ್ಯಕ್ಷರು:—ತಾವು ಹೇಳುತ್ತಾ ಇರುವುದು ನಮ್ಮ ಮುಂದಿರುವ ವಿಷಯಕ್ಕೆ ಸಂಬಂಧಪಡುವುದಿಲ್ಲ. ಈ ವಿಚಾರದ ಬಗ್ಗೆ ಬೇಕಾದರೆ ತಾವು ಪಿ. ಡಬ್ಲ್ಯೂ. ಡಿ. ಡಿಮ್ಯಾಂಡ್ ಬಂದ ಕಾಲಕ್ಕೆ ಮಾತನಾಡಬಹುದು. ಈಗ ಅದನ್ನೆಲ್ಲಾ ಪ್ರಸ್ತಾಪ ಮಾಡುವುದು ಬೇಡ.

ಶ್ರೀ ಜಿ. ಎಂ ಮಂಜುನಾಥಯ್ಯ:—ನಾನು ಕೊಡಗಿಗೆ ಸಂಬಂಧಪಟ್ಟಂತೆ ಮಾತ್ರ ಹೇಳುತ್ತಿದ್ದೇನೆ.

SRI H. N. NANJE GOWDA:—May I take that he is supporting the Indian Government ?

SRI G M. MANJUNATHIAH:—I would like to tell a story in this connection. In England there was a proposal to build a dam in certain place. The people of that area objected on the ground that construction of dam would spoil the beauty of the place. England is a Democratic Country. It yielded to the wishes of the people and did not construct the dam. Here the Coorg District will be ruined if all the dams come into existance. It is a misfortune that the Coorg District has joined the Mysore State. If the voice of the coorg is ignored by the Government, it is the denial of the democratic rights of the people of that District. To save time I will not take much time of the House and I will stop my talking by lodging my protest against construction of dams in Coorg District and my protest must be recorded. In the memorandum we have stated what is the capital loss to this District.

SRI H. N. NANJE GOWDA:—We have also ascertained the facts from the Coorg District I know what is the opinion of the Coorg people.

SRI G M. MANJUNATHIAH:—We have stated in the memorandum the total capital loss to the Government would be about Rs. 16 crores and 71 lakhs as estimated somewhere in 1958–59 Today, the loss will be much more than that. This aspect may be taken into consideration while deciding about Kambadakada Project.

I thank the Chair for the opportunity given to me.

† ಶ್ರೀ ಎಂ. ಮುಂಜೇಗೌಡ (ಮದ್ದೂರು): ಸನ್ಮಾನ್ಯ ಸಭಾಧ್ಯಕ್ಷರೇ, ೧೯೪೪ನೇ ಇಸವಿಯಲ್ಲಿ ನಮ್ಮ ರಾಜ್ಯಕ್ಕೂ, ಮತ್ತು ಮದ್ರಾಸಿನವರಿಗೂ ನಡುವೆ ಆಗಿರತಕ್ಕಂಥ ಒಪ್ಪಂದದ ಬಗ್ಗೆ ಅನೇಕ ಸ್ನೇಹಿತರು ತಮ್ಮ ಅಭಿಪ್ರಾಯಗಳನ್ನು ವ್ಯಕ್ತಪಡಿಸಿದ್ದಾರೆ. ಆದರೆ ಕೆಲವು ಸ್ನೇಹಿತರು ಈ ಬಗ್ಗೆ ಮಾತನಾಡುತ್ತಾ ಆಗ ಮಾಡಿರತಕ್ಕ ಒಪ್ಪಂದ ಕ್ರಮಬದ್ಧವಾಗಿಲ್ಲ, ಈ ಬಗ್ಗೆ ನಮಗೆ ನ್ಯಾಯದೊರೆಯಬೇಕಾದರೆ ಇದನ್ನು ಪಂಜಾಯಿತಿಗೆ ಒಪ್ಪಿಸಬೇಕು ಎಂದು ಸೂಚನೆ ಮಾಡಿದ್ದಾರೆ. ೧೯೪೪ನೇ ಇಸವಿಯಿಂದ ಈಚೆಗೆ ಒಂದೇ ಸಮನೆ ಮದ್ರಾಸ್ ಸರ್ಕಾರದವರು ಈ ಒಪ್ಪಂದವನ್ನು ಉಲ್ಲಂಘನೆ ಮಾಡಿ, ಒಪ್ಪಂದಕ್ಕೆ ವಿರೋಧವಾಗಿ ತಮ್ಮ ಅಚ್ಚುಕಟ್ಟನ್ನು ಹೆಚ್ಚುಮಾಡಿಕೊಂಡು ಬಂದಿದ್ದಾರೆ ಮತ್ತು ಈ ರೀತಿ ಒಪ್ಪಂದವನ್ನು ಮುರಿದಿರತಕ್ಕ ಮದ್ರಾಸಿನ ಬಗ್ಗೆ ಭಾರತ ಸರ್ಕಾರದವರು ಏನು ಅಭಿಪ್ರಾಯವನ್ನು ತಳಿದ್ದಾರೆ? ಈಗ ಮೈಸೂರಿನ ಬಗ್ಗೆ ಏನು ಅಭಿಪ್ರಾಯವನ್ನು ತಳಿದ್ದಾರೆ? ಈ ಅಭಿಪ್ರಾಯವನ್ನು ಹಿಂದಯೇ ಮದ್ರಾಸ್ ಸರ್ಕಾರದಬಗ್ಗೆ ಕೇಂದ್ರ ಸರ್ಕಾರ ತಾಳಿದ್ದರೆ? ಈ ಒಪ್ಪಂದ ಮುರಿದು ಬೀಳುತ್ತಾ ಇರಲಿಲ್ಲ ಮೂರು ಜನಗಳು ಸೇರಿ ಇವರ ಮಧ್ಯೆ ಆಗಿರತಕ್ಕಂಥ ಒಪ್ಪಂದ ಮುರಿದು ಬೀಳಬೇಕಾದರೆ ಭಾರತ ಸರ್ಕಾರದವರೂ ಕೂಡ ಇದಕ್ಕೆ ಒಂದು ಪಾರ್ಟಿಯಾಗಿದ್ದಾರೆ ಯಾವಾಗ ಭಾರತ ಸರ್ಕಾರ ಒಪ್ಪಿಕೊಂಡಂತಹ ಮದ್ರಾಸಿನ ಒಪ್ಪಂದವನ್ನು ಅವರು ಮುರಿದು ಹಾಕಿದ್ದಾರೋ ಆದಕ್ಕೆ ನಾವು ಮಾನ್ಯತೆಯನ್ನು ಕೊಡಬೇಕಾದ್ದು ಅನಾವಶ್ಯಕ ಈ ದೃಷ್ಟಿಯಿಂದ ಇದನ್ನು ಪಂಚಾಯಿತಿಗೆ ಒಪ್ಪಿಸಬೇಕಾಗಿಲ್ಲ ಯಾವ ಒಂದು ಟ್ರಿಬ್ಯುನಲ್‌ಗೂ ಇದು ಹೋಗಬೇಕಾಗಿಲ್ಲ. ನಾವು ಒಪ್ಪಂದದ ರೀತ್ಯಾ ನಮಗೆ ದೊರೆಯ ಬೇಕಾದ ಸೌಲಭ್ಯವನ್ನು ದೊರಕಿಸಿ ಕೊಳ್ಳಬೇಕಾಗಿದೆ. ನಮ್ಮ ನ್ಯಾಯವಾಗ ಹಕ್ಕನ್ನು ದೃಷ್ಟಿಯಲ್ಲಿ ಇಟ್ಟುಕೊಂಡು ನಾವು ಈಗ ಯೋಜನೆಗಳನ್ನೇನು ಹಾಕಿಕೊಂಡಿದ್ದೇವೊಕಿ, ಅವುಗಳನ್ನು ಮುಂದುವರಿಸಿಕೊಂಡು ಹೋಗತಕ್ಕಂಥಾದ್ದು

(ಶ್ರೀ ಎಂ. ಮಂಚೇಗೌಡ)

ಒಂದು. ಎರಡನೆಯದು ವೊದಲು ಕಾವೇರಿ ನದಿಯು ಕೊಡಗಿನಲ್ಲಿ ಹುಟ್ಟಿ, ಮೈಸೂರಿನಲ್ಲಿ ಹರಿದು ಮದ್ರಾಸಿಗೆ ಸೇರುತ್ತದೆ. ಇಂದಿನ ಪರಿಸ್ಥಿತಿಯಲ್ಲಿ ಕೊಡಗು ಜಿಲ್ಲೆ ಮೈಸೂರಿಗೆ ಸೇರಿದೆ. ಹಿಂದಿನ ಒಪ್ಪಂದ ರೂಲ್ಸ್ ಮತ್ತು ರೆಗ್ಯುಲೇಷನ್ ಅನ್ನು ಗಮನಕ್ಕೆ ತೆಗೆದುಕೊಂಡರೆ ಮದ್ರಾಸಿನವರಿಗೆ ಬರಬೇಕಾದಂತಹ ನೀರಿಗೆ ಅವರು ಈಗಾಗಲೇ ಯೋಜನೆಯನ್ನು ಮಾಡಿ ಅವಗಲ್ಲಿ ಎಷ್ಟು ಜಮೀನು ವರೀ ವ್ಯವಸಾಯಕ್ಕೆ ಲಾಯಖ್ಖಾಗಿದೆಯೋ ಅಷ್ಟೂ ಜಮೀನನ್ನು ಗಮನಕ್ಕೆ ತೆಗೆದುಕೊಂಡು ಮದ್ರಾಸ್ ರಾಜ್ಯದಲ್ಲಿ ಅವರಿಗೆ ನೀರಾವರಿಗೆ ಎಷ್ಟು ನೀರು ಬೇಕೋ ಅಷ್ಟು ನೀರಿನ ಪ್ರಮಾಣವನ್ನು ಲೆಕ್ಕ ಹಾಕಿ ರೂಲ್ಸ್ ಅಂಡ್ ರೆಗ್ಯುಲೇಷನ್‌ನಲ್ಲಿ ಸೇರಿಸಿಕೊಂಡಿದ್ದಾರೆ. ಕಳೆದ ಟಿ.ಎಂ.ಸಿ.ಎಫ್ ಟಿ. ನೀರನ್ನು ಕನ್ನಂಬಾಡಿ ಕಟ್ಟೆಯಲ್ಲಿ ಹಿಡಿಯಬಹುದಕ್ಕೆ ಅವಕಾಶವಿದ್ದರೂ ಕೂಡ, ಇಂಪೌಂಡ್ ರೂಲ್ಸ್, ಪ್ರಕಾರ ಕೆ.ಆರ್.ಎಸ್. ಕೆಳಗಡೆ ಒಂದು ಲಕ್ಷ ಮೂವತ್ತು ಸಾವಿರ ಎಕರೆ ಅಚ್ಚುಕಟ್ಟಿಗೆ ಅದು ಡೆವಲಪ್ ಆಗಲು ಇನ್ನೂ ನೀರು ಸರಬರಾಜು ಮಾಡಿಲ್ಲ ರೂಲ್ಸ್ ಆಫ್ ಇಂಪೌಂಡ್ ಪ್ರಕಾರ ನಡೆದರೆ ಕೆ.ಆರ್.ಎಸ್. ಕೆಳಗಡೆ ನಾವು ಬೇಸಾಯ ಮಾಡುವುದಕ್ಕೆ ಸಾಧ್ಯವಿಲ್ಲ. ನಾವು ಹೇಮಾವತಿ, ಕಂಬದಕಡ, ಹಾರಂಗಿ, ಮತ್ತು ಕಪಿನಿ ಈ ಜಲಾಶಯಗಳಲ್ಲಿ ನೀರನ್ನು ಕೂಡಿಸಿ ಇಟ್ಟುಕೊಳ್ಳುವುದಕ್ಕೆ ಸಾಧ್ಯವಿಲ್ಲ. ಕೇಂದ್ರ ಸರ್ಕಾರದವರು ನಮ್ಮ ಯೋಜನೆಗಳಿಗೆ ಒಪ್ಪಿಗೆಯನ್ನು ಕೊಡದಿದ್ದರೂ ನಾವು ಯೋಜನೆಗಳನ್ನು ಹಾಕಿಕೊಂಡಿದ್ದೇವೆ. ಅವುಗಳನ್ನು ನಾವು ಕಾರ್ಯಗತ ಮಾಡಬೇಕು. ಈ ಯೋಜನೆಗಳ ಬಗ್ಗೆ ಕೇಂದ್ರ ಸರ್ಕಾರದವರು ಪಕ್ಷಪಾತ ನೀತಿಯನ್ನು ಅನುಸರಿಸುತ್ತಿದ್ದಾರೆ ಎನ್ನುವುದು ನಮಗೆ ಸ್ಪಷ್ಟವಾಗಿದೆ. ಅವುಗಳನ್ನು ಯಾವುದೇ ಕಾರಣಕ್ಕೂ ನಾವು ಲೆಕ್ಕಿಸದೆ ಹಾಕದೆ ಈ ಯೋಜನೆಗಳನ್ನು ಕಾರ್ಯಗತ ಮಾಡಬೇಕೆಂದು ನಾನು ಹೇಳುತ್ತೇನೆ.

† ಶ್ರೀ ಎಂ. ಕೆ. ಬೊಮ್ಮೇಗೌಡ (ಕೃಷ್ಣರಾಜಪೇಟೆ).—ಮಾನ್ಯ ಅಧ್ಯಕ್ಷರೇ, ಈ ದಿವಸ ನಮ್ಮ ಕಾವೇರಿ ಬೇಸಿನ್ನಿನ ನೀರಿನ ವಿಚಾರದಲ್ಲಿ ಒಂದು ಉಲ್ಬಣ ಪರಿಸ್ಥಿತಿ ಬಂದಿದೆ. ಈಗ ಆದು ಎಲ್ಲರಿಗೂ ಮನವರಿಕೆಯಾಗುತ್ತಿದೆ. ಸರ್ಕಾರಕ್ಕೆ ಈಗ ಆದರಮೇಲೆ ವಿಶೇಷವಾದ ಒಂದು ಪರಿಣಾಮವಾಗಿದೆ. ಕೇಂದ್ರದ ನೀರಾವರಿ ಮಂತ್ರಿಗಳಾದ ಶ್ರೀ ಕೆ.ಎಲ್. ರಾವ್ ಅವರು ನಮ್ಮ ಕಾವೇರಿ ಬೇಸಿನ್ನಿನ ಪ್ರಾಜೆಕ್ಟುಗಳ ಕೆಲಸವನ್ನು ನಿಲ್ಲಿಸಿ ಎಂದು ಹೇಳಿದ ಮೇಲೆ ಈಗ ಇವರು ಸ್ವಲ್ಪ ಓಡಾಡುತ್ತಿದ್ದಾರೆ ಆದರೆ ಇದೇ ಸ್ಪಿರಿಟ್ಟನ್ನು, ಸ್ಫೂರ್ತಿಯನ್ನು ಹಿಂದಯೇ ಹೊಂದಿ ನಮ್ಮ ದೇಶದಲ್ಲಿರತಕ್ಕ ಕಾವೇರಿ ನೀರನ್ನು ಆದಕ್ಕೆ ಸಂಬಂಧಪಟ್ಟ ಟ್ರಿಬ್ಯುಟರಿಗಳ ನೀರನ್ನು ಉಪಯೋಗ ಮಾಡಬೇಕು, ಅದರಿಂದ ನಮ್ಮ ನೀರಾವರಿ ವ್ಯವಸಾಯ ಹೆಚ್ಚಾಗುತ್ತದೆ. ಉತ್ಪನ್ನವಾಗುತ್ತದೆ. ಅದರಿಂದ ನಮಗೆ ಫಾಯಿದೆ ಉಂಟಾಗುತ್ತದೆ ಎನ್ನುವ ಕುತೂಹಲವನ್ನು ಹೊಂದಿ ಸ್ಟಡಿಯಿಂದ ಕೆಲಸ ಮಾಡಿದರೆ ಈ ನೀರಿನ ವಿಚಾರ ಇಷ್ಟು ಆಗುತ್ತಾ ಇರಲಿಲ್ಲ. ಕಾವೇರಿ ನದಿಯ ನೀರಿನ ಉಪಯೋಗಕ್ಕೆ ಸಂಬಂಧಪಟ್ಟ ಹಾಗೆ ನಮಗೂ ಮತ್ತು ಮದ್ರಾಸಿನ ವರಿಗೂ ಏನು ಒಂದು ಅಗ್ರಿಮೆಂಟು ಇತ್ತಲ್ಲ ನೇ ಇಸವಿಯಲ್ಲಿ ಆಗಿದೆ ಅದನ್ನು ಒಂದು ಅಗ್ರಿಮೆಂಟ್ ಎಂದು ಹೇಳುವುದಕಾಗುವುದಿಲ್ಲ. ಅದು ಅವರು ನಮ್ಮ ಮೇಲೆ ಹೊರಸಿರತಕ್ಕಂಥಾದ್ದು. ನಮ್ಮ ಮೈಸೂರಿನಲ್ಲಿ ಸರ್.ಎಂ. ವಿಶ್ವೇಶ್ವರಯ್ಯನವರು ದಿವಾನರಾಗಿದ್ದಾಗ ಅವರು ನಮ್ಮ ಮೈಸೂರಿನ ಪರವಾಗಿ ಮದ್ರಾಸಿಗೆ ಹೋಗಿದ್ದರು ಆಗ ಮದ್ರಾಸಿನ ಪರವಾಗಿ ಬ್ರಿಟೀಷ್ ಪ್ರತಿನಿಧಿಗಳಾಗಿರತಕ್ಕ ಗೌರ್ನರ್ ಅವರು ಈ ನದೀ ನೀರಿನ ಹಂಚಿಕೆಯ ಮೀಟಿಂಗಿಗೆ ಹೋಗಿದ್ದರು. ಈ ಮೀಟಿಂಗಿಗೆ ನಮ್ಮ ಮೈಸೂರಿನ ಪರವಾಗಿ ಸರ್.ಎಂ. ವಿಶ್ವೇಶ್ವರಯ್ಯನವರು ಹೋಗಿದ್ದಾಗ ಈ ಅಗ್ರಿಮೆಂಟ್ ಆಗಿರತಕ್ಕದ್ದು. ಅದನ್ನು ಆಗ ಮದ್ರಾಸಿನ ಗೌರ್ನರ್ ಅವರು ನಮಗೆ ಬಲಾತ್ಕಾರವಾಗಿ ಹೊರಸಿರತಕ್ಕದ್ದು. ಆಗ ಸರ್ ಎಂ ವಿಶ್ವೇಶ್ವರಯ್ಯನವರು ಅನ್ಯಾಯವಾಗಿ ನಮ್ಮ ಮೇಲೆ ಈ ಅಗ್ರಿಮೆಂಟನ್ನು ಹೊರಸುತ್ತಿದ್ದೀರಿ ಎಂದು ಹೇಳಿದ್ದಾರೆ. ಆಗ ವಿಧಿಯಿಲ್ಲದೆ ಕನ್ನಂಬಾಡಿ ಅಣೆಕಟ್ಟಿಗೆ ಪರ್ಮಿಷನ್ ಸಿಕ್ಕಿದರೆ ಸಾಕು ಎಂದು ಆ ಅಗ್ರಿಮೆಂಟನ್ನು ಒಪ್ಪಿಕೊಂಡು ಬಂದರು. ಆದರೆ ಆ ಅಗ್ರಿಮೆಂಟ್ ನ್ಯಾಯಬದ್ಧವಾದ, ಶಾಸ್ತ್ರೀಯವಾದ, ಕಾನೂನುಬದ್ಧವಾದ ಅಗ್ರಿಮೆಂಟ್ ಆಗಲಿಲ್ಲ. ಆ ರೀತಿ ತಿಳಿದುಕೊಂಡೂ ಇರಲಿಲ್ಲ. ಅವರು ಕನ್ನಂಬಾಡಿ ಕಟ್ಟೆಯನ್ನು ಕಟ್ಟುವ ಪ್ರಯತ್ನ ದಲ್ಲಿದ್ದಾಗ, ಕೆಲವು ಕಂಡಿಷನ್ಸ್ ಹಾಕಿದ್ದಾರೆ. ಕಟ್ಟೆ ಕಟ್ಟಕೂಡದೆಂದು ಮದ್ರಾಸಿನವರು ಅಡಚಣೆ ಗಳನ್ನು ತಂದು ಆಪಂಕ ಪಡಿಸಿದರು ಮತ್ತು ಆಗಿದ್ದ ವೈಸ್‌ರಾಯಿಯವರು ಮದ್ರಾಸ್ ಸರ್ಕಾರಕ್ಕೆ ಬೆಂಬಲ ಕೊಟ್ಟರು. ನಮ್ಮವರು ಏನೇ ಆಗಲಿ, ಕಟ್ಟೆಯೇ ಆಗಬೇಕೆಂದು ಯಾವ ಕಂಡೀಷನ್ ಹಾಕಿದರೂ ಒಪ್ಪಿಕೊಂಡು ಬಂದರು ಬ್ರಿಟಿಷ್ ರಾಜ್ಯ ಹೋದ ಮೇಲೆ ಪ್ರಜಾ ನಾಯಕರು ಆಳುವುದಕ್ಕೆ ಶುರು ಆದ ಮೇಲೂ ನಾವು ಕಂಡೀಷನ್ನು ಮನ್ನಣೆ ಮಾಡಿಕೊಂಡೇ ಬಂದವು. ಆದರೆ ತಮಿಳುನಾಡು ಸರ್ಕಾರದವರು ಅದನ್ನು ಮನ್ನಣೆ ಮಾಡಿಲ್ಲ. ಹಿಂದೆ ನಾನು ತಮಿಳುನಾಡು ಸರ್ಕಾರದವರು ನಮ್ಮಲ್ಲಿ ಗ ಅಗ್ರಿಮೆಂಟ್ ಪ್ರಕಾರ ನಡೆದಿದ್ದಾರೆಯೇ ಎನ್ನತಕ್ಕ ಪ್ರಶ್ನೆ ಹಾಕಿದಾಗ ಇಲ್ಲ, ಅವರು ಅಗ್ರಿಮೆಂಟಿಗೆ ತಪ್ಪಿರುವ್ದಾವಾಗಿ ನಡದು ಒಂದು ಲಕ್ಷ ಜಮೀನು ಅಚ್ಚುಕಟ್ಟು ಮಾಡಿಕೊಂಡಿದ್ದಾರೆಂದು ಉತ್ತರ ಕೊಟ್ಟಿದ್ದಾರೆ. ನಾನಾದರೂ

ಹೇಳುತ್ತೇನೆ, ಇದು ಅಗ್ರಿಮೆಂಟಲ್ಲ, ನಮ್ಮ ಮೇಲೆ ಬಲಾತ್ಕಾರವಾಗಿ ಹಾಕಿರತಕ್ಕ ಕಂಡೀಷನ್, ಅಷ್ಟೇ ತಮಿಳುನಾಡು ಸರ್ಕಾರದವರು ನ್ಯಾಯಬಾಹಿರವಾಗಿ ಅಗ್ರಿಮೆಂಟ್ ಮಾಡಿ, ಅವರು ಆ ಅಗ್ರಿಮೆಂಟಿಗೆ ವಿರುದ್ಧವಾಗಿ ನಡೆಯುತ್ತಾ ಇರುವಾಗ, ನಾವಾಗಲಿ, ನಮ್ಮ ಅಧಿಕಾರಿಗಳಾಗಲಿ. ಪ್ರಾಮಾಣಿಕವಾಗಿ ನಡೆಯುತ್ತಾ ಇರುವುದು ಬಹಳ ಶೋಚನೀಯವಾದ ವಿಚಾರ. ಎಷ್ಟುಮಟ್ಟಿಗೆ ನಮ್ಮ ರೈಪೇರಿಯನ್ ರೈಟ್ಸ್‌ನ್ನು ಎತ್ತಿ ಹಿಡಿದಿದ್ದಾರೆಂಬುದನ್ನು ನೋಡಬೇಕಾಗಿದೆ. ಇಲ್ಲಿಯತನಕ ಕಾಂಗ್ರೆಸಿನವರು ರಾಜ್ಯಭಾರ ಮಾಡಿಕೊಂಡು ಬಂದಿದ್ದಾರೆ. ೨೨ ವರ್ಷಗಳಿಂದ ನಾನು ನೋಡುತ್ತಿದ್ದೇನೆ. ನಮ್ಮ ರೈಪೇರಿಯನ್ ರೈಟ್ಸನ್ನು ಉಲ್ಲಂಘನೆ ಮಾಡಿದ್ದಾರೆ. ನಾವು ಈಗ ಏನಾದರೂ ಕೆಲಸ ಮಾಡುತ್ತಿದ್ದರೆ, ಮಾನ್ಯ ಕೆ. ಎಲ್. ರಾವ್‌ಅವರು ನಮ್ಮ ಕೆಲಸಗಳನ್ನು ನಿಲ್ಲಿಸಿ ಎಂದು ಹೇಳುತ್ತಿದ್ದಾರೆ. ತಮಿಳುನಾಡು ಸರ್ಕಾರದವರು ಮಾಡಿರತಕ್ಕ ಲೋಪಗಳನ್ನು ನಾವು ಅವರ ಮುಂದೆ ಇದಕ್ಕೆ ಮೊದಲು ಇಡಲಿಲ್ಲವೇ? ಇಪ್ಪತ್ತಿನದಿವಸ ಅಮರಾವತಿ ಮತ್ತು ಭವಾನಿ ಆಣೆಕಟ್ಟುಗಳಲ್ಲದೆ ಇನ್ನೂ ಅನೇಕ ಪ್ರಾಜೆಕ್ಟುಗಳನ್ನು ಕಟ್ಟಿಕೊಂಡು ಲಕ್ಷಾಂತರ ಎಕರೆಗಳ ಮೇಲೆ ಅಚ್ಚುಕಟ್ಟನ್ನು ಮಾಡಿಕೊಂಡಿದ್ದಾರೆ. ಆದರೆ ನಾವು ಏನೂ ಮಾಡಿಲ್ಲ. ನಾವು ಅಗ್ರಿಮೆಂಟ್ ಪ್ರಕಾರ ಕೆಲಸ ಮಾಡುತ್ತಾ ಹೋಗುವುದನ್ನು ನಿಲ್ಲಿಸಬೇಕು. ಇವತ್ತು ಕೇಂದ್ರದಿಂದ ಬಾವಿರತಕ್ಕ ಪತ್ರಕ್ಕೆ ಸರಿಯಾದ ಉತ್ತರ ಕೊಡಬೇಕು. ಈಗ ನಿಮ್ಮ ಕೆ.ಎಲ್ ರಾವ್ ಅವರಿಗೆ ಬರೆದು, ನಾವು ಇದನ್ನು ನಿಲ್ಲಿಸಲಾಗುವುದಿಲ್ಲ. ನಾವು ನಮ್ಮ ಪಾಲಿನ ನೀರನ್ನು ಉಪಯೋಗಿಸಿಕೊಳ್ಳಬೇಕು ಎಂದು ದಿಟ್ಟತನದಿಂದ ಹೇಳಿ ಮುಂದೆ ಹೆಜ್ಜೆ ಇಡಿ, ಆಗ ನಾವು ನಿಮಗೆ ಬೆಂಬಲ ಕೊಡುತ್ತೇವೆ. ನಾವು ನಮ್ಮ ರಾಜ್ಯದ ಹಿತದ ಪಿಟ್ಟಿಯಿಂದ, ನಮ್ಮ ದೇಶದ ಹಿತದೃಷ್ಟಿಯಿಂದ ನಮ್ಮ ಬೆಂಬಲವನ್ನು ಇದಕ್ಕೆ ಕೊಡುತ್ತೇವೆ. ಇವತ್ತು ನಮ್ಮ ನೀರಿನ ಪ್ರಶ್ನೆ ಬಹಳ ದೊಡ್ಡದು. ಇಪ್ಪತ್ತಿನ ದಿವಸ ದೇಶದಲ್ಲಿ ಬಡತನ ನಿವಾರಣೆಯಾಗಬೇಕಾದರೆ ನಮ್ಮದೇಶದ ಏಳಿಗೆಯಾಗಬೇಕಾದರೆ ಇನ್ನು ಮಾಡಬೇಕು, ಇದನ್ನು ನಾವು ಬಿಟ್ಟುಬಿಟ್ಟರೆ, ಮೈಸೂರು ದೇಶ ಅಳಿಸಿಹೋಗುತ್ತದೆ ಮತ್ತು ಮೈಸೂರು ದೇಶ ಎನ್ನತಕ್ಕದ್ದು ಯಾವ ಒಂದು ಅಭಿವೃದ್ಧಿಯೂ ಇಲ್ಲದೆ, ಹೀನಸ್ಥಿತಿಗೆ ಬರುತ್ತದೆ. ಆದ್ದರಿಂದ ಈಗಲಾದರೂ ಅಲ್ಲಿಹೋಗಿ ನಮ್ಮ ಕೇಸನ್ನು ಅವರ ಮುಂದೆ ಇಡಬೇಕು. ಕೇಸು ನಮ್ಮ ಪರವಾಗಿ ಇದೆ. ಇವತ್ತು ಕಬಿನಿ ಪ್ರಾಜೆಕ್ಟನ್ನು ಮಾಡುತ್ತೇವೆಂದು ಹೇಳಿ ೧೫–೧೬ ವರ್ಷವಾಯಿತು, ಇನ್ನೂ ಕಾರ್ಯಗತವಾಗಿಲ್ಲ. ಇವತ್ತು ನಾವು ನಮ್ಮ ಪ್ರಾಜೆಕ್ಟುಗಳನ್ನು ಬೇಗನೇ ಮುಗಿಸುತ್ತಾ ಇದ್ದರೆ, ಈ ಪ್ರಶ್ನೆ ನಮ್ಮ ಮುಂದೆಬರುತ್ತಾ ಇರಲಿಲ್ಲ. ಆದ್ದರಿಂದ ಕೇಂದ್ರ ಸರ್ಕಾರದವರು ಈ ರೀತಿ ಹೇಳತಕ್ಕದ್ದು ಸರಿಯಲ್ಲದೆಂದು ಹೇಳಿ, ನಮ್ಮ ನಮ್ಮ ಕೇಸನ್ನು ಸರಿಯಾಗಿ ಅವರ ಮುಂದೆ ಇಟ್ಟು, ಕಾವೇರಿ ನೀರನ್ನು ಸರಿಯಾಗಿ ಉಪಯೋಗಿಸಿ ಕೊಳ್ಳುವುದಕ್ಕೆ ಸಕಲ ಪ್ರಯತ್ನಗಳನ್ನು ನಮ್ಮ ಸರ್ಕಾರದವರು ಮಾಡಬೇಕೆಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಎಚ್.ಎನ್. ನಂಜೇಗೌಡ.—ಇದರ ಬಗ್ಗೆ ನಮ್ಮ ಕಾಂಗ್ರೆಸ್ (ಆರ್) ನ ನಾಯಕರಾದ ಸಿದ್ಧವೀರಪ್ಪನವರ ಅಭಿಪ್ರಾಯವೇನೆಂಬುದನ್ನು ತಿಳಿಯಬಯಸುತ್ತೇನೆ.

† ಶ್ರೀ ಎನ್. ಹುಚ್ಚ ಮಾಸ್ತಿಗೌಡ (ಹುಲಿಯೂರುದುರ್ಗ).—ಮಾನ್ಯ ಅಧ್ಯಕ್ಷರೇ, ನೀರನ್ನು ಉಪಯೋಗಿಸಿಕೊಳ್ಳುವ ವಿಷಯದಲ್ಲಿ ಮೈಸೂರು ಸರ್ಕಾರ ಅಕ್ಷಮ್ಯವಾದ ಅಪರಾಧವನ್ನು ಮಾಡಿದೆ ಎಂಬುದನ್ನು ನಾನು ಹೇಳುತ್ತೇನೆ. ಆದರಲ್ಲೂ ಕಾವೇರಿ ನದಿ ನೀರನ್ನು ಉಪಯೋಗಿಸಿಕೊಳ್ಳುವುದರಲ್ಲಿ, ಕೃಷ್ಣಾ ನೀರನ್ನು ಉಪಯೋಗಿಸಿಕೊಳ್ಳುವುದರಲ್ಲಿ ಎಲ್ಲಾ ತಾರತಮ್ಯವನ್ನು ಮಾಡಿದ್ದಾರೆ: ಇವರು ೧೯೭೪ರೊಳಗೆ ಇದರ ಕೆಲಸಗಳನ್ನು ಮುಗಿಸಬೇಕಾದರೆ, ಎಷ್ಟು ಹಣವನ್ನು ಒದಗಿಸಬೇಕಾಗಿತ್ತು ಎಂಬುದನ್ನು ಮೊದಲಿನಿಂದಲೂ ಯೋಚನೆ ಮಾಡಬೇಕಾಗಿತ್ತು. ನಾನಾದರೂ ಹೇಳುತ್ತೇನೆ, ಇದಕ್ಕೆ ಮುಖ್ಯಮಂತ್ರಿಯವರು ಹೆಚ್ಚು ಹಣವನ್ನು ಒದಗಿಸಿ ೨೪ ಗಂಟೆ ಹೊತ್ತು ನಿಂತು ಈ ಕೆಲಸಗಳನ್ನು ಮಾಡುವುದಕ್ಕೆ ಮನಸ್ಸುಮಾಡಬೇಕು. ಇದಕ್ಕೆ ತಾರತಮ್ಯ ತೋರಿಸಿದ್ದಾರೆಂದು ಆಪಾದನೆ ಮಾಡುತ್ತೇನೆ. ಮಾನ್ಯ ದೇವೇಗೌಡರು ಇಂಟರ್ ಸ್ಟೇಟ್ ವಾಟರ್ ಡಿಸ್ಪೂಟ್ ಪ್ರಕಾರ ಇದನ್ನು ಬಗೆಹರಿಸಬೇಕೆಂದು ಹೇಳಿದರು. ಇವರಲ್ಲಿ ಅಪಾಯ ಇದೆ. ಇದರಲ್ಲಿ ಏನಾದರೂ ಒಂದು ತೀರ್ಮಾನ ಆದರೆ. ಅದು ಅಂತಿಮ ತೀರ್ಮಾನವಾಗುತ್ತದೆ. ಅದಕ್ಕೆ ಸರ್ಕಾರದವರು ಯೋಚನೆ ಮಾಡಬೇಕಾಗುತ್ತದೆ. ಆದಕ್ಕೆ ಬದಲಾಗಿ ಕ್ಲಾಸ್ ೧೦–೧೫ ರ ಪ್ರಕಾರ ಆರ್ಬಿಟ್ರೇಷನಿಗೆ ಹೋಗುವುದು ಉತ್ತಮ. ಆರ್ಬಿಟ್ರೇಷನಿಗೆ ಹೋದರೆ, ನಾವು ಕೆಲವಾರು ಅಗ್ರಿಮೆಂಟಿನಲ್ಲಿರತಕ್ಕ ಷರತ್ತುಗಳನ್ನು ಕಾರ್ಯಗತ ಮಾಡತಕ್ಕ ಪ್ರಶ್ನೆ ಬರುತ್ತದೆ, ಜೊತೆಗೆ ತೀರ್ಮಾನವಾದ ಮೇಲೆ ಸುಪ್ರೀಂ ಕೋರ್ಟಿಗೆ ಕೂಡ ಹೋಗುವ ಅವಕಾಶ ಇರುವುದರಿಂದ ಅದನ್ನು ಒಪ್ಪಿಕೊಳ್ಳಬಹುದು. ಮತ್ತು ಅಗ್ರಿಮೆಂಟಿನಲ್ಲಿರತಕ್ಕ ಷರತ್ತುಗಳು ಒಂದಕೊಂದು ತದ್ವಿರುದ್ಧವಾದ ಷರತ್ತುಗಳು ಎಂದು ಮಾನ್ಯ ನಂಜೇಗೌಡರು, ಮತ್ತು ಚನ್ನಬಸಪ್ಪನವರು ಹೇಳಿದ್ದಾರೆ. ಇದನ್ನು ನಾವು ಪಾಲಿಸದೆ ಹೋದರೆ, ಒಪ್ಪಂದವನ್ನು ಕಾರ್ಯಗತಮಾಡುವುದು ಕಷ್ಟ. ಆದ್ದರಿಂದ ಆರ್ಬಿಟ್ರೇಷನಿಗೆ

(ಶ್ರೀ ಎನ್. ಹುಚ್ಚಮಾಸ್ತಿಗೌಡ)

ಹೋಗತಕ್ಕ ಕೆಲಸವನ್ನು ತ್ವರಿತವಾಗಿ ಮಾಡಬೇಕು. ಅದೇ ರೀತಿ ಪ್ರೊಪೋರ್ಷನ್ ಫ್ಯಾಕ್ಟರ್ಸ್. ಒಂದು ಕಡೆ ಲಿಮಿಟ್ ಫ್ಲೋ ಬಿಡುವುದು. ಇನ್ನೊಂದು ಕಡೆ ೩೫ ಟಿ ಎಂ ಸಿ ಎಫ್ ಟಿ ಉಪಯೋಗಿಸಿಕೊಳ್ಳತಕ್ಕದ್ದು. ಇದು ತದ್ವಿರುದ್ಧವಾದ ಪರತ್ನುಗಳು ೪೫ ಟಿ ಎಂ ಸಿ ಎಫ್ ಟಿ ಉಪಯೋಗಿಸಿಕೊಳ್ಳಬೇಕಾದರೆ, ಪ್ರೊಪೋರ್ಷನ್ ಫ್ಯಾಕ್ಟರ್ಸ್ ಬದಲಾಯಿಸದೆ ಸಾಧ್ಯವಿಲ್ಲ. ಹಿಂದೆ ೧೯೭೬ನೇ ಇಸವಿಯಲ್ಲಿ ಅಪ್ಪರ್ ಅಣೆಕಟ್ಟು ಒಡೆದುಹೋಗಿದ್ದ ಕಾಲದಲ್ಲಿ ಬದಲಾವಣೆ ಮಾಡಿದ್ದಾರೆ ಆ ನಿದರ್ಶನ ನಮ್ಮ ಮುಂದೆ ಇದೆ. ಅದ್ದರಿಂದ ಅಗ್ರಿಮೆಂಟಿನಲ್ಲಿರತಕ್ಕ ಪ್ರೊಪೋರ್ಷನ್ ಫ್ಯಾಕ್ಟರ್ ಬದಲಾಯಿಸುವುದಕ್ಕೆ ಅವಶ್ಯಕವಾದ ಕಾರ್ಯಕ್ರಮಗಳನ್ನು ತೆಗೆದುಕೊಳ್ಳಬೇಕು. ಇದಕ್ಕಾಗಿ ಮಾನ್ಯ ಮುಖ್ಯಮಂತ್ರಿಯವರು ಒಂದಲ್ಲ, ಎಷ್ಟು ಸಲವಾದರೂ ಕೇಂದ್ರಸರ್ಕಾರಕ್ಕೆ ಹೋಗಬೇಕಾಗಿದ್ದರು ಅತ್ಯಾವಶ್ಯಕ; ಅವರು ಈ ಸಭೆಯ ಒಂದು ನಿಯೋಗವನ್ನಾದರೂ ತೆಗೆದುಕೊಂಡು ಹೋಗಿ ಈ ಕೆಲಸವನ್ನು ಆಗತ್ಯವಾಗಿ ಮಾಡಬೇಕಾಗುತ್ತದೆ ಇಲ್ಲದಿದ್ದರೆ ನಮ್ಮ ರಾಜ್ಯಕ್ಕೆ ಬಹಳ ದೊಡ್ಡ ಹಾನಿಯಾಗುತ್ತದೆ ಮತ್ತು ಇದು ತಡೆಯಲಾರದಷ್ಟು ಹಾನಿಯಾಗುತ್ತದೆ. ಆದ್ದರಿಂದ ಇದರ ಬಗ್ಗೆ ಮುಖ್ಯಮಂತ್ರಿಯವರು ಕೇಂದ್ರಸರ್ಕಾರದ ಜೊತೆಯಲ್ಲಿ ವ್ಯವಹಾರ ಮಾಡುವುದಕ್ಕೆ ಪ್ರತಿಯೊಂದು ಹೆಜ್ಜೆಯನ್ನೂ ಉಪಯೋಗಿಸಿಕೊಳ್ಳಬೇಕು. ಅವರು ಇತರ ವಿಷಯದಲ್ಲಿ ಏನು ಮನಸ್ತಾಪ ಇದ್ದರೂ, ಅದನ್ನು ಬದಿಗೊತ್ತಿ ಕೆ ಎಲ್. ರಾಯರ ಹೇಳಿಕೆ ನಮಗೆ ಬಹಳ ಅಪಾಯಕಾರಿಯಾದುದು ಎಂದು ಪ್ರಧಾನಿಯವರನ್ನು ನೋಡಿ ಹೇಳಬೇಕು. ನಿಮ್ಮ ಮಂತ್ರಿಯವರು ಮಾಡಿದ ಹೇಳಿಕೆ ಅಕ್ಷಮ್ಯವಾಗಿದೆ. ತಮಿಳು ಸರ್ಕಾರದವರು ಅಗ್ರಿಮೆಂಟಿಗೆ ವಿರುದ್ಧವಾಗಿ ನಡೆದುಕೊಂಡಿದ್ದಾರೆ ಎಂಬುದನ್ನು ಅವರ ಗಮನಕ್ಕೆ ತರಬೇಕು. ಅಲ್ಲಿಂದ ಬಂದಮೇಲೆ, ಅವರ ಅಭಿಪ್ರಾಯತೆಗೆದುಕೊಂಡು ಮುಂದಿನ ಕಾರ್ಯಕ್ರಮ ತೆಗೆದುಕೊಳ್ಳುವುದಕ್ಕೆ ಹಿಂದೆಗೆಯಬಾರದು. ಇದಕ್ಕೆ ನಮ್ಮ ಸಂಪೂರ್ಣವಾದ ಬೆಂಬಲ ಇದೆ. ಈ ವಿಷಯದಲ್ಲಿ ಹಣ ಒದಗಿಸುವುದಕ್ಕೆಂದು ಒಂದು ರಿಸೋರ್ಸಸ್ ಕಮಿಟಿ ಮಾಡಿದ್ದಾರೆ. ಇದಕ್ಕೆ ಹಣ ಎಷ್ಟು ಬೇಕು ಅದನ್ನು ಮಾಡಿಕೊಂಡು ಈ ಪ್ರಾಜೆಕ್ಟುಗಳನ್ನು ೧೯೭೪ರಲ್ಲಿ ಮುಗಿಸಬೇಕಾಗುತ್ತದೆ. ನಮಗೆ ಎಷ್ಟು ಹಣಬೇಕು, ಆ ಹಣವನ್ನು ಸರ್ವ ಪ್ರಯತ್ನ ಮಾಡಿಕೊಂಡು ಸಂಪಾದಿಸಿ ಆ ಯೋಜನೆಗಳನ್ನು ಕಾರ್ಯಗತ ಮಾಡಬೇಕು. ಮುಖ್ಯಮಂತ್ರಿಯವರು ಅದಕ್ಕೆ ಧೈರ್ಯ ಮಾಡಬೇಕು. ಇಲ್ಲದಿದ್ದರೆ ನಮ್ಮ ದೇಶದ ಹಿತರಕ್ಷಣೆ ಮಾಡುವುದಕ್ಕೆ ಸಾಧ್ಯವಿಲ್ಲ. ಕೇಂದ್ರ ಸರ್ಕಾರದವರು ತಾಳಿರುವ ನೀತಿಗೆ ವಿರುದ್ಧವಾಗಿ ಪ್ರತಿಭಟನೆ ಮಾಡಬೇಕೆಂದು ನಾನು ಸಲಹೆ ಮಾಡುತ್ತೇನೆ. ಇನ್ನು ನಾನು ಹೆಚ್ಚಿಗೆ ಹೇಳುವುದಕ್ಕೆ ಇಷ್ಟಪಡುವುದಿಲ್ಲ. ಇವತ್ತು ಇವರು ೩೩ ವರ್ಷಗಳಲ್ಲಿ ಏನು ಮಾಡಿದ್ದಾರೆಂದು ನೋಡಿದರೆ, ಈಗ ಎದ್ದಿರುವ ಪ್ರಶ್ನೆಯನ್ನು ಬಿಡಿಸಲಿಕ್ಕೆ ಸಾಧ್ಯವಿಲ್ಲವೆಂದು ನನಗೆ ಸ್ಪಷ್ಟವಾಗಿ ಕಂಡು ಬರುತ್ತದೆ. ಆದ್ದರಿಂದ ಮುಖ್ಯಮಂತ್ರಿಗಳು ಆವಶ್ಯಕತೆ ಇದ್ದರೆ, ನಮ್ಮ ಎಲ್ಲಾ ಪಕ್ಷಗಳ ಒಂದು ನಿಯೋಗವನ್ನು ದೆಹಲಿಗೆ ತೆಗೆದುಕೊಂಡು ಹೋಗಿ ಈ ಕೆಲಸಮಾಡಬೇಕೆಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಎಚ್. ಸಿದ್ದವೀರಪ್ಪ (ಹರಿಹರ:)— ಸನ್ಮಾನ್ಯ ಅಧ್ಯಕ್ಷರೆ, ನಾನು ಈಗ ಭಾಷಣ ಮಾಡುವುದಿಲ್ಲ ಶ್ರೀಮಾನ್ ನಂಜೇಗೌಡರು ನಮ್ಮ ಪಕ್ಷದ ಮಾತನ್ನು ಎತ್ತಿದ್ದರಿಂದ ಒಂದೆರಡು ಮಾತುಗಳನ್ನು ಹೇಳುವ ಅವಶ್ಯಕತೆ ಕಂಡುಬಂದದ್ದರಿಂದ ನಾನು ಎದ್ದು ನಿಂತಿದ್ದೇನೆ. ಈಗಾಗಲೇ ಇದನ್ನು ಪಕ್ಷಾತೀತ ಪ್ರಶ್ನೆಯನ್ನಾಗಿ ಮಾಡಿ ಈ ರಾಜ್ಯದಲ್ಲಿ ನಮಗೆ ಆಗಿರತಕ್ಕ ಅನ್ಯಾಯವನ್ನು ಹೋಗಲಾಡಿಸಬೇಕೆನ್ನುವ ವಿಷಯದಲ್ಲಿ ನಾವು ಈಗ ಸಂಪೂರ್ಣ ಸಹಕಾರವನ್ನು ಸರ್ಕಾರಕ್ಕೆ ಕೊಟ್ಟಿದ್ದೇವೆ. ಇನ್ನು ಮುಂದೆಯೂ ಅವರು ಅಪೇಕ್ಷಪಟ್ಟರೆ ನಾವು ನಮ್ಮ ಸಹಕಾರವನ್ನು ಕೊಡುವವರಾಗಿದ್ದೇವೆ. ಈ ಸಮಸ್ಯೆಯನ್ನು ಪಕ್ಷಾತೀತವಾಗಿಟ್ಟುಕೊಂಡು ಬಗೆಹರಿಸಬೇಕೆಂದು ನಾನಾನರೂ ಈ ದೇಶದ ಜನಗಳ ಪರವಾಗಿ ಹೇಳುತ್ತೇನೆ. ಇದನ್ನು ಮಾಡಬೇಕಾದರೆ ಒಂದು ವಿಷಯವನ್ನು ಗಮನದಲ್ಲಿಟ್ಟುಕೊಳ್ಳಬೇಕು. ನಾಗಾರ್ಜುನ ಸಾಗರವನ್ನು ಯಾವರೀತಿ ಆಂಧ್ರದವರು ಕಟ್ಟಿ ಮಾತುಕತೆ ನಡೆಯುತ್ತಿರುವಾಗಲೇ ಪೂರ್ಣಪಡಿಸಿದರೋ ಅದೇ ನಿಲುವನ್ನು ನೀವು ಮುಂದೆ ತಾಳಿದ್ದೇ ಆದರೆ ಅದಕ್ಕೆ ನಮ್ಮ ಸಂಪೂರ್ಣ ಬೆಂಬಲವನ್ನು ಕೊಡುತ್ತೇವೆ. ಅದರಲ್ಲಿ ಎನೂ ಭಿನ್ನಾಭಿಪ್ರಾಯವಿಲ್ಲ ಸರ್ಕಾರ ಅದರ ಬಗ್ಗೆ ಒಂದು ದಿಟ್ಟ ನಿಲುವನ್ನು ತೆಗೆದುಕೊಂಡು ಧೈರ್ಯವಾಗಿ ಮುಂದುವರಿಯಬೇಕೆಂದು. ನಾನು ಸಲಹೆ ಮಾಡುತ್ತೇನೆ.

ಶ್ರೀ ವೀರೇಂದ್ರ ಪಾಟೀಲ್ (ಹುಮ್ನಾಬಾದ್):— ಸನ್ಮಾನ್ಯ ಅಧ್ಯಕ್ಷರೇ, ಕಾವೇರಿ ನದಿ ನೀರಿನ ಬಗ್ಗೆ ಮತ್ತು ಇದರ ವಿವಾದದ ಬಗ್ಗೆ ಕೇಂದ್ರಸರ್ಕಾರದ ನೀರಾವರಿ ಮತ್ತು ವಿದ್ಯುಚ್ಛಕ್ತಿ ಮಂತ್ರಿಗಳು ಪಾರ್ಲಮೆಂಟಿನಲ್ಲಿ ಒಂದು ಹೇಳಿಕೆ ಕೊಟ್ಟ ನಂತರ ಆ ಹೇಳಿಕೆಯಿಂದ ಮೈಸೂರು ರಾಜ್ಯದ ಜನತೆಯಲ್ಲಿ ಸಾಕಷ್ಟು ಕಳವಳ ಉಂಟಾಗಿದೆ. ನಿನ್ನೆಯಿಂದ ಅನೇಕ ಮಾನ್ಯ ಸದಸ್ಯರು ಈ ಸದನದಲ್ಲಿ ಭಾಷಣಮಾಡಿ

ಜನತೆಯಲ್ಲಿ ಎಷ್ಟು ತೀವ್ರವಾಗಿ ಕಳವಳವುಂಟಾಗಿದೆ ಎಂಬುದನ್ನು ಸ್ಪಷ್ಟವಾಗಿ ನಮ್ಮ ಮುಂದೆ ಇಟ್ಟಿದ್ದಾರೆ. ಈ ತರಹದಲ್ಲಿ ಒಂದು ಸ್ಟೇಟ್‌ಮೆಂಟನ್ನು ಕೇಂದ್ರಸರ್ಕಾರದ ನೀರಾವರಿ ಮಂತ್ರಿಗಳು ಮಾಡಿದ್ದಾರೆ ಈಗಾಗಲೆ ಮಹಾರಾಷ್ಟ್ರ ಮತ್ತು ಮೈಸೂರು ಗಡಿಯ ಬಗ್ಗೆ ಉಂಟಾಗಿರುವ ವಿವಾದಕ್ಕೆ ಒಂದು ಹಾದಿಯನ್ನು ಹುಡುಕುವುದಕ್ಕೆ ಪ್ರಯತ್ನಗಳು ನಡೆಯುತ್ತಿರುವುದನ್ನು ಕೇಳಿ ಒಂದು ಕಡೆ ಜನತೆಯಲ್ಲಿ ಕಳವಳವನ್ನುಂಟುಮಾಡುವುದಕ್ಕೆ ಮತ್ತು ಕಾವೇರಿ ನೀರಿನಬಗ್ಗೆ ಇನ್ನೊಂದು ಹೇಳಿಕೆ ಕೊಟ್ಟು ಮತ್ತೆ ಜನರಲ್ಲಿ ಕಳವಳವನ್ನುಂಟುಮಾಡುವುದಕ್ಕೆ ಕೇಂದ್ರಸರ್ಕಾರದವರೇ ಕಾರಣೀಯಭೂತರಾಗಿದ್ದಾರೆಂದು ನನಗನ್ನಿಸುತ್ತದೆ. ಕೇಂದ್ರಸರ್ಕಾರದ ನೀರಾವರಿ ಮಂತ್ರಿಗಳು ಈ ರೀತಿಯಾಗಿ ಒಂದು ಸ್ಟೇಟ್‌ಮೆಂಟ್ ಕೊಡಲಾರದೆ ಹೋಗಿದ್ದರೆ ಬಹಳ ಚೆನ್ನಾಗಿತ್ತು ಎಂಬುದಾಗಿ ನನಗನ್ನಿಸುತ್ತದೆ. ೧೯೬೭ರಲ್ಲಿ ಆಗಿನ ರಾಜಕೀಯ ಪರಿಸ್ಥಿತಿ ಒಂದು ರೀತಿಯಲ್ಲಿತ್ತು. ಈಚೆಗೆ ಆ ರಾಜಕೀಯ ಪರಿಸ್ಥಿತಿ ಬೇರೆಯಾಗಿದೆ. ಇನ್ನು ೧೯೭೨ರ ನಂತರ ರಾಜಕೀಯ ಪರಿಸ್ಥಿತಿ ಯಾವರೀತಿ ಇರುತ್ತದೆನ್ನುವುದನ್ನು ಇವತ್ತು ಯಾರು ಹೇಳುವುದಕ್ಕೆ ಸಾಧ್ಯವಿಲ್ಲವೆಂದು ನಾನು ತಿಳಿದುಕೊಂಡಿದ್ದೇನೆ. ನಾನು ಹೇಳಿದ ತಾತ್ಪರ್ಯ ಏನೆಂದರೆ ಕೇಂದ್ರ ಸರ್ಕಾರದಲ್ಲಿ ಯಾವ ರಾಜಕೀಯ ಪಕ್ಷ ಸರ್ಕಾರ ನಡೆಸುತ್ತದೊ ಆದೇ ರೀತಿಯಲ್ಲಿ ಎಲ್ಲಾ ರಾಜ್ಯಗಳಲ್ಲಿಯೂ ಅವೇಪಕ್ಷ ಇರುತ್ತದೆಂದು ಹೇಳುವುದಕ್ಕಾಗುವುದಿಲ್ಲ. ನಮ್ಮ ದೇಶದಲ್ಲಿ ಪ್ರಜಾರಾಜ್ಯ ತತ್ವವನ್ನು ಅನುಸರಿಸಿದ್ದೇವೆ. ಪ್ರಜಾರಾಜ್ಯದ ತಳಹದಿಯಮೇಲೆ ಸರ್ಕಾರವನ್ನು ಕಟ್ಟುವಾಗ ಒಂದು ರೀತಿಯ ಸರ್ಕಾರ ಕೇಂದ್ರದಲ್ಲಿಯೂ ಮತ್ತು ರಾಜ್ಯಗಳಲ್ಲಿಯೂ ಬರುತ್ತದೆಂದು ಹೇಳುವುದಕ್ಕಾಗುವುದಿಲ್ಲ. ಆದರೆ ಪ್ರಜಾರಾಜ್ಯ ಬೆಳೆಯು ಬೇಕಾಗಿದ್ದರೆ, ಪ್ರಜಾರಾಜ್ಯದಲ್ಲಿ ನಂಬಿಕೆ ಇರಬೇಕಾಗಿದ್ದರೆ ಬಹುಶಃ ಕೇಂದ್ರಸರ್ಕಾರದ ಜವಾಬ್ದಾರಿ ಇವತ್ತಿನ ಪರಿಸ್ಥಿತಿಯಲ್ಲಿ ಬಹಳ ಗುರುತರವಾದುದಾಗಿದೆಯೆಂದು ಹೇಳಬಹುದು ರಾಜ್ಯಸರ್ಕಾರಗಳು ಸ್ವಲ್ಪ ಹೆಚ್ಚು ಕಡಿಮೆ ಯಾವ ರೀತಿಯಿಂದಲಾದರೂ ವರ್ತಿಸಿದರೆ ಪ್ರಜಾರಾಜ್ಯಕ್ಕೂ ಮತ್ತು ರಾಷ್ಟ್ರಕ್ಕೂ ಅಷ್ಟು ಹಾನಿಯಾಗುವುದಿಲ್ಲ ಆದರೆ ಕೇಂದ್ರಸರ್ಕಾರದವರು ಯಾವರೀತಿಯಿಂದಲಾದರೂ ಯಾವುದೊ ಒಂದು ರಾಜ್ಯಕ್ಕೆ ಅನುಕೂಲ ವಾಗುವಂತೆಯೂ ಮತ್ತು ಇನ್ನೊಂದು ರಾಜ್ಯಕ್ಕೂ ಅನಾನುಕೂಲ ವಾಗುವಂತೆಯೂ ವರ್ತಿಸಿದರೆ ಬಹುಶಃ ಒದರಿಂದ ಬಹಳಮಟ್ಟಿಗೆ ಹಾನಿಯಾಗುತ್ತದೆ. ಮತ್ತೂ ಇದರ ಪರಿಣಾಮ ಬಹಳ ಮಟ್ಟಿಗೆ ಕೇವಲ ರಾಜ್ಯಗಳ ಮೇಲೆಯೇ ಆಗುವುದಿಲ್ಲ, ಇಡೀ ರಾಷ್ಟ್ರದ ಮೇಲೇ ಆಗುತ್ತದೆಂದು ನಾನು ಹೇಳಬೇಕಾಗಿದೆ. ಕೇಂದ್ರಸರ್ಕಾರ ಯಾವ ಪಕ್ಷದ ಕೈಯಲ್ಲಿಯೇ ಇರಲಿ, ಕೇಂದ್ರ ಸರ್ಕಾರಕ್ಕೆ ಎಲ್ಲಾ ರಾಜ್ಯಗಳ ಹಿತರಕ್ಷಣೆ ಮಾಡುವಂಥ ಜವಾಬ್ದಾರಿ ಇದೆ ಕೇಂದ್ರಸರ್ಕಾರ ನ್ಯಾಯವಾಗಿ ವರ್ತಿಸುತ್ತಿದೆಯೇ ಹೊರತು ಪಕ್ಷಪಾತ ಮಾಡುವುದಿಲ್ಲವೆನ್ನುವುದನ್ನು ಅವರು ಪ್ರತ್ಯಕ್ಷವಾಗಿ ಮಾಡುವುದಲ್ಲದೆ ಜನತೆಯ ಮನಸ್ಸಿನಲ್ಲಿಯೂ ಕೂಡ ಅರೀತಿ ಭಾವನೆ ಬರುವಂತೆ ಕೇಂದ್ರಸರ್ಕಾರ ನಡೆದುಕೊಂಡು ಹೋಗುವುದು ಅವಶ್ಯಕ. ಕೇವಲ ನ್ಯಾಯ ಮಾಡಿದರೆ ಸಾಲದು ಪ್ರಜಾರಾಜ್ಯದಲ್ಲಿ ನ್ಯಾಯವಾಗಿ ನಾವು ನಡೆದುಕೊಳ್ಳುತ್ತಿದ್ದೇವೆಂಬ ಭಾವನೆ ಎಲ್ಲಾ ಜನರಲ್ಲಿಯೂ ಉಂಟಾಗುವಂತೆ ನಡೆದು ಕೊಳ್ಳುವ ಜವಾಬ್ದಾರಿ ಕೇಂದ್ರ ಸರ್ಕಾರದ ಮೇಲೆ ಇದೆ ನಾನು ವೈಯಕ್ತಿಕವಾಗಿ ಯಾರನ್ನೂ ಟೀಕೆಮಾಡುವುದಿಲ್ಲ. ಅದು ತಮಗೆಲ್ಲರಿಗೂ ಗೊತ್ತಿದೆ. ಜಾಯಿಂಟ್ ರೆಸ್‌ಪಾನ್ಸಿಬಿಲಿಟಿ ಯಿರುವುದರಿಂದ ಇವತ್ತು ಪಾಸ್ಕ ಶ್ರಿ ಕೆ. ಎಲ್. ರಾವ್ ಅವರು ಆ ರೀತಿಯಾಗಿ ಒಂದು ಸ್ಟೇಟ್‌ಮೆಂಟ್ ಮಾಡಿದರೆ, ಅದು ಕೇಂದ್ರಸರ್ಕಾರದ ಧೋರಣೆಯೆಂದು ಹೇಳಬೇಕೇ ಹೊರತು ಅದು ವೈಯಕ್ತಿಕವಾಗಿ ಮಾನ್ಯ ಡಾ॥ ಕೆ. ಎಲ್. ರಾವ್ ಅವರ ಧೋರಣೆ ಎಂಬುದಾಗಿ ಹೇಳುವುದಕ್ಕಾಗುವುದಿಲ್ಲ. ಆದ್ದರಿಂದ ಟೀಕೆಯನ್ನು ಕೇಂದ್ರದ ಮೇಲಾಗಲೀ ಮತ್ತೆ ಯಾರ ಮೇಲಾಗಲೀ ಮಾಡುವುದು ಅಷ್ಟು ಸಮಂಜಸವಾದುದಲ್ಲವೆಂದು ನನಗನ್ನಿಸುತ್ತದೆ. ಇವತ್ತು ಆ ಸ್ಟೇಟ್‌ಮೆಂಟ್‌ನ ಆಫಿಷಿಯಲ್ ವರ್ಷನ್ ನನ್ನಲ್ಲಿಲ್ಲ. ಪೇಪರ್‌ನಲ್ಲಿ ಬಂದಿರುವುದರ ಮೇಲೆ ನಾವು ಮಾತನಾಡ ಬೇಕಾಗಿದೆ. ಆಫಿಷಿಯಲ್ ವರ್ಷನ್ ಮುಂದೆ ಸಿಗುತ್ತದೆ. ಆದರೆ ಅವರು ಸ್ಟೇಟ್‌ಮೆಂಟ್ ಏನು ಮಾಡಿದ್ದಾರೋ ಅದು ಸಿಕ್ಕಿದೆ. ಆದರ ಬಗ್ಗೆ ಆಗಿರತಕ್ಕ ಕ್ಲಾರಿಫಿಕೇಷನ್ಸ್ ಮತ್ತು ಪ್ರಶ್ನೆಗಳು ಇನ್ನೂ ಸಿಗಲಿಲ್ಲ. ಆದಕ್ಕಾಗಿ ಆದರ ಒಂದು ಆಧಾರದ ಮೇಲೆ ಏನು ಹೇಳುವುದಕ್ಕೂ ನನ್ನಲ್ಲಿ ಮೆಟೀರಿಯಲ್ಸ್ ಇಲ್ಲ. ಇವತ್ತು ಇಂಡಿಯನ್ ಎಕ್ಸ್‌ಪ್ರೆಸಿನಲ್ಲಿ ಆದರ ಬಗ್ಗೆ ವರದಿಯಾಗಿದೆ. ಆದರ ಪ್ರಕಾರ ನೋಡಿದರೆ ಹೀಗೆ ಗೊತ್ತಾಗುತ್ತದೆ.

"Dr K. L. Rao, Union Minister for Irrigation and power declaed in the Lok Sabha today that Mysore State would not be entitled to Central aid if it proceeded with the irrigation projects in the Cauvery basin without sanction of the Planning Commission.

ಆವರು ಯಾವರೀತಿ ಸ್ಟೇಟ್ ಮೆಂಟ್ ಮಾಡಿದ್ದಾರೆಂಬ ಬಗ್ಗೆ ನನ್ನಲ್ಲಿ ಆಫಿಷಿಯಲ್ ವರ್ಷನ್ ಇಲ್ಲ. ನಾನು ಈಗ ತಿಳಿದುಕೊಂಡಿರುವ ಹಾಗೆ, ಕಾವೇರಿ ನದಿಯ ಪ್ರಾಜೆಕ್ಟ್‌ಗಳಿಗೆ ಸೆಂಟ್ರಲ್ ಏಡ್ ಸಿಗುವ ಹಾಗೆ ಇಲ್ಲ, ಅವರು ಏಡ್ ಕೊಡುವ ಹಾಗೆ ಇಲ್ಲವೆಂದು ಅರ್ಥವಾಗುತ್ತದೆ. Mysore State would not

(ಶ್ರೀ ವೀರೇಂದ್ರ ಪಾಟೀಲ್)

be entitled to Central aid if it proceeded with the irrigation projects in the Cauvery basin. There would not be Central aid to there projects. ಇದರಲ್ಲಿ ನನಗೇನು ಸಂಶಯ ಬರುತ್ತದೆಂದರೆ, ನೀವು ಸರಿಯಾಗಿ ನಡೆದುಕೊಂಡರೆ ಸರಿ, ಇಲ್ಲದಿದ್ದರೆ ಕೇಂದ್ರ ಸರ್ಕಾರದಿಂದ ಒಂದು ಕಾಸು ಕೂಡ ನಿಮಗೆ ಕೊಡುವುದಿಲ್ಲವೆಂದು ಅರ್ಥಬರುತ್ತದೆ. ಆರೀತಿ ಇರಲಿಕ್ಕಿಲ್ಲ.

ಶ್ರೀ ಎನ್. ಹುಚ್ಚ ಮಾಸ್ತಿಗೌಡ—ನಿಮ ಆಫೀಸರ್ ಅಲ್ಲಿದ್ದಾರೆ. ಆದ್ದರಿಂದ ಅಫಿಷಿಯಲ್ ವರ್ಷನ್ನನ್ನು ಅಲ್ಲಿಂದ ತರಿಸಿಕೆ ಳ್ಳುವುದಕ್ಕಾಗುವುದಿಲ್ಲವೇ?

ಶ್ರೀ ವೀರೇಂದ್ರ ಪಾಟೀಲ್:—ಅಫಿಷಿಯಲ್ ವರ್ಷನ್ ನನಗೆ ಎಷ್ಟರಮಟ್ಟಿಗೆ ಸಿಕ್ಕಿದೆ ಅಂದರೆ, ಅವರ ಪ್ರಿಪೇರ್ಡ್ ಸ್ಟೇಟ್‌ಮೆಂಟ್ ಮಾತ್ರ ಸಿಕ್ಕಿದೆ. ಮಾನ್ಯ ಸದಸ್ಯರಿಗೆ ಗೊತ್ತಿದೆ, ನಾವು ಪ್ರಿಪೇರ್ಡ್ ಸ್ಟೇಟ್‌ಮೆಂಟ್ ಮಾಡಿದಮೇಲೆ ಕಾಲ್ ಅಟೆನ್‌ಷನ್ ನೋಟಿಸನ್ನು ಯಾರು ಕಳುಹಿಸುತ್ತಾರೆ ಆವರು ಪ್ರಶ್ನೆ ಹಾಕುತ್ತಾರೆ ಆದಕ್ಕೆ ಉತ್ತರ ಹೇಳುತ್ತೇವೆ, ಆ ರೀತಿ ಕ್ಲಾರಿಫಿಕೇಷನ್ ಏನಾದರು ಕೇಳಿದರೆ ಆದು ಈಗ ನನ್ನಮುಂದೆ ಇಲ್ಲ.

ಶ್ರೀ ಹೆಚ್. ಸಿದ್ದವೀರಪ್ಪ :— ನನ್ನ ಸಲಹೆ ಏನೆಂದರೆ ನಿಮಗೆ ಅಫಿಷಿಯಲ್ ವರ್ಷನ್ ಬರುವವರೆಗೂ ಅವರ ಮೇಲೆ ಯಾವ ರೀತಿಯಾದ ಕಾಮೆಂಟ್ಸ್ ಮಾಡದೆ ಇರುವುದು ಸೂಕ್ತ ಎಂದು ಕಾಣುತ್ತದೆ. ಈವೊತ್ತು ಪಾರ್ಲಿಮೆಂಟಿನಲ್ಲಿ ಜನರಲ್ ಕಾರಿಯಪ್ಪನವರ ಇಷ್ಯೂ ಮೇಲೆ ಯಾವುದೋ ವರ್ಷನ್ ಬಂತು ಎಂದು ಭಿನ್ನಾಭಿಪ್ರಾಯ ಬಂದಿದ್ದುನೋಡಿದ್ದೇವೆ. ತಮ್ಮ ನಿಲುವನ್ನು ತಾವು ತಿಳಿಸಿ. ನಿಮ್ಮ ಮಾತಿಗೆ ಅಡ್ಡಿ ಬರುತ್ತೇನೆ ಎಂದು ತಿಳಿಯಬೇಡಿ. ನಿಮ್ಮ ಅಧಿಕಾರಿಗಳಿಂದ ಏನು ನಡೆದಿದೆ ಎನ್ನುವುದನ್ನು ತರಿಸಿಕೊಳ್ಳುವುದಕ್ಕೆ ಸಾಧ್ಯವಾಗದೆ ಇರಲಾರದು. ಪಾರ್ಲಿಮೆಂಟಿನಲ್ಲಿ ಏನು ಪ್ರಶ್ನೆ ಹಾಕಿದರು, ಏನು ಜವಾಬು ಕೊಟ್ಟರು ಎನ್ನುವುದನ್ನು ಯೋಚಿಸಿ ಪಿ.ಡಬ್ಲ್ಯೂ.ಡಿ. ಡಿಮ್ಯಾಂಡ್ ಮೇಲೆ ಅಥವಾ ಬೇರೆ ಕಾಲದಲ್ಲಿ ತಮ್ಮ ನಿಲುವನ್ನು ಹೇಳುವುದು ಸೂಕ್ತ ಎಂದು ತೋರುತ್ತದೆ.

ಶ್ರೀ ವೀರೇಂದ್ರ ಪಾಟೀಲ :—ನಾನು ಮೊದಲೇ ಹೇಳಿದೆ, ಟೀಕೆ ಮಾಡುವುದಕ್ಕೆ ಹೋಗುವುದಿಲ್ಲ ಎಂದು. ಅನೇಕ ಮಾನ್ಯ ಸದಸ್ಯರು ಅನೇಕ ವಿಚಾರಗಳನ್ನು ಹೇಳಿದ್ದಾರೆ. ನನಗೆ ಟೀಕೆ ಮಾಡುವ ಉದ್ದೇಶ ಇಲ್ಲ. ಪತ್ರಿಕೆಯಲ್ಲಿ ಈ ರೀತಿ ಬಂದಿದೆ. ಆದರೆ ಅಫಿಷಿಯಲ್ ವರ್ಷನ್ ಏನಿದೆ ಎಂದು ಗಣನೆಗೆ ತೆಗೆದು ಕೊಂಡು ಯಾವ ವಿಚಾರಗಳನ್ನು ಹೇಳಬೇಕು, ಇಷ್ಟು ಹೇಳುತ್ತೇನೆಯೆ ಹೊರತು ಅವಕಾಶ ಉಪಯೋಗಿಸಿಕೊಂಡು ಕೇಂದ್ರ ಸರಕಾರದ ಮೇಲೆ ಈ ಬಗ್ಗೆ ಟೀಕೆ ಮಾಡಬೇಕು ಎಂಬ ವಿಚಾರ ಅಥವಾ ಒಂದು ಉದ್ದೇಶ ನನಗೆ ಇಲ್ಲ. ಜನರ ಮನಸ್ಸಿನಲ್ಲಿ ಕಳವಳ ಉಂಟಾಗುವುದಕ್ಕೆ ಇವು ಎಲ್ಲಾ ಕಾರಣಗಳಾಗುತ್ತವೆ. ನಿಜವಾಗಿ ಇರಬಹುದು, ನಿಜವಾಗಿ ಇಲ್ಲದೆ ಇರಬಹುದು ಆ ಮಾತು ಬೇರೆ. ಈ ಒಂದು ವಿಚಾರ ಬರುತ್ತದೆ. ಕಾವೇರಿ ಬೇಸಿನ್ನಿನಲ್ಲಿ ಇರುವ ಪ್ರಾಜೆಕ್ಟಿಗೆ ಹಣ ಕೊಡುವಹಾಗಿಲ್ಲ ಎನ್ನುವುದು ಬೇರೆ ಬರುತ್ತದೆ. ನೀವು ಸರಿಯಾಗಿ ನಡೆದು ಕೊಳ್ಳದಿದ್ದರೆ ನಿಮಗೆ ಏನೂ ಕೊಡುವ ಹಾಗಿಲ್ಲ, ಏಡ್ ಸಿಕ್ಕುವುದು ಒಂದು ಕಾಸೂ ಕೊಡುವುದಿಲ್ಲ ಎನ್ನುವ ಅರ್ಥ ಬೇರೆ ಆಗುತ್ತದೆ. ಅಫಿಷಿಯಲ್ ವರ್ಷನ್ ಇಲ್ಲ. ಈಗ ಏನು ನಡೆಯುತ್ತಿದೆಯೋ ಆದರ ಪ್ರಕಾರ ಹೇಳುತ್ತೇನೆ.

SRI M. S. KRISHNAN :—At the end of it, he has also stated that certain proposals have been sent to the Chief Minister of Mysore ಅವು ಏನು ಎಂದು ಕೇಳಿದ್ದಕ್ಕೆ ತಾವು ಹೇಳಲಿಲ್ಲ. ಏನಾದರೂ ಪ್ರಪೋಜಲ್ಸ್ ಬಂದಿವೆಯೇ ? ಪ್ರಪೋಜಲ್ಸ್ ಬಗ್ಗೆ ವಿವರಣೆ ಕೊಡುತ್ತೀರಾ ?

ಶ್ರೀ ವೀರೇಂದ್ರ ಪಾಟೀಲ್ ;— ಪ್ರಪೋಜಲ್ಸ್ ಏನು ಬಂದಿವೆ ಎನ್ನುವುದು ಕೇಂದ್ರದ ಮಂತ್ರಿಗಳು ಪಾರ್ಲಿಮೆಂಟಿನಲ್ಲಿ ಹೊರಗೆಡಹಲಿಲ್ಲ. ಆವರು ಡಿಸಕ್ಲೋಜ ಮಾಡಿಲ್ಲ. ಆವರು ಡಿಸಕ್ಲೋಜ ಮಾಡುವುದರೊಳಗೆ ನಾನು ಈ ಸಭೆಗೆ ಹೇಳುವುದು ಕಷ್ಟವಾಗುತ್ತದೆ. ಆದಕ್ಕಾಗಿ ಪ್ರಪೋಜಲ್ಸ್ ಏನು ಬಂದಿವೆ ಎನ್ನುವುದನ್ನು ನಾನು ಈವೊತ್ತು ಹೇಳುವ ಪರಿಸ್ಥಿತಿಯಲ್ಲಿ ಇಲ್ಲ. ಆವರ ಸ್ಟೇಟ್‌ಮೆಂಟಿನಲ್ಲಿ ಹೀಗೆ ಹೇಳಿದ್ದಾರೆ.

"All aspects of the Cauvery dispute were under careful consideration by the Centre to find out how the present dispute could be settled.

ಇದನ್ನು ಸ್ವಾಗತ ಮಾಡುತ್ತೇನೆ. ಬಹುಶಃ ಅವರು ಹಾದಿ ತೆಗೆಯುವುದಕ್ಕೆ ಪ್ರಯತ್ನ ಮಾಡುತಿದ್ದಾರೆ ಎಂದು ಅರ್ಥವಾಗುತ್ತದೆ. ಈಗಾಗಲೇ ;

Dr. Rao said, if no settlement was possible through negotiations, the Centre would have no option but refer the dispute to a tribunal for adjudication.

ಏನಾದರೂ ಸಮಾಧಾನಕರವಾದ ಹಾದಿ ತೆಗೆಯುವುದಕ್ಕೆ ಪ್ರಯತ್ನ ಮಾಡುತ್ತೇವೆ. ಒಂದು ವೇಳೆ ಅದು ಸಾಧ್ಯವಾಗಲಾರದೆ ಹೋದರೆ ನಮಗೆ ಮತ್ತೆ ಏನು ಹಾದಿ ಇಲ್ಲ, ಇದನ್ನು ಟ್ರಿಬ್ಯೂನಲ್‌ಗೆ ಹಾಕುಬೇಕು ಎನ್ನುವ ವಿಚಾರ ಹೇಳಿದ್ದಾರೆ.

Dr. Rao said the Mysore Government was clearly exceeding the scope of the 1924 Agreement between Madras and Mysore States."

ಹೀಗೆ ಹೇಳಿರುವುದು ಬಹಳ ದುರದುಷ್ಟಕರ. ಏತಕ್ಕೆಂದರೆ ಮೊದಲು ಹೇಳುತ್ತಾರೆ ಪ್ರಯತ್ನ ಮಾಡುತ್ತೇವೆ, ಒಂದು ಹಾದಿ ಹುಡುಕುತ್ತೇವೆ, ಒಂದು ವೇಳೆ ನಮ್ಮ ಪ್ರಯತ್ನ ವಿಫಲವಾದರೆ ಟ್ರಿಬ್ಯುನಲ್‌ಗೆ ಹೋಗಬೇಕು ಎಂದು ಹೇಳಿದ್ದಾರೆ. ಟ್ರಿಬ್ಯುನಲ್‌ಗೆ ಹೋಗುವುದಕ್ಕೆ ಮೊದಲೇ ನಿರ್ಣಯ ಕೊಡುವಂತೆ ಕಾಣುತ್ತದೆ. ನೀವು ಪ್ರಿಜ್ಯುಡಿಸ್ ರಿದ್ದೀರಿ ಎಂದು ಎನ್‌ಕ್ವೈರಿ ಆಗುವುದಕ್ಕೆ ಮೊದಲೇ ಇನ್‌ವೆಷ್ಟಿಗೇಷನ್ ಆಗುವುದಕ್ಕೆ ಮೊದಲೇ ಜಡ್ಜಮೆಂಟ್ ಬರೆದಂತಾಗುತ್ತದೆ. ಇದು ಬಹಳ ದುರದೃಷ್ಟಕರ ಇಷ್ಟು ಮಾತ್ರ ಸೂಚಿಸಬಯಸುತ್ತೇನೆ.

ಶ್ರೀ ಕೆ. ಹೆಚ್. ರಂಗನಾಥ :—ಮಾನ್ಯ ಕೆ.ಎಲ್. ರಾವ್‌ರವರು ಅಸರ್ಷನ್ ಮಾಡಿದ್ದಾರೆ ಮೈಸೂರು ಸರ್ಕಾರ ಅಗ್ರಿಮೆಂಟ್ ಮುರಿದಿದೆ ಎಂದು. ಆದರ ಬಗ್ಗೆ ಸ್ಪಷ್ಟವಾದ ತಮ್ಮ ನಿಲುವನ್ನು ಈ ಸಭೆಯ ಮುಖಾಂತರ ಹೇಳಬೇಕಾದ ಪರಿಸ್ಥಿತಿ ಬಂದಿದೆ. ಏತಕ್ಕೆಂದರೆ ರಾಜಕೀಯ ಕಾರಣಗಳು ಏನಾದರೂ ಇರಲಿ, ಈ ಸಭೆಯಲ್ಲಿ ಎಲ್ಲಾ ಸದಸ್ಯರೂ ಕೂಡ ರಾಜ್ಯದ ಹಿತದೃಷ್ಟಿಯಿಂದ ಸರಕಾರಕ್ಕೆ ಬೆಂಬಲ ಕೊಡ್ಡತಕ್ಕ ಕಾಲದಲ್ಲಿ ನಾವು ಇನ್ನೂ ಹೇವಮಾತಿ ಪ್ರಾಜೆಕ್ಟಿಗೆ ಕೈಹಾಕದೆ ಇರುವ ಪರಿಸ್ಥಿತಿಯಲ್ಲಿರುವಾಗ ಕೇಂದ್ರ ಸರಕಾರದ ಮಂತ್ರಿಗಳು ಅಗ್ರಿಮೆಂಟ್ ವಯಲೇಟ್ ಮಾಡಿದ್ದೇವೆ ಎಂದು ಅಸರ್ಟ್ ಮಾಡುವಾಗ ತಮ್ಮ ನಿಲುವುಏನು? ಅದನ್ನು ನೀವು ಡಿನೈ ಮಾಡುತ್ತೀರಾ ? ಒಪ್ಪಿಕೊಳ್ಳುತ್ತೀರಾ? ಈ ಬಗ್ಗೆ ತಾವು ಹೇಳುವುದು ಸೂಕ್ತ ಎಂದು ನನಗೆ ಕಾಣುತ್ತದೆ.

ಶ್ರೀ ವೀರೇಂದ್ರ ಪಾಟೀಲ್ :—ಈಗ ಅನೇಕ ಮಾನ್ಯ ಸದಸ್ಯರು ಕಳವಳ ವ್ಯಕ್ತಮಾಡಿ ಅನೇಕ ಸಲಹೆಗಳನ್ನು ಸರಕಾರಕ್ಕೆ ನೀಡಿದ್ದಾರೆ ಮತ್ತು ತಮ್ಮ ಸಂಪೂರ್ಣವಾದ ಸಹಕಾರಗಳನ್ನು ನೀಡುತ್ತೇವೆ ಎಂದು ಭರವಸೆ ಕೊಟ್ಟಿದ್ದಾರೆ. ಅದಕ್ಕೆ ನಾನು ತುಂಬಾ ಆಭಾರಿಯಾಗಿದ್ದೇನೆ. ಮೊದಲೇ ಒಂದು ವಿಚಾರ ಸ್ಪಷ್ಟ ಮಾಡಿದ್ದೇನೆ. ಕೇಂದ್ರದಿಂದ ಪ್ರಪೋಜಲ್ಸ ಬಂದಿದೆ, ಆದಾದ ಮೇಲೆ ರಿಮೈಂಡರ್ಸ ಬಂದು ಒಂದು ವಾರದಲ್ಲಿ ನಿಮ್ಮ ಪಾಜಿಕ್ಟುಗಳು ನಿಲ್ಲಿಸುವ ಭರವಸೆ ನೀಡಬೇಕು ಎಂದು ಕೇಳಿದ್ದಾರೆ. ಅದಕ್ಕೆ ನಾನು ಹೇಳಿದೆ ನಿಮ್ಮ ಪ್ರಪೋಜಲ್ಸ್ ಮೇಲೆ ನನ್ನ ನಿಲುಮೆಯ ಏನು ಇದೆ ಎಂದು ನನ್ನ ಎಕ್ಸಪ್ಲನೇಷನ್‌ನ್ನು ಸಾಧ್ಯವಾದಷ್ಟು ಬೇಗ ಮೂರು ನಾಲ್ಕು ವಾರದಲ್ಲಿ ಕೊಡುತ್ತೇನೆ ಎಂದು ಅದಕ್ಕಾಗಿ ಈವೊತ್ತಿನ ದಿವಸ ೧೯೭೪ರ ಅಗ್ರಿಮೆಂಟ್ ಬಗ್ಗೆ ಮಾತನಾಡುವುದಕ್ಕೆ ಹೋಗುವ ಹಾಗಿಲ್ಲ. ಅಗ್ರಿಮೆಂಟ್ ಎಷ್ಟರಮಟ್ಟಿಗೆ ಬೈಂಡಿಂಗ್ ಇದೆ, ಅದರ ಪ್ರಕಾರ ನಮಗೆ ಏನು ನೀರು ಸಿಕ್ಕುತ್ತದೆ, ಉಳಿಯುತ್ತದೆ, ಎಷ್ಟು ಹೋಗುತ್ತದೆ ಎಂದು ಯಾವುದರ ಬಗ್ಗೆಯೂ ಮಾತನಾಡುವ ಹಾಗಿಲ್ಲ. ಈ ಮಾನ್ಯ ಸಭೆಯಲ್ಲಿ ಸ್ಪಷ್ಟ ಮಾಡುತ್ತೇನೆ, ನಾನು ಹೋದಾಗಲೆಲ್ಲಾ ಕೇಂದ್ರ ಸರಕಾರಕ್ಕೆ ಹೇಳಿದ್ದೇನೆ.

I have my own reservations regarding the 1924 Agreement ಎಂದು ಅದಕ್ಕಾಗಿ ಮಾನ್ಯ ಸಭೆಗೆ ಇಷ್ಟು ಮಾತ್ರ ಹೇಳಬಹುದು. ಕೇಂದ್ರ ಸರಕಾರದ ಪ್ರಪೋಜಲ್ಸ ಮತ್ತು ಸಬ್‌ಸಿಕ್ವೆಂಟ್ ರಿಮೈಂಡರ್ಸ್ ಬಂದ ಮೇಲೆ ಇವೊತ್ತು ನಮ್ಮ ಅಡ್ವೊಕೇಟ್ ಜನರಲ್ ಲಾ ಸೆಕ್ರೆಟರಿ

(ಶ್ರೀ ವೀರೇಂದ್ರ ಪಾಟೀಲ್)

ಮತ್ತು ಸಂಬಂಧಪಟ್ಟ ನಮ್ಮ ಇಂಜಿನೀಯರುಗಳೊಡನೆ ಸಮಾಲೋಚನೆ ಮಾಡುತ್ತಿದ್ದೇವೆ ಮತ್ತು ಶ್ರೀಮಾನ್ ದೇವೇಗೌಡರು ಹೇಳಿದಹಾಗೆ ಇಷ್ಟು ಕೆಲಸ ಇರುವಾಗ ಇದು ಕೇವಲ ಅಡ್ವೋಕೇಟ್ ಜನರಲ್ ಮತ್ತು ಲಾ ಸೆಕ್ರೆಟರಿ ಅವರಿಂದ ಆಗುವ ಹಾಗಿಲ್ಲ. ತಮಗೆ ಗೊತ್ತಿರ ಬಹುದು, ಮಹಾಪ್ಪದ ರಿಟೈರ್ಡ್ ಹೈ ಕೋರ್ಟ್ ಜಡ್ಜ್ ಅವರು ನಮ್ಮವರೇ, ಹಿಂದೆ ಬಾಂಬೆ ಸರಕಾರದಲ್ಲಿ ರಿಟೈರ್ಡ್ ಆದ ವೇಲ್ ಅವರ ಸರ್ವಿಸ್ಸನ್ನು ಕೃಷ್ಣ ಗೋದವರಿ ಸಲುವಾಗಿ ಪಡೆದಿದ್ದೇವೆ. ಅವರೊಡನೆ ಇದರ ಬಗ್ಗೆ ದೀರ್ಘವಾಗಿ ಪರಿಶೀಲನೆ ಮಾಡಬೇಕು ಎಂದಿದ್ದೇವೆ. ಅದು ಎಲ್ಲಾ ಪರಿಶೀಲನೆ ಆದ ಮೇಲೆ ಕಾವೇರಿ ನೀರಿನ ವಿವಾದದ ಬಗ್ಗೆ ನಮ್ಮ ನಿಲುಮೆ ಏನು ಎಂಬುದನ್ನು ಮತ್ತು ೧೯೭೪ರ ಅಗ್ರಿಮೆಂಟ್ ಬಗ್ಗೆ ನಮ್ಮ ನಿಲುವನ್ನು ಕೇಂದ್ರ ಸರಕಾರಕ್ಕೆ ಎರಡು ಮೂರು ವಾರಗಳಲ್ಲಿ ತಿಳಿಸುತ್ತೇನೆ. ನನ್ನ ನಿಲುಮೆ ಏನು ಎಂದು ಕೇಂದ್ರ ಸರ್ಕಾರಕ್ಕೆ ಸ್ಪಷ್ಟವಾಗಿ ತಿಳಿಸಿದ ಮೇಲೆ ಈ ಮಾನ್ಯ ಸಭೆಗೂ ತಿಳಿಸುತ್ತೇನೆ. ಆದಕ್ಕಾಗಿ ಈವೊತ್ತಿನ ದಿವಸ ಅಗ್ರಿಮೆಂಟ್ ಬಗ್ಗೆ ಏನೂ ಮಾತನಾಡುವುದಕ್ಕೆ ಹೋಗುವುದಿಲ್ಲ.

ಶ್ರೀ ಎಂ. ನಾಗಪ್ಪ ;—ಅಗ್ರಿಮೆಂಟ್ ಬಗ್ಗೆ ತಮ್ಮ ನಿಲುವು ಏನು ಎಂದು ಹೇಳಬೇಕಾಗಿಲ್ಲ. ಕೇಂದ್ರದ ಮಂತ್ರಿಗಳು ಅಗ್ರಿಮೆಂಟ್ ಎಕ್ಸೀಡ್ ಮಾಡಿದ್ದೇವೆ ಎಂದು ಹೇಳಿದ್ದಾರೆ ಅದನ್ನು ರೆಫ್ಯೂಟ್ ಮಾಡುತ್ತೀರಾ ?

ಶ್ರೀ ವೀರೇಂದ್ರ ಪಾಟೀಲ್ :—I am coming to that point. ನಾವು ಪ್ರಯತ್ನ ಮಾಡಿದಂತಹ ಪ್ರಾಜೆಕ್ಟುಗಳು ಯಾವುವು ಎಂದರೆ ಹೇಮಾವತಿ ಪ್ರಾಜೆಕ್ಟು ಪ್ರಾರಂಭ ಮಾಡಿದ್ದೇವೆ, ಕಬಿನಿ ಪ್ರಾಜೆಕ್ಟು ಪ್ರಾರಂಭ ಮಾಡಿದ್ದೇವೆ, ಹಾರಂಗಿಗೆ ಟೆಂಡರು ಬಂದಿವೆ, ಇಷ್ಟರಲ್ಲಿ ಆ ಕೆಲಸ ಪ್ರಾರಂಭವಾಗುತ್ತದೆ. ಇಷ್ಟರವರೆಗೆ ಹೆಚ್ಚಿನ ಕೆಲಸವಾಗಿಲ್ಲ.

ಇವತ್ತು ಹೇಮಾವತಿಯಲ್ಲಿ ನಾವು ಮಾಡುವಂತಹ ನಮ್ಮ ಯುಟಿಲೈಸೇಷನ್ ೨೧ ಟಿ ಎಂ ಸಿ. ಮತ್ತು ಕಬಿನಿಯಲ್ಲಿ ೧೯.೩ ಟಿ ಎಂ ಸಿ. ಒಟ್ಟು ೪೫ ಟಿ ಎಂ ಸಿ ಇದು ಬರುವ ಹಾಗಿಲ್ಲ ಏಕೆಂದರೆ ಇದನ್ನು ಆಫ್ ಸೆಟ್ ರಿಸರ್ವಾಯರ್ಸ್‌ನಿಂದ ಪಡೆದುಕೊಳ್ಳಬೇಕು. ಆವರು ಭವಾನಿಯಲ್ಲಿ ೬೦ ಪರ್ಸೆಂಟ್ ಯುಟಿಲೈಸೇಷನ್ ಮಾಡಿದ್ದಾರೆ. ಇವತ್ತು ಈ ಎಲ್ಲಾ ಲೆಕ್ಕ ಕೊಟ್ಟರೆ ೪೫ಕ್ಕೆ ಇನ್ನೂ ನಾವು ಮುಟ್ಟಿಯೇ ಇಲ್ಲ. ಹಾರಂಗಿಯಲ್ಲಿ ೮. ೧೦ ಟಿ ಎಂ ಸಿ ಬರಬಹುದು, ಆದರೂ ಇನ್ನೂ ೪೫ ಟಿ ಎಂ ಸಿ ಒಳಗಡೆಯೇ ಇದ್ದೇವೆ. ತಾವೇ ಊಹೆ ಮಾಡಿಕೊಳ್ಳಬಹುದು ನಾವು ರೂಲ್ಸ್‌ನ್ನು ವಯೋಲೇಟ್ ಮಾಡಿದ್ದೇವೆಯೇ ಇಲ್ಲವೇ ಅಂತ ಅನ್ನುವುದನ್ನು ಇನ್ನೂ ಒಂದು ಹೆಜ್ಜೆ ಮುಂದೆ ಹೋಗಿ ಹೇಳುವುದಾದರೆ ನಾವು ಹಾದಿ ತಪ್ಪಿದ್ದೇವೆಯೇ ಇಲ್ಲವೇ ಎಂಬು, ದನ್ನು ಮಾನ್ಯ ಸದಸ್ಯರೇ ಊಹೆ ಮಾಡಿಕೊಳ್ಳಬಹುದು ಎಂದು ನನಗೆ ಅನ್ನಿಸುತ್ತದೆ.

ಮತ್ತು ಈ ವಿಚಾರದಲ್ಲಿ ಬಹುಶಃ ನನಗೆ ನೆನಪು ಇದ್ದಂತೆ ಪ್ರತಿಯೊಂದು ಸಲ ವಿರೋಧ ಪಕ್ಷದ ಮಾನ್ಯ ಸದಸ್ಯರನ್ನು ನಾನು ವಿಶ್ವಾಸದಲ್ಲಿ ತೆಗೆದುಕೊಂಡು ಹೆಜ್ಜೆ ಇಡುತ್ತಾ ಇದ್ದೇನೆ. ಇದನ್ನು ಪ್ರತ್ಯೇಕವಾಗಿ ಹೇಳಬೇಕಾದಂತಹ ಆವಶ್ಯಕತೆ ಇಲ್ಲ ಏಕೆಂದರೆ ಇದು ಅನೇಕ ಮಾನ್ಯ ಸದಸ್ಯರಿಗೆ ಗೊತ್ತಿದೆ. ಶ್ರೀಮಾನ್ ಚನ್ನಬಸಪ್ಪನವರು ನಮ್ಮನ್ನು ವಿಶ್ವಾಸದಲ್ಲಿ ತೆಗೆದುಕೊಳ್ಳಿ ಎಂದು ಹೇಳಿದರು. ನನಗೆ ಅನಿಸುತ್ತದೆ ಈ ಒಂದು ಪ್ರಶ್ನೆ ಬಗ್ಗೆ ನಾನು ಯಾವಾಗಲೂ ಹೇಳುತ್ತಾ ಇದ್ದೇನೆ, ಬಹುಶಃ ಮತ್ತೆ ಹೇಳಿದರೆ ಪುನರುಕ್ತಿ ಯಾಗುತ್ತದೆ, ಎಂದು ಕಾಣುತ್ತದೆ. ಇದು ನನ್ನ ಪ್ರಶ್ನೆ ಅಲ್ಲ. ಇದು ಇಡೀ ರಾಜ್ಯದ ಪ್ರಶ್ನೆ. ಪ ತಿಯೊಬ್ಬರನ್ನೂ ವಿಶ್ವಾಸದಲ್ಲಿ ತೆಗೆದುಕೊಳ್ಳುತ್ತಾ ಇದ್ದೇನೆ. ಯಾವಾಗ ಈ ಪ್ರಪೋಸಲ್ ಬಂತೋ, ಲೆಟರ್ ಬಂತೋ ಅವತ್ತಿನ ಮಾರನೆ ದಿವಸವೇ ಮಾನ್ಯ ಸದಸ್ಯರನ್ನು ಕರೆಸಿ ಈ ರೀತಿಯಿಂದ ಲೆಟರ್, ಪ್ರಪೋಸಲ್ ಬಂದಿದೆ ಎಂದು ಹೇಳಿದ್ದೇನೆ, ಅಷ್ಟೇ ಅಲ್ಲ ಚರ್ಚೆ ಮಾಡಿದ್ದೇನೆ. ಮತ್ತು ನನ್ನ ನಿಲುಮೆ ಏನಿಬುದನ್ನು ತಿಳಿಸಿದ್ದೇನೆ. ಫೈನಲ್ ಡಿಸಿಷನ್ ತೆಗೆದುಕೊಳ್ಳುವುದಕ್ಕಿಂತ ಮುಂಚೆ ಅವರ ಜೊತೆಗೆ ಚರ್ಚೆಮಾಡಿದ ಮೇಲೆ ನನ್ನ ನಿಲುವನ್ನು ಫೈನಲೈಸ್ ಮಾಡಿ ಗವರ್ನಮೆಂಟ್ ಆಫ್ ಇಂಡಿಯಾಕ್ಕೆ ಕಳುಹಿಸುತ್ತೇನೆ. ಆದಕ್ಕೆ ಈ ಪ್ರಶ್ನೆ ಏನಿದೆ ಇದು ನನ್ನ ಪರ್ಸನಲ್ ಪ್ರಶ್ನೆ ಅಲ್ಲ, ಸರ್ಕಾರದ ಪ್ರಶ್ನೆ, ವಿರೋಧ ಪಕ್ಷದ ನಾಯಕರಾಗಲಿ, ಸದಸ್ಯರಾಗಲಿ ಅವರೊಡನೆ ಇದರ ಬಗ್ಗೆ ಸಮಾಲೋಚನೆ ಮಾಡಬೇಕಾದಂತಹ ಆವಶ್ಯಕತೆ ಇಲ್ಲ ಅಂತ ನಾನು ತಿಳಿದುಕೊಂಡಿಲ್ಲ. ಅವರಿಗೆ ಪ್ರತಿಯೊಂದು ಸಲ ನಾನು ವಿಶ್ವಾಸದಲ್ಲಿ ತೆಗೆದುಕೊಂಡು ಏನು ನಡೆಯುತ್ತಾ ಇದೆ ಎಂಬುದನ್ನು ತಿಳಿಸಿ, ಮುಂದೆ ಯಾವ ರೀತಿ ಹೆಜ್ಜೆ ಇಡಬೇಕೆಂಬುದನ್ನು ಹೇಳುತ್ತಾ ಇದ್ದೇನೆ.

ಶ್ರೀ ಎಚ್. ಸಿದ್ದವೀರಪ್ಪ:—ಒಂದು ವಿಷಯ ಹೇಳಬೇಕಾದರೆ, ನಿಜ ತಾವು ಪ್ರತಿಸಾರಿಯೂ ಹೇಳುತ್ತಲೇ ಇದ್ದೀರಿ ನಮ್ಮನ್ನು ವಿಶ್ವಾಸದಲ್ಲಿ ತೆಗೆದುಕೊಂಡಿದ್ದೇನೆ ಅಂತ. ನಮ್ಮನ್ನು ವಿಶ್ವಾಸದಲ್ಲಿ ತೆಗೆದುಕೊಂಡಿಲ್ಲ ಎಂದು ನಾವು ಪ್ರತಿಸಾರಿಯೂ ಹೇಳುತ್ತಲೇ ಇದ್ದೇವೆ ಇದರಲ್ಲಿ ಏನೋ ಗೊಂದಲ ಇರಬೇಕು. ಆ ದ್ದರಿಂದ ಈ ದಿವಸ ನಿನುಗೆ ನಾನು ಒಂದು ಸ್ಪಷ್ಟವಾದ ಸಲಹೆ ಮಾಡುತ್ತೇನೆ. ನಮ್ಮ ಮೈಸೂರು ರಾಜ್ಯದಲ್ಲಿ ಈ ಕಾವೇರಿ ಪ್ರಶ್ನೆಯ ವಿಚಾರದಲ್ಲಿ ಆಗಲೀ ಕೃಷ್ಣಾ ಗೋದಾವರಿ ನದಿ ನೀರಿನ ವಿಚಾರದಲ್ಲಿ ಆಗಲೀ ನಮ್ಮ ಮಾನ್ಯ ಸಭೆಯಲ್ಲಿ ಸದಸ್ಯರಾಗಿರತಕ್ಕ ಶ್ರೀಮಾನ್ ಚನ್ನಬಸಪ್ಪನವರು ಎಷ್ಟು ಆಳವಾಗಿ ಅಭ್ಯಾಸ ಮಾಡಿದ್ದಾರೋ ಆಷ್ಟು ಆಳವಾಗಿ ಇನ್ನು ಯಾರೂ ಅಭ್ಯಾಸಮಾಡಿಲ್ಲ. ಈಗತಾನೆ ಹೇಳಿದಿರಿ ಯಾರೋ ಒಬ್ಬ ರಿಟೈರ್ ಆದವರನ್ನು ಲೀಗಲ್ ಅಡ್ವೈಸರ್ ಆಗಿ ತೆಗೆದುಕೊಂಡಿದ್ದೇವೆ ಅಂತ ಅದೇ ರೀತಿ ಒಂದು ಸರ್ಕಾರಿ ಆರ್ಡರ್ ಮಾಡಿ ಶ್ರೀಮಾನ್ ಚನ್ನಬಸಪ್ಪನವರನ್ನು ನಿಮ್ಮ ಗೌರವಯುತ ಸಲಹೆಗಾರರನ್ನಾಗಿ ತೆಗೆದು ಕೊಳ್ಳಬೇಕೆಂದು ಸಲಹೆ ಮಾಡುತ್ತೇನೆ., ಇದಕ್ಕೆ ತಾವು ಏನು ಹೇಳುತ್ತೀರಿ?

ಶ್ರೀ ವೀರೇಂದ್ರ ಪಾಟೀಲ್:—ಇದರಲ್ಲಿ ಟೀಕಿಂಗ್ ಇನ್‌ಟು ಕಾನ್‌ಫಿಡೆನ್ಸ್ ಅಂದರೆ ಏನು ಅನ್ನುವಂತಹ ಒಂದು ಪ್ರಶ್ನೆ ಉದ್ಭವಿಸುತ್ತದೆ ಶ್ರೀ ಮಾನ್ ಸಿದ್ದವೀರಪ್ಪನವರ ಡೆಫಿನಿಷನ್ ಪ್ರಕಾರ ಅವರು ಇಂಥವರು ಯಾರೂ ಅಂತ ಹೇಳುತ್ತಾರೆ ಅವರನ್ನು ಅಡ್ವೈಸರ್ ಅಂತ ತೆಗೆದುಕೊಂಡರೆ ಅವರನ್ನು ವಿಶ್ವಾಸಕ್ಕೆ ತೆಗೆದು-ಕೊಂಡಂತೆ ಅಂತ ಅರ್ಥವಾಗುತ್ತದೆ. ಆ ಅರ್ಥದಲ್ಲಿ ನಾನು ಹೇಳಲಿಲ್ಲ. ಇಂತಹ ಒಂದು ಪರಿಸ್ಥಿತಿ ಉದ್ಭವ-ವಾದಾಗ ನಾನು ಎಲ್ಲರಿಗೂ ಕರೆಸುತ್ತಾ ಇದ್ದೇನೆ ಮತ್ತು ಸಮಾಲೋಚನೆ ಮಾಡುತ್ತಾ ಇದ್ದೇನೆ ಮತ್ತು ಮುಂದೆ ಏನು ಹೆಜ್ಜೆ ಇಡಬೇಕೆಂಬುದನ್ನು ಚರ್ಚೆ ಮಾಡಿದ ಮೇಲೆ ಒಂದು ಹೆಜ್ಜೆ ಮುಂದೆ ಇಡುತ್ತಾ ಇದ್ದೇನೆ ಅಂತ ಹೇಳುತ್ತಾ ಇದ್ದೆ. ಇವತ್ತು ಯಾರನ್ನು ಅಡ್ವೈಸರ್ ಆಗಿ ಮಾಡಿಕೊಳ್ಳಬೇಕೆಂಬ ಪ್ರಶ್ನೆ ನಮ್ಮ ಮುಂದೆ ಇಲ್ಲ. ಬಹುಶ: ಶ್ರೀ ಮಾನ್ ಸಿದ್ದವೀರಪ್ಪನವರು ಚನ್ನಬಸಪ್ಪನವರನ್ನು ಅಡ್ವೈಸರ್ ಆಗಿ ಮಾಡಿಕೊಳ್ಳಿ ಎಂದರೆ ಶಿವಪ್ಪನವರು ಮತ್ತೊಬ್ಬರನ್ನು ಅಡ್ವೈಸರ್ ಆಗಿ ಮಾಡಿಕೊಳ್ಳಿ ಎಂದು ಹೇಳಬಹುದು. ಅನೇಕ ಪ್ರಶ್ನೆಗಳು ಬಂದಾಗ ಸರ್ಕಾರದವ್ರು ನಿಮ್ಮನ್ನೂ ಕೂಡ ಸಮಭಾಗಿಗಳನ್ನಾಗಿ ಮಾಡಿಕೊಂಡರೆ ವಿಶ್ವಾಸಕ್ಕೆ ತೆಗೆದುಕೊಂಡ ಹಾಗೆ ಅರ್ಥವಾಗುತ್ತದೆ. ಎಂದರೆ ವಿರೋಧ ಪಕ್ಷದ ನಾಯಕರನ್ನು ವಿಶ್ವಾಸದಲ್ಲಿ ತೆಗೆದುಕೊ-ಳ್ಳುವಂತಹ ಒಂದು ಪ್ರೊಸೀಜರ್ ಏನಿದೆ ಇದು ಇವತ್ತೇನೂ ಹೊಸದಾಗಿ ಹಾಕುತ್ತಿಲ್ಲ. ಕೇಂದ್ರಸರ್ಕಾರದಲ್ಲಿ ಅನೇಕ ಪ್ರಶ್ನೆಗಳು ಬರುತ್ತವೆ, ಅನೇಕ ಸಲ ವಿರೋಧಪಕ್ಷಗಳ ನಾಯಕರ ಜೊತೆಯಲ್ಲಿ ಅನೇಕ ಗಡುತರವಾದ ಸಮಸ್ಯೆಗಳನ್ನು ಚರ್ಚೆ ಮಾಡುತ್ತಾರೆ. ಅದರ ಅರ್ಥ ವಿಶ್ವಾಸದಲ್ಲಿ ತೆಗೆದುಕೊಳ್ಳಬೇಕು. ಚರ್ಚೆ ಮಾಡಬೇಕು ಅಂದಾಗ ನೀವು ಹೇಳಿದವರನ್ನೇ ಅಡ್ವೈಸರನ್ನಾಗಿ ತೆಗೆದುಕೊಳ್ಳಬೇಕು ಅಥವಾ ಸರ್ಕಾರದಲ್ಲಿ ಏನಾದರೂ ಒಂದು ಸ್ಥಾನಮಾನ ಕೊಟ್ಟರೆ ವಿಶ್ವಾಸಕ್ಕೆ ತೆಗೆದುಕೊಂಡ ಹಾಗಾಗುತ್ತದೆ ಎಂಬುದನ್ನು ಒಪ್ಪುವುದಕ್ಕಾಗುವು-ದಿಲ್ಲ.ಈ ಪ್ರಶ್ನೆ ಬಗ್ಗೆ ಯಾವಾಗ ಅವಶ್ಯಕತೆ ಅಂತ ಅನಿಸುತ್ತದೆ ಆಗ ವಿರೋಧ ಪಕ್ಷದ ನಾಯಕರ ಸಲಹೆ ಪಡೆಯುತ್ತೇವೆ, ಅವರ ಜೊತೆಯಲ್ಲಿ ಸಮಾಲೋಚನೆ ಮಾಡುತ್ತೇವೆ. ಸಮಾಲೋಚನೆ ಎಂದರೆ ೧ - ೨ - ೩ ದಿವಸವಾದರೂ ಆಗಬಹುದು, ಅವಶ್ಯಕತೆ ಕಂಡಂತೆ ಮಾಡಬೇಕಾಗುತ್ತದೆ, ಅದನ್ನು ಮಾಡುವುದಕ್ಕೆ ತಯಾರಾಗಿದ್ದೇನೆ. ಈಗ ಒಂದು ವಿಚಾರವನ್ನು ನಾನಾ ಬಹಳ ದು:ಖದಿ ದ ಹೇಳಬೇಕಾಗುತ್ತದೆ, ಮಿತ್ರರು ಹೇಳಿದ ಹಾಗೆ ಕೇಂದ್ರಸರ್ಕಾರದವರು ನಮಗೆ ನ್ಯಾಯ ದೊರಕಿಸಿಕೊಡಬೇಕು. ಮೈಸೂರಿಗೂ ಅಷ್ಟೆ ಮತ್ತು ತಮಿಳು ನಾಡಿಗೂ ಅಷ್ಟೆ. ಒಂದು ಕಣ್ಣಿಗೆ ಸುಣ್ಣ ಒಂದು ಕಣ್ಣಿಗೆ ಬೆಣ್ಣೆ ಯಂತೆ ಮಾಡುವಂತಹ ಧೋರಣೆ ಯಾರು ತಾಳಬಾರದು, ಇವತ್ತು ತಳೆದಿದ್ದಾರೆ ಎಂದು ಹೇಳುತ್ತಾ ಇಲ್ಲ, ನಾನು ಆ ಆಪಾದನೆ ಮಾಡುತ್ತ ಇಲ್ಲ. ಆದರೆ ನಾನು ಒಂದು ವಿಚಾರ ಬಹಳ ದು:ಖದಿಂದ ಹೇಳಬೇಕಾಗುತ್ತದೆ. ಅನೇಕ ಸಲ ಕೇಂದ್ರಸರ್ಕಾರದ ಜೊತೆಯಲ್ಲಿ ಸಮಾಲೋಚನೆ ಮಾಡುತ್ತಾ ಇದ್ದೇವೆ, ಪ್ರಾಜೆಕ್ಟುಗಳನ್ನು ಕಳುಹಿಸಿ ಅವರ ಅಬಸರ್ವೇಷನ್ ಬಂದಿದೆ ಮತ್ತು ಆದಕ್ಕೆ ರಿಪ್ಲೈ ಕಳುಹಿಸಿದ್ದೇವೆ ಮತ್ತು ಅವರಿಂದಲೂ ಬಂದಿದೆ, ಇದು ಮಾಡಿ ಅಂದರು, ಆದು ಮಾಡಿ ಅಂದರು ಹೇಳಿದ್ದನ್ನೆಲ್ಲಾ ಮಾಡುತ್ತಾ ಮಾಡತ್ತಾ ಹೋಗುತ್ತಾ ಇದ್ದೇವೆ ಇವತ್ತು ಏನು ಈ ಅಗ್ರಿಮೆಂಟ್ ಬಗ್ಗೆ ರಿಸರ್ವೇಷನ್ ಇದೆ ಎಂಬ ಮಾತು ಹೇಳಿದೆ ಆದರ ಬಗ್ಗೆ ಏನು ಹೇಳುತ್ತಾ ಇಲ್ಲ, ಆದರೆ ಆದೇನೋ ಒಂದು ಇದೆ ಅಂತ ತಿಳಿದುಕೊಂಡು ಟಿಬಿ ಎಂ ಸಿ ಉಪಯೋಗಿಸಿಕೊಳ್ಳಕ್ಕ ಅಧಿಕಾರ ಇದೆಯಲ್ಲಾ ಅದನ್ನು ಎಲ್ಲಾರು ಒಪ್ಪುತ್ತಾರಲ್ಲಾ ಅದರಂತೆ ತಮಿಳು ನಾಡಿಗೆ ಇಷ್ಟು ನೀರನ್ನು ಬಿಡಬೇಕೆಂದು ಇರಬಹುದು, ಆದರೆ ಬಹಳ ದು:ಖದಿಂದ ಹೇಳುತ್ತೇನೆ ಇಲ್ಲಿಯವರೆಗೂ ಕೇಂದ್ರ ಸರ್ಕಾರದವರು ಮೈಸೂರು ರಾಜ್ಯ ಟಿಬಿ ಎಂ ಸಿ ಯಾವ ರೀತಿಯಿಂದ ಉಪಯೋಗ ಮಾಡುವುದಕ್ಕೆ ಸಾಧ್ಯ ಇದೆ ಎಂಬ ಒಂದುಸಲಹೆ ಯನ್ನೂ ಮಾಡಿಲ್ಲ,(ಒಂದು ಸಜೆಷನ್ ನ್ನೂ ಕೊಟ್ಟಿಲ್ಲ, ಅಡ್ವೈಸನ್ನೂ ಕೆಟ್ಟಿಲ್ಲ) ಯಾವಾಗಲೂ ಲಿಮಿಟೆಡ್ ಫ್ಲೋಸ್, ಲಿಮಿಟೆಡ್ ಫ್ಲೋಸ್ ಎಂಬ ಜಪ ನಡೆಯುತ್ತಾ ಇದೆಯೇ ಹೊರತಾಗಿ ಮತ್ತೇನೂ ಇಲ್ಲ. ಕಾವೇ ರಿ ಬೇಸಿನ್‌ನಲ್ಲಿ ನಮ್ಮ ಇರಿಗೇಷನ್ ಪ್ರಪರ್ಸಿಟೇಜು ಕೇವಲ ೬ ಪರ್ಸೆಂಟ್, ತಮಿಳು ನಾಡಿನದು ೩೫ರಿಂದ ೪೦ರ ವರೆಗೂ ಬರುತ್ತದೆ. ನಮ್ಮ ಏರಿಯಾ ಡೆವಲಪ್‌ಮೆಂಟು ಕೇವಲ ಮೂರೂವರೆ ಲಕ್ಷ ಎಕರೆ, ಮದ್ರಾ

(ಶ್ರೀ ವೀರೇಂದ್ರ ಪಾಟೀಲ್)

ಸಿನದು ಸುಮಾರು ೨೧ ಲಕ್ಷ ಎಕರೆ ಬರುತ್ತದೆ. ಕಾವೇರಿಯಲ್ಲಿ ಹರಿಯುವಂತಹ ನೀರು ನಮ್ಮದು, ಸುಮಾರು ೭೫ ಪರ್ಸೆಂಟ್ ಕಾಂಟ್ರಿಬ್ಯೂಷನ್ ಇದೆ.

ಶ್ರೀ ಎಚ್ ಎಂ ಚನ್ನಬಸಪ್ಪ:—ತಾವು ಈಗ ಹೇಳಿದ ಪ್ರಕಾರ—ನಾವು ಏನೇ ಕ ಸಲ ದೆಹಲಿಗೆ ಹೋಗಿದ್ದೇವೆ, ಚರ್ಚೆ ಮಾಡಿದ್ದೇವೆ ಅವರು ಲಿಮಿಟ್ ಫ್ಲೋಸ್ ಅಂತ ಜಪ ಹಿಡಿದುಕೊಂಡಿದ್ದಾರೆ ಲಿಮಿಟ್ ಫ್ಲೋಸ್ ಅನ್ನುವುದು ಅಗ್ರಿಮೆಂಟನಲ್ಲಿ ಇರೋಣದರಿಂದ ಅದನು ಹಿಡಿದು ಕೊಂಡಿದಾರೆ ಇಲ್ಲದೇ ಇದ್ದರೆ ಹಿಡಿದುಕೊಳ್ಳುತ್ತಾ ಇರಲಿಲ್ಲ ಎಂದು ಹೇಳಿದಿರಿ. ಈ ಲಿಮಿಟ್ ಫ್ಲೋಸ್ ಇರುವುದರಿಂದ ನಮಗೆ ಕಟ್ಟುವುದಕ್ಕೆ ಆಗುವುದಿಲ್ಲ ಎಂಬುದು ನಿಮಗೆ ಗೊತ್ತಿದೆ ನಿಮ್ಮ ಅಧಿಕಾರಿಗಳು ಮತ್ತು ನೀವು ಚರ್ಚೆಗೆ ಹೋದ ಕಾಲದಲ್ಲಿ ಈ ಲಿಮಿಟ್ ಫ್ಲೋಸ್ ನಲ್ಲಿ ಒಂದು ಪ್ರಪೋಷನ್ ಏನು ಹಾಕಿದ್ದಾರೆ ಅದನ್ನು ಗಮನಕ್ಕೆ ತಂದಿರಾ. page 4 of the Rules of Regulations provide:

'A 11 formula and Co-efficients in such a formula of discharge referred to in the rules shall be subeject to revision by mutual agreement.

So this shall be subject to revision by mutal agreement.

ನಿಮಗೆ ಅಡ್ಡಿ ಬಂದಿದೆ ಅಂತ ಗೊತ್ತಾದ ಮೇಲೆ ಕ್ಲಿಯರೆನ್ಸ್ ಕೊಡ್ರಿ ಅಂತ ವರ್ಕಿಂಗ್ ಟೇಬಲ್ಲಾ ನೀನೇ ಅಗ್ರಿಮೆಂಟ್‌ಗೆ ಒಳಪಟ್ಟು ಕಟ್ಟಬೇಕೆಂದು ಒದ್ದಾಡುತ್ತಾ ಇದ್ದೀರೆವಿನಾ ಪ್ರಪೋಷನ್ ಹಾಕಿದರಲ್ಲ ಅದರ ಬದಲಾವಣೆ ಮಾಡಿರಿ ಅಂತ ಹೇಳಿ, ನಿಮ್ಮ ಅಧಿಕಾರಿಗಳು, ಈ ಸ್ಟ್ಯಾಂಡ್ ತೆಗೆದುಕೊಂಡು ನೀವು ಅವರು ಒಪ್ಪಿದರೆ ಮಾಡಬಹುದು.

ಶ್ರೀ ಎಚ್. ಎನ್. ನಂಜೇಗೌಡ.—ಮೈಸೂರಿಗೆ ೪೫ ಟಿ ಎಂ ಸಿಎಫ್‌ಟಿ ಗೆ ಅವಕಾಶ ಕೊಡಬೇಕೆಂದು ಸಿ ಡಬ್ಲ್ಯು ಪಿಸಿ ಏಕೆ ಹೇಳಲಿಲ್ಲ ?

ಶ್ರೀ ವೀರೇಂದ್ರ ಪಾಟೀಲ್.—ಅದನ್ನು ಹೇಳುತ್ತಿದ್ದೆ, ಹೇಳುವವರೆಗೆ ನಿಧಾನವಿರಬೇಕು. ಅಗ್ರಿಮೆಂಟ್ ಪ್ರಕಾರ ೪೫ ಟಿ ಎಂ ಸಿಎಫ್‌ಟಿ ಉಪಯೋಗಮಾಡುವುದಕ್ಕೆ ಮೈಸೂರಿಗೆ ಅವಕಾಶವಿದೆ ಮತ್ತು ಇಷ್ಟು ನೀರು ಲಿಮಿಟ್ ಫ್ಲೋ ಬಿಡಬೇಕೆಂದು ಕೇಳುವುದಕ್ಕೆ ತಮಿಳು ನಾಡಿಗೆ ಅಧಿಕಾರ ಇದೆ. ಕೇಂದ್ರ ಸರಕಾರದವರು ಮೈಸೂರು ಮತ್ತು ಮದ್ರಾಸಿಗೆ ನ್ಯಾಯ ದೊರಕಿಸಿ ಕೊಡಬೇಕಾಗಿದೆ. ಕೇಂದ್ರ ಸರಕಾರದಲ್ಲಿ ಸೆಂಟ್ರಲ್ ವಾಟರ್ ಅಂಡ್ ಪವರ್ ಕಮಿಷನ್ ಇದೆ, ಎಕ್ಸ್‌ಪರ್ಟ್ಸ್ ಇದ್ದಾರೆ, ಒಳ್ಳೆಯ ಎಂಜಿನಿಯರುಗಳಿದ್ದಾರೆ. ಕೇಂದ್ರ ಸರಕಾರದವರು ಅವರನ್ನು ಕೇಳಿ ಈ ರೀತಿಯಿಂದ ಮಾಡಬಹುದು ನಿಮ್ಮ ಹಕ್ಕುಬಾಧ್ಯತೆಗೆ ಚ್ಯುತಿ ಬರುವುದಿಲ್ಲ ಎಂದು ಸಮಜಾಯಿಷಿ ಕೊಡಬೇಕು. ಅದು ಅವರ ಕರ್ತವ್ಯ. ಇಲ್ಲಿಯವರೆಗೆ ಹಾಗೆ ಮಾಡಿಲ್ಲ ಎಂದು ಹೇಳುತ್ತಿದ್ದೆ. ಮೊದಲು ನೀವು ನೀರು ಬಿಡಿ ಎಂದು ಹೇಳುವುದು ಅವರಿಗೆ ಆರ್ಥವಾಗುವುದು. ಇನ್ನೂ ಒಂದು ಪದ ಉಪಯೋಗಮಾಡಿದ್ದಾರೆ. ಈಗ ಪೈಲಾಕ್ ಹೇಳಿನ ಹಾಗೆ ಮಾಡಲಾಗುತ್ತಿದೆ, ಪೌಂಡ್ ಆಫ್ ಫ್ಲೆಷ್ ಕೇಳಲಾಗುತ್ತಿದೆ ಎಂದು ಹೇಳಿದರು, ನಾನು ಹಾಗೆ ಹೇಳುವುದಿಲ್ಲ ಜನರಿಗೆ ಕೇಂದ್ರ ಸರಕಾರದಿಂದ ನ್ಯಾಯ ದೊರೆಯುತ್ತಿಲ್ಲವೆಂಬ ಭಾವನೆ ಬರಬಾರದು. ನಮಗೂ ಮದ್ರಾಸಿನವರಿಗೂ ಸರಿಯಾಗಿ ನ್ಯಾಯವಿಮರ್ಶೆ ಮಾಡಿ ನಾವು ಉಪಯೋಗಿಸಲು ಅವಕಾಶವಿರುವುದಕ್ಕೆ ಅನುಮತಿ ಕೊಡಬೇಕಾದ್ದು ಅವಶ್ಯಕ. ಕೇಂದ್ರ ಸರಕಾರ ಒಂದು ಸರಿಯಾದ ತೀರ್ಮಾನ ಮಾಡಬಹುದೇ ಹೊರತು ನೀವು ಅಗ್ರಿಮೆಂಟ್ ಮಾಡಿದ್ದಿರಿ, ವಯಲೇಟ್ ಮಾಡಿದ್ದೀರಿ ಎಂದು ಹೇಳುವುದು ಉಚಿತವಲ್ಲ. ಹಾಗೆ ಹೇಳಿದರೆ ಜನರ ಮನಸ್ಸಿನಲ್ಲಿ ಕಳವಳವುಂಟಾಗುವುದು. ಜನರಿಗೆ ಇದರಿಂದೇನು ಭಾವನೆ ಬರುತ್ತದ ಎಂಬುದನ್ನು ಹೇಳುತ್ತಿದ್ದೇನೆ. ಲೇಮೆನ್‌ಗೆ ಕೇವಲ ತಮಿಳುನಾಡಿನ ಹಿತದೃಷ್ಟಿಯಿಂದ ಅದರ ಹಿತಕ್ಕೆ ದಕ್ಕೆ ಬರದ ಹಾಗೆ ನೋಡಿಕೊಳ್ಳುತ್ತಿದ್ದಾರೆ ಎಂಬ ಭಾವನೆ ಬರಬಾರದು. ಈಗ ಆ ರೀತಿ ಭಾವನೆ ಬರಲು ಅವಕಾಶವಾಗಿದೆ. ಅದಕ್ಕೆ ಅವಕಾಶ ಇಲ್ಲದಂತೆ ನೋಡಿಕೊಳ್ಳಬೇಕಾಗಿದೆ ಎಂದು ಈ ದಿವಸ ಹೇಳುತ್ತಿದ್ದೇನೆ.

ಇನ್ನು ಕ್ಲಿಯರೆನ್ಸ್ ಬಗ್ಗೆ ಹೇಳುವುದಾದರೆ ನಮ್ಮಮೇಲೆ ಒಂದು ಅಪವಾದವಿದೆ, ಪಾರಂಗಿ ಮತ್ತು ಹೇಮಾವತಿ ಪ್ರಾಜೆಕ್ಟ್‌ಗಳನ್ನು ಕ್ಲಿಯರೆನ್ಸ್ ಇಲ್ಲದೆ ಕಟ್ಟುತ್ತಾ ಇದ್ದಾರೆ ಎಂಬ ಅಪಾದನೆ ಬಂದಿದೆ. ನಿನ್ನೆ

ಯಾರೋ ಕಾರಿಡಾರಿನಲ್ಲಿ ಹೇಳುತ್ತಿದ್ದರು–ಹೆಸರು ಹೇಳುವುದಿಲ್ಲ-ನೀವು ೬೧ರಲ್ಲಿ ಆಬ್ಸರ್ವೇಷನ್ನಿಗೆ ಡಿಮ್ಯಾಂಡ್ ಮಾಡಿದಿರಿ, ಈಗ ಎಂಟು ವರ್ಷವಾಯ್ತು. ಆದರೆ ತಮಿಳುನಾಡಿನವರು ಕೇಳಿದರೆ ಎರಡು ತಿಂಗಳಲ್ಲೇ ಆಗುವುದು ಎಂದು ಹೇಳುತ್ತಿದ್ದರು. ಇದು ದುರ್ದೈವ.

ಶ್ರೀ ಎಚ್. ಎಂ. ಚೆನ್ನಬಸಪ್ಪ.—ಅದು ಸರಿಯಲ್ಲ. ಹಿಂದೆ ಮುಖ್ಯ ಮಂತ್ರಿಗಳು ಹೇಳಿರುವುದನ್ನು ಮರೆತಿರಬಹುದು.

ಶ್ರೀ ವೀರೇಂದ್ರ ಪಾಟೀಲ್.—ಕ್ಷಮಿಸಬೇಕು, ನನಗೆ ಅವರಷ್ಟು ಜ್ಞಾಪಕಶಕ್ತಿಯಿಲ್ಲ, ಇಷ್ಟು ಗೊತ್ತಿದೆ, ಕೃಷ್ಣ–ಗೋದಾವರಿ ಬಗ್ಗೆ ಪತ್ರವ್ಯವಹಾರ ಮಾಡಿರುವುದನ್ನು ಎಲ್ಲರಿಗೂ ಪ್ರಿಂಟು ಮಾಡಿ ಹಂಚಲಾಗಿದೆ. ಟ್ರಿಬ್ಯೂನಲ್ ಡಿಮ್ಯಾಂಡ್ ಮಾಡಿ ಬೇಡವೆಂದು ವಿತ್‌ಡ್ರಾ ಮಾಡಿರುವಂತೆ ಕಾಣುವುದಿಲ್ಲ. ಬೇಕಾದರೆ ವೆರಿಫೈ ಮಾಡಬಹುದು, ವಿತ್‌ಡ್ರಾ ಮಾಡಿದ್ದರೆ ಟ್ರಿಬ್ಯೂನಲ್ ಆಗುತ್ತಿರಲಿಲ್ಲ. ಮೈಸೂರು ಮತ್ತು ಮಹಾರಾಷ್ಟ್ರದ ಸಮಸ್ಯೆ ಬಗ್ಗೆ ಟ್ರಿಬ್ಯೂನಲ್‌ಗೆ ಬೇಡಿದರು, ಚೆನ್ನಬಸಪ್ಪನವರ ಕಾಲದಲ್ಲೇ ಡಿಮ್ಯಾಂಡ್ ಮಾಡಿದರು, ಕೃಷ್ಣ-ಗೋದಾವರಿ ಬಗ್ಗೆ ಮೈಸೂರೇ ಮೊದಲು ಟ್ರಿಬ್ಯೂನಲ್ಲಿಗೆ ಡಿಮ್ಯಾಂಡ್ ಮಾಡಿರುವುದು, ಯಾವುದಾದರೂ ಒಂದು ವಿಷಯ ಹೇಳುವಾಗ ಮಧ್ಯೆ ಇಂಟರೆಪ್ಟ್ ಮಾಡಿದರೆ ಕಷ್ಟವಾಗುವುದು. ಫೆಬ್ರುವರಿಯಲ್ಲಿ ಟ್ರಿಬ್ಯೂನಲ್ಲಿಗೆ ಡಿಮ್ಯಾಂಡ್ ಮಾಡಿದ್ದಾರೆ, ತಮಿಳುನಾಡು ಹೀಗೆ ಮಾಡಿ ಎರಡು ತಿಂಗಳಾಗಿಲ್ಲ. ಆದರೆ ನಾವು ಕೇಳಿದರೆ ಎಂಟು ವರ್ಷ ಬೇಕು, ಬೇರೆಯವರಿಗೆ ಎರಡು ತಿಂಗಳಾದರೆ ಸಾಕು ಎಂದು ಹೇಳುವುದು ದುರದೃಷ್ಟಕರ, ಈ ರೀತಿ ವಾತಾವರಣ ದೇಶದಲ್ಲಿ ಕೇಂದ್ರ ಸರಕಾರದ ಬಗ್ಗೆ ಮಾಡುವುದು ದುರದೃಷ್ಟಕರ.

ಹಾರಂಗಿ ಮತ್ತು ಹೇಮಾವತಿ ಆಣೆಕಟ್ಟುಗಳನ್ನು ಕ್ಲಿಯರೆನ್ಸ್ ಇಲ್ಲದೆ ಕಟ್ಟುತ್ತಿದ್ದಾರೆ ಎಂಬ ಅಪವಾದ ಬಂದಿದೆ, ಅದಕ್ಕಾಗಿ ಹಣ ಸಹಾಯ ನೀಡುವುದಿಲ್ಲ ಎಂದೇ ಹೇಳಿದ್ದಾರೆ. ಆದರ ಬಗ್ಗೆ ಹೇಳುವುದು ಹೇಮಾವತಿ ಪ್ರಾಜೆಕ್ಟ್ ಕ್ಲಿಯರೆನ್ಸ್ ಸಲುವಾಗಿ ೧೯ನೇ ಜನವರಿ ೧೯೬೧ರಲ್ಲಿ ಸಿಡಬ್ಲ್ಯೂಪಿಸಿಗೆ ಕಳಿಸಿದೆವು, ಅದನ್ನೇ ಮಾಡಿಫೈ ಮಾಡಬೇಕೆಂದು ಹೇಳಿದರು, ನಮ್ಮ ಇಂಜಿನಿಯರುಗಳಿಗೆ ಹೇಳಿ ಮಾಡಿಫೈ ಪ್ರಾಜೆಕ್ಟನ್ನು ಏಪ್ರಿಲ್ ೧೯೬೫ರಲ್ಲಿ ಕಳಿಸಿದೆವು ಮತ್ತು ಮಾಡಿಫೈ ಹಾರಂಗಿ ಪ್ರಾಜೆಕ್ಟನ್ನು ಮಾರ್ಚ್ ೧೯೬೫ರಲ್ಲಿ ಕಳಿಸಿದೆವು, ವಿಚಾರ ಮಾಡಿ, ೬೧ರ ಲೆಕ್ಕದ ಪ್ರಕಾರ ಹತ್ತು ವರ್ಷವಾಗಿದೆ.

೧೯೬೫ರ ಲೆಕ್ಕ ಹಿಡಿದರೆ ಸುಮಾರು ೫ ವರ್ಷವಾಯಿತು. ೧೯೨೪ ರಿಂದ ೧೯೪೭ರವರೆಗೂ ನೀರನ್ನು ಉಪಯೋಗ ಮಾಡುವಂಥ ಯಾವ ಪ್ರಯತ್ನಗಳೂ ಆಗಿಲ್ಲವೆಂದು ಮಾನ್ಯ ಸದಸ್ಯರೆಲ್ಲರಿಗೂ ಗೊತ್ತಿದೆ. ೧೯೪೭ರಿಂದ ೧೯೫೬ರವರೆಗೂ ನೀರನ್ನು ಉಪಯೋಗ ಮಾಡುವಂಥ ಯಾವ ಪ್ರಯತ್ನಗಳೂ ಆಗಲಿಲ್ಲ. ೧೯೫೬ರಿಂದೀಚೆಗೆ ಪ್ರಯತ್ನಗಳು ಆಗುತ್ತಿದ್ದರೂ, ಕ್ಲಿಯರೆನ್ಸ್ ಇಲ್ಲವೆನ್ನುವ ಪರಿಸ್ಥಿತಿ ಇದೆ. ಯಾವುದೇ ಒಂದು ರಾಜ್ಯದಲ್ಲಿ ನಾವೇನಾದರೂ ಪ್ರತಿನಿಧಿಗಳಿದ್ದರೆ, ರಾಜ್ಯದ ಜನರ ಹಿತರಕ್ಷಣೆ ಮಾಡುವುದಕ್ಕೆ ಇದ್ದೇವೆ. ಯಾರೋ ಹೇಳುತ್ತಾರೆ, ಅದರಂತೆ ನಡೆದುಕೊಳ್ಳಬೇಕು ಮತ್ತು ಡಿಸಿಪ್ಲಿನ್ಡ್ ಸೋಲ್ಜರ್ಸ್ ಆಗಿ ಅವರು ಏನು ಹೇಳುತ್ತಾರೆ, ಏನು ಗೆರೆ ಹಾಕುತ್ತಾರೆ ಅದರ ಮೇಲೆ ನಡೆಯತಕ್ಕುದು ಎನ್ನುವುದಕ್ಕೆ ಪ್ರತಿನಿಧಿಗಳಾಗಿ ಇಲ್ಲಿಗೆ ಬಂದಿಲ್ಲ. ಮೈಸೂರು ರಾಜ್ಯವಾಗಲೀ, ಮೈಸೂರು ಸರ್ಕಾರವೇ ಆಗಲೀ, ಮೈಸೂರು ಜನತೆಯೇ ಆಗಲೀ ಒಂದು ಪ್ರಾಜೆಕ್ಟ್ ಕಳುಹಿಸಿ ಎಷ್ಟು ದಿವಸ ಕ್ಲಿಯರೆನ್ಸ್ ಸಲುವಾಗಿ ಕಾಯಬೇಕು ಎಂದು ಕೇಳುತ್ತೇನೆ. ಐದು ವರ್ಷ ಕಾದದ್ದು ಸಾಕಿಲ್ಲ, ೧೦ ವರ್ಷ ಕಾದದ್ದು ಸಾಕಿಲ್ಲ? ಕ್ಲಿಯರೆನ್ಸ್, ಕ್ಲಿಯರೆನ್ಸ್ ಎಂದು ಜಪ ಮಾಡಿಕೊಂಡು ಕುಳಿತರೆ ಬಹುಶಃ ನಾವು ನಮ್ಮ ದೇಶದ ಜನತೆಯ ಹಿತರಕ್ಷಣೆ ಮಾಡುವುದಕ್ಕೆ ಸಾಧ್ಯವಾಗಲಾರದೆ ಇರುತ್ತದೆ. ಅದಕ್ಕಾಗಿ ನಾವು ಮುಂದೆ ಹೋಗಿದ್ದೇವೆ. ನಾನು ಅನೇಕ ಸಲ ಈ ಮಾನ್ಯ ಸಭೆಯಲ್ಲಿ ಹೇಳಿದ್ದೇನೆ, Clearance or no clearance I have determined to go ahead with these projects. ಒಂದು ಹೆಜ್ಜೆಯೂ ಹಿಂದೆ ಸರಿಯುವುದಕ್ಕೆ ತಯಾರಿಲ್ಲ ಎಂದು ನಾನು ಹೇಳಿದ್ದೇನೆ, ಆ ರೀತಿ ಮಾಡುತ್ತಿದ್ದೇನೆ. ಬಹುಶಃ ತಮ್ಮ ಸರ್ಕಾರವಿದ್ದರೆ, ದೇವರ ದಯೆ ಇದ್ದರೆ ಎರಡು ವರ್ಷದೊಳಗೆ ಹೇಮಾವತಿಯಲ್ಲಿ ನೀರು ನಿಲ್ಲುತ್ತದೆ, ಎರಡು ವರ್ಷದಲ್ಲಿ ಕಬಿನಿಯಲ್ಲಿ ನೀರು ನಿಲ್ಲುತ್ತದೆ ಎನ್ನುವ ವಿಶ್ವಾಸವಿದೆ. ಆ ಕಾರ್ಯಕ್ರಮವನ್ನು ನಾನು ಮಾಡಿಕೊಂಡಿದ್ದೇನೆ. ಅದಕ್ಕಾಗಿ ನಮಗೆ ಕ್ಲಿಯರೆನ್ಸ್ ಕೊಟ್ಟಿಲ್ಲ, ಆದರ ಸಲುವಾಗಿ ನಾವು ಏನೂ ಮಾಡಬಾರದಾಗಿತ್ತು, ಮಾಡುವವರಿದ್ದರೆ ತಪ್ಪಿತಸ್ಥರಿದ್ದೇವೆ ಎಂದು ಹೇಳುವುದು ನನಗನ್ನಿಸುತ್ತದೆ, ಕೇಂದ್ರ ಸರ್ಕಾರದವರಿಗೆ ಭೂಷಣವಲ್ಲ ಎಂದು. ಈ ರೀತಿ ಹೇಳುವಾಗ ಹತ್ತು ವರ್ಷಗಳ ವರೆಗೆ ಏಕೆ ಕ್ಲಿಯರೆನ್ಸ್ ಕೊಡಲಾರದೆ ಕಳಿತಿರಿ, ಏಕೆ ಕ್ಲಿಯರೆನ್ಸ್, ನಿಮ್ಮಲ್ಲಿ ಕಟ್ಟಿ ಇಟು ಕೊಂಡಿದ್ದೀರಿ, ಏಕೆ, ಕ್ಲಿಯರೆನ್ಸ್ ಕೊಡುವುದಕ್ಕೆ ತಯಾರಿಲ್ಲ ಎಂದು ಕೇಳುತ್ತೇನೆ. ೫ನೇ ಟಿ.ಎಂ.ಸಿ. ಒಳಗೆ ಕಟ್ಟತಕ್ಕ ಪ್ರಾಜೆಕ್ಟ್‌ಗಳಿಗೆ

(ಶ್ರೀ ವೀರೇಂದ್ರ ಪಾಟೀಲ್)

ಕ್ಲಿಯರೆನ್ಸ್ ಕೊಡಬೇಕಾಗಿದೆ. ಒಂದು ವೇಳೆ ಕಷ್ಟವಿದ್ದರೆ ಅದನ್ನು ಹೇಳಬಹುದು. ನಾನು ಅನೇಕ ಸಲ ನೋಡಿದ್ದೇನೆ, ಸಬ್‌ಜೆಕ್ಟ್ ಟು ಸೊ ಮೆನಿ ಕಂಡೀಷನ್ಸ್ ಎಂದು ಹಾಕಿ ಕ್ಲಿಯರೆನ್ಸ್ ಕೊಟ್ಟ ಸಂದರ್ಭಗಳಿವೆ. ಮದ್ರಾಸ್‌ನವರು ಕೇಳಿದರೆ ಕೊಟ್ಟಿಲ್ಲವೋ, ಮಹಾರಾಷ್ಟ್ರದವರು ಕೇಳಿದರೆ ಕೊಟ್ಟಿಲ್ಲವೋ? ಕಾವೇರಿ ಬೇಸಿನ್‌ನಲ್ಲಿ ಮೊದಲನೆಯ ಸಲ ಸೀರಿಯಸ್ಸಾಗಿ ಪ್ರಯತ್ನ ನಡೆಯುತ್ತಿದೆ. ಹತ್ತು ವರ್ಷವಾದರೂ ಕ್ಲಿಯರೆನ್ಸ್ ಕೊಟ್ಟಿಲ್ಲ. ಮೈಸೂರಿನವರು ತಪ್ಪು ಮಾಡುತ್ತಿದ್ದಾರೆ, ಅವರ ಪ್ರಾಜೆಕ್ಟ್‌ಗಳಿಗೆ ಹಣ ಕೊಡುವುದಿಲ್ಲ ಎಂದು ಕೇಂದ್ರ ಸರ್ಕಾರ ಹೇಳಿಬಿಟ್ಟರೆ ಅದು ಬಹಳ ದುರದೃಷ್ಟಕರ ಮತ್ತು ಕೇಂದ್ರ ಸರ್ಕಾರಕ್ಕೆ ಭೂಷಣ ತರುವಂಥ ವಿಚಾರವಲ್ಲ ಎನ್ನುವ ಮಾತನ್ನು ಬಹಳ ವಿನಯಪೂರ್ವಕವಾಗಿ ನಾನು ಹೇಳಬೇಕಾಗಿದೆ.

ಒಂದು ವಿಚಾರ ಕಬಿನಿ ಬಗ್ಗೆ ಹೇಳಿದ್ದಾರೆ. ಅದರ ಬಗ್ಗೆ ನಾವು ಏನು ತಪ್ಪು ಮಾಡಿದ್ದೇವೆಂದರೆ ಕೇರಳದ ೨೫೦ ಎಕರೆ ಮುಳುಗಡೆ ಮಾಡುತ್ತಿದ್ದೇವೆ. ಕಬಿನಿ ಪ್ರಾಜೆಕ್ಟ್‌ನಲ್ಲಿ ಸ್ಟೋರೇಜ್ ಆಗಬೇಕಾದು ೧೯ ಟಿ.ಎಂ.ಸಿ. ನೀರು. ಅದಕ್ಕೆ ಅಗ್ರಿಮೆಂಟ್ ಇದೆ. ಅದು ಬೈಂಡಿಂಗ್ ಎಂದು ಲೆಕ್ಕ ಹಾಕಿಕೊಂಡರೆ ನಮಗೆ ೧೯ ಟಿ.ಎಂ.ಸಿ. ನೀರನ್ನು ಸ್ಟೋರೇಜ್ ಮಾಡುವ್ಯಧಿಕಾರವಿದೆ. ಫುಲ್ ಲೆವೆಲ್‌ಗೆ ಬಂದರೆ ಇಷ್ಟು ನೀರು ಶೇಖರವಾಗುತ್ತದೆ. ಆ ರೀತಿ ಪೂರ್ಣ ಮಟ್ಟಕ್ಕೆ ಬಂದಾಗ ಕೇರಳದ ಅರಣ್ಯ ಪ್ರದೇಶದಲ್ಲಿ ೨೫೦ ಎಕರೆ ಹೋಗುತ್ತದೆ. ಸಾವಿರಾರು ಎಕರೆಗಳು ಹೋಗುವುದಿಲ್ಲ, ಒಂದು ವೇಳೆ ಕೇರಳದವರು ೨೫೦ ಎಕರೆ ಅರಣ್ಯ ಪ್ರದೇಶ ಮುಳುಗಡೆಯಾಗುವುದಕ್ಕೆ ಒಪ್ಪದೆ ಹೋದರೆ, ಸ್ವಲ್ಪ ರಿಸರ್ವಾಯರ್ ಮಟ್ಟವನ್ನು ಕೆಳಕ್ಕೆ ಇಳಿಸಿದರೆ ೨೫೦ ಎಕರೆ ಮುಳುಗಡೆಯಾಗುವುದನ್ನು ತಪ್ಪಿಸಬಹುದು. ಕೇರಳ ಸರ್ಕಾರದ ಜೊತೆಯಲ್ಲಿ ಈ ವಿಚಾರವನ್ನು ತೆಗೆದುಕೊಂಡಿದ್ದೇವೆ. ಎಷ್ಟು ಜಮೀನು ಮುಳುಗಡೆಯಾಗುತ್ತದೆ ಎನ್ನುವುದರ ಬಗ್ಗೆ ಪಾಯಿಂಟ್ ಸರ್ವೆ ಕೆಲಸ ನಮ್ಮ ಮತ್ತು ಕೇರಳ ರಾಜ್ಯದಿಂದ ನಡೆಯುತ್ತಿದೆ. ಮುಳುಗಡೆಯಾಗುವುದಿದ್ದರೆ ಏನು ಕಾಂಪೆನ್‌ಸೇಷ್ ಕೊಡಬೇಕು, ಯಾವ ಪ್ರದೇಶ ಮುಳುಗಡೆಯಾಗುತ್ತದೆ ಎನ್ನುವುದನ್ನು ನೋಡುತ್ತ ಇದ್ದೇವೆ. ಕೇರಳದ ಜಮೀನು ಈ ಹೊತ್ತು ಮುಳುಗಡೆಯಾಗುವುದಿಲ್ಲ. ಫುಲ್ ಲೆವೆಲ್‌ಗೆ ಎಂದರೆ ೧೯ ಟಿ.ಎಂ.ಸಿ. ಸ್ಟೋರೇಜಿಗೆ ನೀರು ಬಂದಾಗ ಮಾತ್ರ ೨೫೦ ಎಕರೆಯಷ್ಟು ಜಮೀನು ಮುಳುಗಡೆಯಾಗುತ್ತದೆ. ಕೇರಳದ ಪ್ರದೇಶವನ್ನು ಮುಳುಗಡೆ ಮಾಡುತ್ತಿದ್ದೇವೆ ಎಂದು ಯಾರಾದರೂ ಹೇಳಿದರೆ ಅದು ಅಷ್ಟೊಂದು ಸರಿಯಲ್ಲ ಎಂದು ನನಗನ್ನಿಸುತ್ತದೆ.

ಈ ಪ್ರಾಜೆಕ್ಟ್‌ಗಳಿಗೆ ಏನೂ ಅಸಿಸ್ಟೆನ್ಸ್ ಇಲ್ಲ ಎನ್ನುವಂಥ ಮಾತನ್ನು ಹೇಳಿದ್ದಾರೆ. ಪ್ಲಾನ್‌ನಲ್ಲಿ ನಮಗೆ ಅಸಿಸ್ಟೆನ್ಸ್ ಸಿಕ್ಕುತ್ತದೆ. ಕೇಂದ್ರ ಸರ್ಕಾರದವರು ನಾಲ್ಕನೆಯ ಯೋಜನೆಯಲ್ಲಿ ನಮಗೆ ಬಹಳ ಮಟ್ಟಿಗೆ ಸಹಾಯ ಮಾಡುತ್ತಾರೆ ಎನ್ನುವ ನಂಬಿಕೆಯನ್ನು ಇಟ್ಟುಕೊಂಡಿದ್ದೇವೆ. ಅದರ ಬಗ್ಗೆ ನಾನು ಕೇಂದ್ರ ಸರ್ಕಾರಕ್ಕೆ ಅಭಿನಂದಿಸಬೇಕಾಗುಗುತ್ತದೆ ಮತ್ತು ಪ್ರಧಾನ ಮಂತ್ರಿಯವರಿಗೆ ವೈಯಕ್ತಿಕವಾಗಿ ಅಭಿನಂದಿಸಬೇಕಾಗುತ್ತದೆ. ಫೈನಾನ್ಸ್ ಕಮಿಷ್ಷ ಅವಾರ್ಡ್ ಬಂದಮೇಲೆ ನಮಗೆ ಬಹಳ ಅನ್ಯಾಯವಾಗಿದೆ, ಒಂದು ವೇಳೆ ಸಹಾಯ ಮಾಡಲಾರದೆ ಹೋದರೆ ನಮಗೆ ಪ್ಲಾನ್ ಇಲ್ಲ ಎನ್ನುವಂಥ ವಿಚಾರವನ್ನು ಪ್ರಧಾನಿಯವರಿಗೆ ಮನವರಿಕೆ ಮಾಡಿಕೊಟ್ಟಮೇಲೆ ಸಹಾಯ ಮಾಡುವುದಕ್ಕೆ ಪ್ರಯತ್ನ ಮಾಡಿದ್ದಾರೆ. ಅದರ ಬಗ್ಗೆ ನಾನು ಅವರನ್ನು ಅಭಿನಂದಿಸುತ್ತೇನೆ. ಪ್ಲಾನ್‌ನಲ್ಲಿ ಬರುವಂಥ ದುಡ್ಡು ೧೦೦ ಪರ್ಸೆಂಟ್ ಗ್ರಾಂಟಲ್ಲ. ಇದರಲ್ಲಿ ೩೦ ಪರ್ಸೆಂಟ್ ಗ್ರಾಂಟ್, ೭೦ ಪರ್ಸೆಂಟ್ ಸಾಲ. ಅದನ್ನು ಬಡ್ಡಿ ಸಮೇತ ತೀರಿಸಬೇಕಾಗುತ್ತದೆ. ಈ ಹೊತ್ತು ಅಸಿಸ್ಟೆನ್ಸ್ ಸಿಕ್ಕಿಸುತ್ತೇವೆ ಎನ್ನುವಂಥ ಮಾತನ್ನು ಹೇಳಿದ್ದಾರೆ. ಆದರೆ ಹಾರಂಗಿ, ಹೇಮಾವತಿ, ಕಬಿನಿ, ಯೋಜನೆಗಳು ನನಗೆ ಗೊತ್ತಿದ್ದ ಹಾಗೆ ಯಾವುದೇ ಇರಲಿ ಆವುಗಳಿಗೆ ಕೇಂದ್ರದ ನೆರವು ಯಾವುದೂ ಇಲ್ಲ ಎನ್ನುವುದನ್ನು ಸ್ಪಷ್ಟವಾಗಿ ಹೇಳುತ್ತಿದ್ದೇನೆ. ಕಾವೇರಿ ಬೇಸಿನ್‌ನಲ್ಲಿ ಏನು ಪ್ರಾಜೆಕ್ಟ್‌ಗಳನ್ನು ಮಾಡುತ್ತಿದ್ದೇವೆ, ಆವುಗಳನ್ನು ಸಮ್ಮ ಸಂಪನ್ಮೂಲಗಳಿಂದ ಕಟ್ಟುತ್ತಿದೇವೆಯೇ ಹೊರತು ಕೇಂದ್ರ ಸರ್ಕಾರದ ಸಹಾಯದಿಂದ, ಪ್ಲಾನಿಂಗ್ ಕಮಿಷ್ಷ ಸಹಾಯ ಪಡೆದುಕೊಂಡು ಕಟ್ಟುತ್ತಿಲ್ಲ. ಆವರು ಹೀಗೆ ಹೇಳಬೇಕಾದ ಆವಶ್ಯಕತೆಯೇ ಇರಲಿಲ್ಲ. ಪ್ಲಾನಿಂಗ್ ಕಮಿಷ್ಷ ಆಪ್ರೂವ್ ಮಾಡಲಾರದ ಪ್ರಾಜೆಕ್ಟ್‌ಗಳಿಗೆ ಸಹಾಯ ಕೊಡುವ ಹಾಗೆಯೇ ಇಲ್ಲ. ಪ್ರತಿ ವರ್ಷ ಆನ್ಯುಯಲ್ ಪ್ಲಾನ್‌ನಲ್ಲಿ ಹಣ ಕೊಡುತ್ತಾರೆ, ಈ ಪ್ಲಾನ್‌ನಲ್ಲಿ ಈ ವರ್ಷ ಈ ಪ್ರಾಜೆಕ್ಟ್‌ಗಳಿಗೆ ಇಷ್ಟಿಷ್ಟು ದುಡ್ಡು ಖರ್ಚು ಮಾಡಬೇಕು ಎಂದು ಆವರೇ ನಿಗದಿ ಮಾಡುತ್ತಾರೆ. ಮಾನ್ಯ ಸದಸ್ಯರಿಗೆ ಗೊತ್ತಿದೆ, ಅನೇಕ ಸಲ ನಮಗೆ ದುಡ್ಡು ಸಾಲದಂಥ ಪರಿಸ್ಥಿತಿ ಬಂದಾಗ ಗೋಡೆಗೆ ಸುಣ್ಣ ಹಚ್ಚುವುದನ್ನು ಬಿಡುತ್ತೇವೆ, ಔಷಧಿ ಕೊಳ್ಳುವುದನ್ನು ಕಡಮೆ ಮಾಡುತ್ತೇವೆ, ಆದೇ ರೀತಿಯಲ್ಲಿ ಬೇರೆ ಬೇರೆ ಬಾಬುಗಳಲ್ಲಿ ಖೋತಾ ಮಾಡಿ ಅಭಿವೃದ್ಧಿ ಕಾರ್ಯಗಳಿಗೆ ಖರ್ಚು ಮಾಡುತ್ತಿದ್ದೇವೆ; ಈ ತೆರಹಿ ಪ್ರಾಜೆಕ್ಟ್‌ಗಳಿಗೆ ಹಾಕುತ್ತೇವೆ. ಈ ಹೊತ್ತು ಈ ಪ್ರಾಜೆಕ್ಟ್‌ಗಳನ್ನು ನಮ್ಮ ಶಕ್ತಿ ಮೀರಿ ಕಟ್ಟುತ್ತಿದ್ದೇವೆ. ಕೇಂದ್ರದವರು ಈ ಪ್ರಾಜೆಕ್ಟ್‌ಗಳಿಗೆ ಏನೂ ಕೊಡುತ್ತಿಲ್ಲ, ಆವರು ಕೊಡುತ್ತಿರುವ ದುಡ್ಡಿನಿಂದ ಇವನ್ನು ಕಟ್ಟುತ್ತಿಲ್ಲ ಎನ್ನುವ ಮಾತನ್ನು ಸ್ಪಷ್ಟವಾಗಿ ಹೇಳಬೇಕಾಗಿದೆ.

ಕೊನೆಯದಾಗಿ ಕೇಂದ್ರ ಸರ್ಕಾರ ನ್ಯಾಯ ಮಾಡಬೇಕು ಮತ್ತು ನ್ಯಾಯ ಮಾಡುತ್ತಾರೆಂಬ ಭರವಸೆ ಇದೆ. ನ್ಯಾಯ ಮಾಡಲಾರದೆ ಹೋದರೆ ಬಹಳ ಕಷ್ಟವಾಗುತ್ತದೆ ಮತ್ತು ನಾವೆಲ್ಲರೂ ಅವರಿಗೆ ಸಮಾನರು. ಇಲ್ಲಿಯವರೆಗೂ ಇವುಗಳಿಗೆ ಪ್ಲಾನಿಂಗ್ ಕಮಿಷನ್‌ನಿಂದ ದುಡ್ಡು ಸಿಕ್ಕಿಲ್ಲ ಎಂದು ತಮ್ಮ ಮುಖಾಂತರ ಕೇಂದ್ರ ಸರ್ಕಾರಕ್ಕೆ ಬಹಳ ಕಳಕಳಿಯಿಂದ ವಿನಂತಿ ಮಾಡಿಕೊಳ್ಳುತ್ತೇನೆ. ಕಾವೇರಿ ಬೇಸಿನಲ್ಲಿರುವಂಥ ಜನರ ಸ್ಥಿತಿಗತಿಯನ್ನು ಅವರು ಅರಿತುಕೊಂಡು ಮತ್ತು ನಮ್ಮ ರಾಜ್ಯದಲ್ಲಿರುವ ಇರಿಗೇಷ್ ಪ್ರದೇಶ ಎಷ್ಟು ಕಡಮೆ ಇದೆ ಎನ್ನುವುದನ್ನು ತಿಳಿದುಕೊಂಡು, ನಮಗೆ ಕಾವೇರಿ ಬೇಸಿನಲ್ಲಿ ಇರುವಂಥ ಪ್ರಾಜೆಕ್ಟ್‌ಗಳಿಗೆ ಹೆಚ್ಚು ಮಟ್ಟಿಗೆ ಸಹಾಯ ಮಾಡುವುದಕ್ಕೆ ಪ್ಲಾನಿಂಗ್ ಕಮಿಷನ್ ಮತ್ತು ಕೇಂದ್ರ ಸರ್ಕಾರದವರು ಮುಂದೆ ಬರುತ್ತಾರೆ ಎಂದು ನಾನು ಒಂದು ಆಸೆ ಇಟ್ಟುಕೊಂಡಿದ್ದೇನೆ ಮತ್ತು ಈ ಮಧ್ಯದಲ್ಲಿ ಅವರು ಸಹಾಯವನ್ನು ನಿಲ್ಲಿಸುತ್ತಾರೆಂದು ತಕ್ಷಣ ನಾನು ಪ್ರಾಜೆಕ್ಟ್‌ಗಳನ್ನು ನಿಲ್ಲಿಸುವುದಕ್ಕೆ ಸಾಧ್ಯವಿಲ್ಲ. ಈ ಪ್ರಾಜೆಕ್ಟ್‌ಗಳು ಮುಂದುವರಿಯುತ್ತವೆ. ಈ ಪ್ರಾಜೆಕ್ಟ್‌ಗಳನ್ನು ಮುಗಿಸುತ್ತೇನೆ ಮತ್ತು ಕೇಂದ್ರ ಸರ್ಕಾರದವರು ಸಹಾಯಕ್ಕೆ ಬಂದರೆ ಒಳ್ಳೆಯ ಕೀರ್ತಿ ಒಳ್ಳೆಯ ಹೆಸರು ಕೇಂದ್ರ ಸರ್ಕಾರಕ್ಕೆ ಬರುತ್ತದೆ. ಅವರು ತಮ್ಮ ಅಭಿಪ್ರಾಯವನ್ನು ಬದಲಾಯಿಸಿ ನಮಗೆ ಸಹಾಯ ಮಾಡಬೇಕು ಎಂದು ಈ ಸಂದರ್ಭದಲ್ಲಿ ನಾನು ಕೇಂದ್ರ ಸರ್ಕಾರಕ್ಕೆ ಬಹಳ ಕಳಕಳಿಯಿಂದ ವಿನಂತಿ ಮಾಡಿಕೊಂಡು ಮತ್ತೊಮ್ಮೆ ಸ್ಪಷ್ಟವಾಗಿ ನನ್ನ ಸಲುಮೆಯನ್ನು ಹೇಳುತ್ತೇನೆ, ಯಾವ ಪ್ರಾಜೆಕ್ಟ್‌ಗಳನ್ನು ಕಾವೇರಿ ಬೇಸಿನಲ್ಲಿ ಪ್ರಾರಂಭ ಮಾಡಿದ್ದೇನೆ ಅವುಗಳನ್ನು ಯಾವ ಕಾರಣಕ್ಕೂ ನಿಲ್ಲಿಸುವಂಥ ಪ್ರಶ್ನೆ ಉದ್ಭವವಾಗುವುದಿಲ್ಲ. ನಾನು ನಿಲ್ಲಿಸುವುದಕ್ಕೆ ತಯಾರಿಲ್ಲ ಎನ್ನುವಂಥ ಮಾತನ್ನು ಸ್ಪಷ್ಟವಾಗಿ ಹೇಳಿ ನನ್ನ ನಾಲ್ಕು ಮಾತನ್ನು ಮುಗಿಸುತ್ತೇನೆ.

Mr. SPEAKER :—The House will now rise and meet again at 1 P M.

[*The House adjourned at fifty Minutes past Eleven of the Clock and reas embled at One of the Clock*].

[Mr. DEPUTY SPEAKER (SRI D. MANJUNATH) in the Chair]

STARRED QUESTIONS

(To Which Oral Answers Were Given)

DIFFICULTIES FACED BY THE RYOTS DUE TO INSTALLATION OF PUMPSETS IN V.C. AREA

(81) SRI B. DODDABORE GOWDA (Srirangapatna) :—Will the Chief Minister be pleased to state :—

(*a*) the number of pumpsets installed to either main channel or channels of Vishweshwaraiah Nala ;

(*b*) the number of pumpsets lifting water from the wells to which water is supplied from the Canal ;

(*c*) the facilities provided to the tail enders of rural area who are facing difficulties due to this ;

(*d*) the action taken by P.W.D. in this regard ;

(*e*) the stand taken by the Government about the policy of the Electricity Board that on no account the power supplied could be disconnected ;

(*f*) the steps taken so far about the misuse of canal water ?

A. SRI D. PARAMESHWARAPPA (*Deputy Minister for minor Irrigation and Electricity*) [On behalf of SRI VEERENDRA PATIL (Chief Minister) :—

(*a*) 18.

(*b*) 236.

(*c*) The department is supplying water to the tail end of achkut.

(*d*) The department has taken action by following the provisions of Mysore Irrigation Act.

(*e*) Power supply may be disconnected on account of the following reasons;

(i) Non-payment of arrears to the Department.

(ii) Use of electricity so as to cause obstruction to other works.

(iii) In case the power factor is reduced to less than 0.75.

(iv) On breach of conditions of Agreement.

(*f*) The Revenue and Police Department have been asked to take steps in accordance with the provisions of the Mysore Irrigation Act.

ಶ್ರೀ ಬಿ. ದೊಡ್ಡಬೋರೇಗೌಡ :—ಐಪಿ ಸೆಟ್ಟುಗಳಿಗೆ ಪವರ್ ಒದಗಿಸಿದ ಮೇಲೆ ಅಗ್ರೀಮೆಂಟ್ ಆದ ಪ್ರಕಾರ ಐದು ವರ್ಷ ಅವಧಿ ಪೂರೈಸುವವರೆಗೆ ಯಾವ ಕಾರಣದಿಂದಲೂ ವಾಪಸ್ಸು ತೆಗೆದುಕೊಳ್ಳಲು ಆಗುವುದಿಲ್ಲ ಇದರ ಬಗೆ ತಮ್ಮ ಅಭಿಪ್ರಾಯವೇನು ?

ಶ್ರೀ ಡಿ. ಪರಮೇಶ್ವರಪ್ಪ :—ಅಗ್ರೀಮೆಂಟ್ ವಿರಿಯಡ್ಸ್ ಇರುತ್ತದೆ ಅಲ್ಲಿಯವರೆಗೆ unless the Conditions of the agreement are violated they cannot take action.

ಶ್ರೀ ಬಿ. ದೊಡ್ಡಬೋರೇಗೌಡ ;—ಈ ೨೫೪ ಐಪಿ ಸೆಟ್ಸ್ ಬಗ್ಗೆ ಎಷ್ಟು ಕೇಸು ಪಾಕಿದ್ದೀರಿ ?

ಶ್ರೀ ಡಿ. ಪರಮೇಶ್ವರಪ್ಪ :—೨೦೧ ಐಪಿ ಸೆಟ್ಸ್ ಬಗ್ಗೆ ಆಕ್ಷನ್ ತೆಗೆದುಕೊಂಡಿದೆ.

ಶ್ರೀ ಬಿ. ದೊಡ್ಡಬೋರೇಗೌಡ :—ನಾನು ಕಾಲುವೆಯ ಕೊನೆಯ ಆಂಚಿನಲ್ಲಿ ಇದ್ದೇನೆ. ವಾರದಲ್ಲಿ ಒಂದು ದಿವಸ ಕೂಡ ನೀರು ಬರುವುದಿಲ್ಲ . ಕೆ.ಆರ್. ಸಾಗರದಲ್ಲಿ ೩೪೦ ಕ್ಯುಸೆಕ್ಸ್ ನೀರು ಕಡಿಮೆಯಾಗಿದೆ ಎನ್ನುವುದಕ್ಕೆ ನಿಮ್ಮ ಅಭಿಪ್ರಾಯವೇನು ?

ಶ್ರೀ ಡಿ. ಪರಮೇಶ್ವರಪ್ಪ :—೩೪೦ ಕ್ಯುಸೆಕ್ಸ್‌ನ ನೀರು ಅನ್‌ಆಥರೈಜ್ಡ್ ಆಗಿ ಡ್ರಾ ಮಾಡುತ್ತಾರೆ. ಒಟ್ಟು ೧೦೧೨ ಎಕರೆಗೆ ನೀರು ಡ್ರಾ ಮಾಡಬೇಕು ಇದು ೩೦ ಕ್ಯುಸೆಕ್ಸ್ ಆಗುತ್ತದೆ.

ಶ್ರೀ ಎನ್. ಹುಚ ಮಾಸ್ತಿಗೌಡ :—ಎಷ್ಟು ವರ್ಷವಾಯಿತು? ಇಲಾಖೆಯ ಅಧಿಕಾರಿಗಳಿಂದ ರೈತರಿಗೆ ತೊಂದರೆಯಾಗುತ್ತಿದೆ ಎಂದು ಸರಕಾರದ ಗಮನಕ್ಕೆ ತಂದು ಕ್ರಮ ತೆಗೆದುಕೊಳ್ಳಲು ಪ್ರಾರಂಭ ಮಾಡಿದ್ದು ಯಾವಾಗ ?

ಶ್ರೀ ಡಿ. ಪರಮೇಶ್ವರಪ್ಪ :—ಅನ್-ಆಥರೈಜ್ಡ್ ಇರಿಗೇಷನ್ ಆರೇಳು ವರ್ಷದಿಂದ ನಡೆಯುತ್ತಾ ಇದೆ. ಕಂಪ್ಲೇಟ್ಸ್ ಬಂದಾಗ್ಗೆ ಕ್ರಮ ತೆಗೆದುಕೊಳ್ಳುತ್ತೇವೆ. We have taken drastic action against these I.P. pumpset holders.

ಶ್ರೀ ಬಿ. ದೊಡ್ಡಬೋರೇಗೌಡ :—ಸ್ವಾಮಿ, ವಿಧಿಗಳಿ ಐಪಿ ಸೆಟ್ಸು ಇಟ್ಟುಕೊಂಡಿರುವವರು ಪ್ರಭಾವಶಾಲಿ ವ್ಯಕ್ತಿಗಳು ಎನ್ನುವುದು ಗಮನಕ್ಕೆ ಬಂದಿದೆಯೇ ? ಸಾಮಾನ್ಯವಾಗಿ ಒಂದು ಎಕರೆ ಜಮೀನು ಇರುವ ರೈತ ಬಾವಿಗೆ ಕೊಡಿ ಎಂದರೆ ಕೊಡದೇ ಇರತಕ್ಕಂಥಾದ್ದಕ್ಕೆ ಕಾರಣ ಏನು ?

SRI D. PARAMESWARAPPA :—I am not aware that these pumpset holders have political influence. But the fact remains that there are unauthorised pumpset holders using water from the main canal. We have been taking proper action to remove them.

ENCADERING PERSONNEL FOR I.A.S. FROM MYSORE STATE

(142) SRI M. H. JAYAPRAKASH NARAYAN (Sirsi):—Will the Chief Minister be pleased to state :—

(*a*) Whether any recommendations for encadering personnel for IAS from Mysore State are made to Government of India during this year.

(*b*) Whether the claims of all senior officers of all departments have been duly considered ;

(*c*) how does it compare with other States in India ;

(*d*) whether it is the policy of the Government to give opportunity to Senior Officers particularly to the defence service personnel and Scheduled Castes and Tribes ?

SRI VEERENDRA PATIL (Chief Minister):—

(*a*) Yes.

(*b*) The claims of all substantive members of State Civil Services who fulfil conditions laid down in the Indian Administrative Service (Appointment by Promotion) Regulations, 1955 are considered. For the purpose of these rules Mysore Administrative Service is taken as "State Civil Service" Accordingly the claims of M.A.S. Officers fulfilling the conditions are considered for appointment against promotional vacancies in the I.A.S. Cadre. Under the provisions of the Indian Administrative Service (Appointment by Selection) Regulations, 1956, officers of outstanding merit and ability not belonging to State Civil Service but serving in connection with the affairs of the State are also considered.

(*c*) Information is not avaiable.

(*d*) The I.A.S. (Appointment by Promotion) Regulations do not provide for reservation of posts/vacancies in favour of Scheduled Caste, Scheduled Tribes or Defence Personnel.

SRI M. H. JAYAPRKASH :—May I know how many M.A.S. Officers of Scheduled Caste and Scheduled Tribes are recommended for I.A S. during the year ?

ಶ್ರೀ ವೀರೇಂದ್ರ ಪಾಟೀಲ್ ;—ರೆಕಮೆಂಡ್ ಮಾಡುವ ಪ್ರಶ್ನೆ ಬರುವುದಿಲ್ಲ. ಇದಕ್ಕೆ ಒಂದು ಕಮಿಟಿ ಇರುತ್ತದೆ. ಯೂನಿಯನ್ ಪಬ್ಲಿಕ್ ಸರ್ವಿಸ್ ಕಮಿಷನ್ನಿನ ಚೇರಮನ್ನರು ಈ ಕಮೀಟಿಯ ಚೇರಮನ್ ಆಗಿರುತ್ತಾರೆ. ಗವರ್ನಮೆಂಟ್ ಆಫ್ ಇಂಡಿಯಾದ ಆಫೀಸರರು ಮೆಂಬರರಾಗಿರುತ್ತಾರೆ. ನಮ್ಮವರು ಕೆಲವರು ಮೆಂಬರರಾಗಿರುತ್ತಾರೆ. ಅವರು ಇಲ್ಲಿಗೆ ಬಂದಾಗ್ಗೆ ಅವರ ಮುಂದೆ ಕೇಸಸ್ ಹೋಗುತ್ತವೆ, ಸ್ಕ್ರುಟ್ರಿನೈಜ್ ಮಾಡಿ ಗವರ್ನಮೆಂಟ್ ಆಫ್ ಇಂಡಿಯಾಕ್ಕೆ ರಿಕಮೆಂಡ್ ಮಾಡುತ್ತಾರೆ.

SRI M. H. JAYAPRAKASH :—You say, that the regulation contained appointment by selection. Is it not provided as per article 335 of the Constitution of India that reservation should be made ?

ಶ್ರೀ ವೀರೇಂದ್ರ ಪಾಟೀಲ್ :—ಇದರಲ್ಲಿ ರಿಜರ್ವೇಷನ್ ಏನು ಇಲ್ಲ. ಪೆಡ್ಯೂಲ್ಡ್ ಕ್ಯಾಸ್ಟ್ ಮತ್ತು ಪೆಡ್ಯೂಲ್ಡ್ ಟ್ರೈಬ್ಸಗಳಿಗೆ ಪ್ರಮೋಷನ್ ಕೋಟಾ ಇಲ್ಲ. ಅದನ್ನು ಪ್ರೊವೈಡ್ ಮಾಡಿಲ್ಲ.

ಶ್ರೀ ಎಚ್. ಪುಟ್ಟದಾಸ :—ಪೆಡ್ಯೂಲ್ಡ್ ಕ್ಯಾಸ್ಟನವರಿಗೆ ರಿಜರ್ವೇಷನ್ ಇರಬೇಕು ಎಂದು ನಿಯಮ ಇಲ್ಲದಿದ್ದರೂ ರೆಕಮೆಂಡ್ ಮಾಡಿದ ಲಿಸ್ಟನಲ್ಲಿ ಪೆಡ್ಯೂಲ್ಡ್ ಕ್ಯಾಸ್ಟನವರ ಹೆಸರು ಇದೆಯೇ ?

ಶ್ರೀ ವೀರೇಂದ್ರ ಪಾಟೀಲ್ :—ಇದರಲ್ಲಿ ರಿಕಮೆಂಡ್ ಮಾಡುವ ಪ್ರಶ್ನೆ ಬರುವುದಿಲ್ಲ. ಇದಕ್ಕೆ ಒಂದು ಕಮಿಟಿ ಇರುತ್ತದೆ ಅವರು ಕೂತುಕೊಂಡು ನಿರ್ಣಯ ಮಾಡಿ ಸೆಲೆಕ್ಷನ್ ಲಿಸ್ಟ ಮಾಡುತ್ತಾರೆ. ವೇಕನ್ಸಿ ಬಿದ್ದಾಗ್ಗೆ ಪ್ರಮೋಷನ್ ಕೊಡುತ್ತಾರೆ. ೧೫ ಪರ್ಸೆಂಟ್ ಪ್ರಮೋಷನ್ ಕೋಟಾ ಇದೆ. ವೇಕೆನ್ಸಿ ಯಾವಾಗ ಇರುತ್ತದೆಯೋ ಆಗ್ಗೆ ಸೆಲೆಕ್ಷನ್ ಲಿಸ್ಟ ಪ್ರಕಾರ ಗವರ್ನಮೆಂಟ್ ಆಫ್ ಇಂಡಿಯಾಕ್ಕೆ ರಿಕಮೆಂಡ್ ಮಾಡುತ್ತಾರೆ ಅದನ್ನು ನೋಟಿಫೈ ಮಾಡುತ್ತಾರೆ.

ಶ್ರೀ ಎಸ್. ರುದ್ರಪ್ಪ —ಬರೀ ಎಂ. ಎ. ಎಸ್. ನವರನ್ನು ಐ. ಎ. ಎಸ್. ಕೇಡರಿಗೆ ಶಿಫಾರ್ಸ್ ಮಾಡಲಾಗುತ್ತಿದೆ. ಸೆಕ್ರೆಟೇರಿಯೆಟ್‌ನಲ್ಲಿರತಕ್ಕ ಡೆಪ್ಯುಟಿ ಸೆಕ್ರೆಟರಿಗಳನ್ನು ಏಕೆ ಎಂ.ಎ.ಎಸ್, ಕೇಡರಿಗೆ ಪ್ರಮೋಟ್ ಮಾಡಬಾರದು ?

ಶ್ರೀ ವೀರೇಂದ್ರ ಪಾಟೀಲ್.—ಅದಕ್ಕೆಲ್ಲಾ ರೂಲ್ಸಿವೆ. ಇದು ಡೈರೆಕ್ಟಾಗಿ ನೇಮಕ ಮಾಡತಕದ್ದಲ್ಲ ಇದು ಪ್ರಮೋಷನ್ ಕೋಟ. ಇದು ಇರುವುದು ೧೫ ಪರ್ಸೆಂಟ್ – ಅಂದರೆ ೨೮ ಜನರು ಪ್ರಮೋಷನ್‌ಗೆ ಸಂಬಂಧಪಟ್ಟಿದ್ದು. ಆದ್ದರಿಂದ ಇದರಲ್ಲಿ ನಾನ್ ಐ.ಎ.ಎಸ್. ಪ್ರಶ್ನೆ ಉದ್ಭವಿಸುವುದಿಲ್ಲ.

ಶ್ರೀ ಎನ್. ಹುಚ್ಚಮಾಸ್ತಿಗೌಡ —ಕೆಲವರು ಅಂದರೆ ಕ್ರಿಶ್ಚಿಯನ್ನರು ತಾವು ಆ ಪರಿಶಿಷ್ಟಕ್ಕೆ ವರ್ಗಕ್ಕೆ ಸೇರಿದವರೆಂದು ಸುಳ್ಳುಹೇಳಿ ಆ ಅನುಕೂಲವನ್ನು ಪಡೆದಿರುವುದು ರುಜುವಾತಾದರೆ ಅಂಥವರ ಬಗ್ಗೆ ಕ್ರಮ ಕೈಗೊಳ್ಳುತ್ತೀರಾ ?

ಶ್ರೀ ವೀರೇಂದ್ರ ಪಾಟೀಲ್.—ಹಾಗೆ ಸುಳ್ಳು ಬರವಣಿಗೆಯನ್ನು ಕೊಟ್ಟು ಆ ಅನುಕೂಲ ಪಡೆದಿದ್ದರೆ ಅವರಿಗೆ ಕಾನೂನು ಪ್ರಕಾರ ಶಿಕ್ಷೆಯಾಗುತ್ತದೆ. ಹಾಗಲ್ಲದೆ ಅವರು ಆ ಕೆಲಸ ಸಿಕ್ಕಿದ ಮೇಲೆ ತಮ್ಮ ಮತವನ್ನು ಬದಲಾವಣೆ ಮಾಡಿಕೊಂಡರೆ ಅದಕ್ಕೆ ನಾವೇನೂ ಮಾಡುವುದಕ್ಕಾಗುವುದಿಲ್ಲ.

ಶ್ರೀ ಎಚ್. ಡಿ. ದೇವೇಗೌಡ.— ಯು.ಪಿ.ಎಸ್.ಸಿ. ಅವರು ಮತ್ತು ರಾಜ್ಯ ಸರ್ಕಾರದವರು ಮಾಡತಕ್ಕ ಸಮಿತಿಯವರು ಮತ್ತು ಕೇಂದ್ರ ಸರ್ಕಾರದಿಂದ ಬರತಕ್ಕ ಅಧಿಕಾರಿಗಳು ಮಾಡತಕ್ಕ ಶಿಫಾರ್ಸು ಮೇರೆಗೆ ಅವರ ನೇಮಕಗಳು ಆಗುತ್ತವೆಂದು ಹೇಳೋಣವಾಯಿತು. ಆದರೆ ಹಾಗೆ ಅವರು ಮಾಡಿದ ಶಿಫಾರ್ಸುಗಳನ್ನು ಕೇಂದ್ರದವರು ತಳ್ಳಿಹಾಕಿಲ್ಲವೇ ? ಅದು ನಿಜವಲ್ಲವೇ ?

ಶ್ರೀ ವೀರೇಂದ್ರ ಪಾಟೀಲ್.—ನಾನು ಹೇಳಿದ್ದು ಒಂದು ಸಲೆಕ್ಷನ್ ಸಮಿತಿ ಎಂದಿರುತ್ತದೆ. Its members are Chairman or Member of the U. P. S. C., Chief Secretary, Development Commissioner, Senior-most Divisional Commissioner, Chairman, M.R.A.T., and a representative of the Government of India not below the rank of a Joint Secretary. ಅವರು ಇಲ್ಲಿಗೆ ಪ್ರತಿ ವರ್ಷವೂ ಬಂದು ಇಲ್ಲಿಯ ಎಲಿಜಿಬಿಲಿಟಿ ಲಿಸ್ಟನ್ನು ನೋಡಿ ಆದರಲ್ಲಿ ಅವರು ಸೆಲೆಕ್ಟ್ ಮಾಡುತ್ತಾರೆ. ಹಾಗೆ ಅವರು ಸೆಲೆಕ್ಟ್ ಮಾಡಿದ ಲಿಸ್ಟ್ ಕೇಂದ್ರ ಸರ್ಕಾರಕ್ಕೆ ಹೋಗುತ್ತದೆ. ಅವರು ಅಲ್ಲಿ ಅದನ್ನು ಅಂಗೀಕಾರ ಮಾಡಿ ನೋಟಿಫೈ ಮಾಡುತ್ತಾರೆ.

ಶ್ರೀ ಕೆ ಎಚ್. ರಂಗನಾಥ್.—ಈ ವರ್ಷ ಹಾಗೆ ಸೆಲೆಕ್ಟ್‌ಮಾಡಿ ಕೇಂದ್ರಕ್ಕೆ ರವಾನೆ ಮಾಡಿರತಕ್ಕ ಪಟ್ಟಿಯಲ್ಲಿ ನಮ್ಮ ಮೈಸೂರು ರಾಜ್ಯದವರು ಯಾರಾದರೂ ಇದ್ದಾರೆಯೇ ?

ಶ್ರೀ ವೀರೇಂದ್ರ ಪಾಟೀಲ್.—ಇದ್ದಾರೆ. ಕೆಲವರನ್ನು ಸೆಲೆಕ್ಟ್ ಮಾಡಿದ್ದಾರೆ.

SRI C. K. RAJAIAH SETTY.—The selection authority is the Union Public Service Commission. May I know who is to submit the list-is it the State Government or the person who wants to apply for it ?

ಶ್ರೀ ವೀರೇಂದ್ರ ಪಾಟೀಲ್.—ಐ.ಎ.ಎಸ್. ಕೇಡರಿಗೆ ಡೈರೆಕ್ಟ್ ರೆಕ್ರೂಟ್‌ಮೆಂಟ್ ಮಾಡತಕ್ಕ ಬಗ್ಗೆ ಯಾರಾದರೂ ಅದಕ್ಕೆ ಅಪ್ಲೈ ಮಾಡಿಕೊಳ್ಳಬಹುದು. ಆದರೆ ಇಲ್ಲಿ ಇರತಕ್ಕ ಪ್ರಶ್ನೆ ಅದಲ್ಲ. ಇಲ್ಲಿ ಬರೀ ಪ್ರಮೋಷನ್ ಮೇಲೆ ಭರ್ತಿಯಾಗತಕ್ಕವರ ವಿಚಾರ ಮಾತ್ರ ಇಲ್ಲಿ ಬರುತ್ತದೆ. ಈ ಪ್ರಮೋಷನ್ ಮೇಲೆ ಭರ್ತಿಮಾಡುವುದರಲ್ಲಿ ರಿಜರ್ವೇಷನ್ ಇಲ್ಲ. ಇದಕ್ಕೆ ಒಂದು ಸಲೆಕ್ಷನ್ ಕಮಿಟಿ ಎಂದು ಒಂದು ಕಮಿಟಿ ಇದೆ. ಅದರಲ್ಲಿ ಯು. ಪಿ. ಎಸ್ಸಿ. ಅಧಿಕಾರಿಗಳು ಇರುತ್ತಾರೆ. ಅದರಲ್ಲಿ ಮತ್ತೆ ಕೇಂದ್ರ ಸರ್ಕಾರದ ಪ್ರತಿನಿಧಿಗಳಾಗಿ ಇಬ್ಬರು ಅಧಿಕಾರಿಗಳು ಇರುತ್ತಾರೆ. ನಮ್ಮಲ್ಲಿಯಕೆ ಲವು ಅಧಿಕಾರಿಗಳು ಆ ಸಮಿತಿಯಲ್ಲಿದ್ದಾರೆ. ಅವರು ಆಯಾ ರಾಜ್ಯಗಳಲ್ಲಿ ಇರತಕ್ಕ ಎಲಿಜಿಬಿಲಿಟಿ ಲಿಸ್ಟನ್ನು ನೋಡಿ ಸಲೆಕ್ಟ್ ಮಾಡುತ್ತಾರೆ. ಅವರು ಮಾಡಿದ ಲಿಸ್ಟ್ ಕೇಂದ್ರಕ್ಕೆ ಹೋಗಿ ಅಲ್ಲಿ ಅವರಿಂದ ಅನುಮೋದನೆ ಪಡೆದು ನೋಟಿಫೈ ಆಗುತ್ತದೆ.

ಶ್ರೀ ಎಂ. ಎಚ್. ಜಯಪ್ರಕಾಶ್ ನಾರಾಯಣ್.—ನಾನ್ ಐ.ಎ.ಎಸ್‌ನ್ನು ಎಂ. ಎ.ಎಸ್.ಗೆ ಈಕ್ವೆಟ್ ಮಾಡಿ, ಏಕೆಂದರೆ ಅವರಲ್ಲೂ ದಕ್ಷರೂ ಬುದ್ಧಿಷಂತರೂ ಇರುತ್ತಾರೆ, ಅವರನ್ನು ಐ.ಎ.ಎಸ್. ಕೇಡರಿಗೆ ಏಕೆ ಪ್ರಮೋಟ್ ಮಾಡಬಾರದು ? ಸೀನಿಯರ್ ನಾನ್ ಐ.ಎ.ಎಸ್. ಹರಿಜನ ಅಧಿಕಾರಿಗಳಿಗೆ ಆ ಪೋಸ್ಟ್‌ಯನ್ನು ಕೊಡಿಸುವುದಕ್ಕೆ ಸರ್ಕಾರಕ್ಕೆ ಆಸಕ್ತಿಯಿಲ್ಲವೇ ?

ಶ್ರೀ ವೀರೇಂದ್ರ ಪಾಟೀಲ್.—ಇದು ಪಕ್ಕಾ ಪ್ರಮೋಷನ್ ವಿಚಾರ. ಇದರಲ್ಲಿ ರಿಜರ್ವೇಷನ್ ವಿಚಾರ ಬರುವುದಿಲ್ಲ ಇದನ್ನು ಆಯಾಯ ವ್ಯಕ್ತಿಯ ಎಸ್. ಆರ್. ಮತ್ತು ಅವರ ಪರ್‌ಫಾರ್ಮೆನ್ಸ್ ನೋಡಿ ಮಾಡುತ್ತಾರೆ.

MUNICIPAL HIGH SCHOOLS

463. SRI J. R. HALASWAMY (Jagalur):—

Will the Minister of State for Municipal Administration be pleased to State: —

(*a*) the number of Municipal High Schools in the State ;

(*b*) the number of Municipal High Schools in the erstwhile Mysore State ;

(Sri J. R. Halaswamy)

(*c*) the number of teachers working in these High Schools of the erstwhile Mysore State ?

Sri B. M. Patil (*Minister of State for Municipal Administration*):—

(*a*) 103

(*b*) 78

(*c*) 1,227

ಶ್ರೀ ಜೆ. ಆರ್. ಹಾಲಸ್ವಾಮಿ.—ಸ್ವಾಮಿ, ನಾನು ಈ ಪ್ರಶ್ನೆಯನ್ನು ಕಳುಹಿಸುವ ಕಾಲಕ್ಕೆ ಇದಕ್ಕೆ ಉತ್ತರವನ್ನು ವಿದ್ಯಾಮಂತ್ರಿಗಳು ಒದಗಿಸಬೇಕೆಂದು ಕೇಳಿದ್ದೆ. ಆದರೆ ಈಗ ಮುನಿಸಿಪಲ್ ಅಡ್ಮಿನಿಸ್ಟ್ರೇಷನ್ ಮಂತ್ರಿಗಳು ಉತ್ತರ ಕೊಡುತ್ತಿದ್ದಾರೆ. ಏಕೆ ? ಮತ್ತು ಈ ಹಿಂದೆ ಸಂಸ್ಥಾನವು ಇತರಕ್ಕೆ ಎಲ್ಲಾ ಮುನಿಸಿಪಾಲಿಟಿಗಳ ಅಧ್ಯಕ್ಷರ ಸಮ್ಮೇಳನ ನಡೆದಾಗ ಆದರಲ್ಲಿ ಈ ಎಲ್ಲಾ ಮುನಿಸಿಪಲ್ ಹೈಸ್ಕೂಲುಗಳನ್ನೂ ಸರ್ಕಾರದವರು ವಹಿಸಿಕೊಳ್ಳಬೇಕೆಂದು ನಿರ್ಣಯ ಮಾಡಿದ್ದರಲ್ಲವೆ ?

ಶ್ರೀ ಬಿ ಎಂ. ಪಾಟೀಲ್.—ಅದನ್ನು ಅವರು ಮಾಡಿರಬಹುದು. ಆದರೆ ಈ ವಿಷಯ ಶಿಕ್ಷಣ ಖಾತೆಯಲ್ಲಿ ಪರಿಶೀಲನೆಯಲ್ಲಿದೆ. ಅದಿನ್ನೂ ತೀರ್ಮಾನವಾಗಿಲ್ಲ.

ಶ್ರೀ ಪಿ. ಆರ್. ರಂಗೇಗೌಡ.—೨೬ ಮುನಿಸಿಪಲ್ ಹೈಸ್ಕೂಲುಗಳಲ್ಲಿ ಸುಮಾರು ೧೨೨೭ ಜನ ಕನ್ನಡ ಉಪಾಧ್ಯಾಯರುಗಳ ಆಭಾವವಿದೆ ಎಂಬುದು ಸರ್ಕಾರದವರ ಗಮನಕ್ಕೆ ಬಂದಿಲ್ಲವೇ ?

ಶ್ರೀ ಬಿ. ಎಂ. ಪಾಟೀಲ್.—ಆ ವಿಚಾರ ಸರ್ಕಾರದ ಗಮನಕ್ಕೆ ಬಂದಿಲ್ಲ.

ಶ್ರೀ ಜೆ. ಆರ್. ಹಾಲಸ್ವಾಮಿ.—ರಾಮನಗರಂ ಮುನಿಸಿಪಲ್ ಹೈಸ್ಕೂಲು ಒಂದನ್ನು ಮಾತ್ರ ಸರ್ಕಾರದವರು ತೆಗೆದುಕೊಂಡು ಬಾಕಿ ಶಾಲೆಗಳನ್ನು ತೆಗೆದುಕೊಳ್ಳದಿರುವುದಕ್ಕೇನು ಕಾರಣ ?

ಶ್ರೀ ಬಿ. ಎಂ. ಪಾಟೀಲ್.—ಈ ವಿಚಾರವಿನ್ನೂ ಶಿಕ್ಷಣ ಖಾತೆಯಲ್ಲಿ ಪರಿಶೀಲನೆಯಲ್ಲಿದೆ ಎಂದು ಆಗಲೇ ಹೇಳಿದ್ದೇನೆ.

ಶ್ರೀ ಜೆ. ಆರ್. ಹಾಲಸ್ವಾಮಿ.—ಅವರನ್ನು ಡಿ.ಪಿ.ಐ. ಅವರ ಆಡಳಿತಕ್ಕೆ ಒಳಪಡಿಸದಿರುವುದರಿಂದ ಅವರ ಪ್ರಮೋಷನ್ ಇತ್ಯಾದಿಗಳಿಗೆಲ್ಲಾ ಬಹಳ ಧಕ್ಕೆ ಬರುತ್ತಿದೆ ಎಂದು ಅವರು ಬಹಳ ಕಳವಳ ಗೊಂಡಿದ್ದಾರೆ. ಆದ್ದರಿಂದ ಅವರಿಗೇನೂ ಅಂಥ ತೊಂದರೆಗಳಾಗದಂತೆ ಅವರ ಹಿತರಕ್ಷಣೆ ಮಾಡುತ್ತೀರಾ ?

ಶ್ರೀ ಬಿ. ಎಂ. ಪಾಟೀಲ್.—ಮಾನ್ಯ ವಿದ್ಯಾ ಸಚಿವರೂ ಇಲ್ಲೆ ಇದ್ದಾರೆ. ಇದು ಅವರಿಗೆ ಸೇರಿದ ವಿಷಯ. ಆದರೆ ಈಗ ಈ ಶಾಲೆಗಳೆಲ್ಲಾ ನಗರಾಡಳಿತಕ್ಕೆ ಸಂಬಂಧಪಟ್ಟವರು ಕಾರ್ಯಕ್ರಮ ಕೈಗೊಳ್ಳುತ್ತಿದ್ದಾರೆ. ಯಾರಿಗಾದರೂ ಅಂಥ ತೊಂದರೆಯಾದರೆ ಅವರು ಸರ್ಕಾರಕ್ಕೆ ಮನವಿ ಮಾಡಿಕೊಂಡರೆ ಅದನ್ನು ಪರಿಶೀಲಿಸಲಾಗುತ್ತದೆ.

SANCTION OF PENSION TO TEACHERS RETIRED BETWEEN 1954-1956

464. SMT. WINNIFRED F. FERNANDES (Coondapur).—

Will the Minister for Education be pleased to state.—

(*a*) whether the Government has taken a decision in the matter of sanctioning pension to teachers who had retired between 1954-1956 and who belonged to the Madras, Bombay and Hyderabad States before the reorganisation of States;

(*b*) if so, whether it has been implemented ;

(*c*) if not, whether they would expedite the implementation of the same without further delay ?

SRI N. M. KOTRABASIAH SOGI (*Deputy Minister of Education*).—

(*a*) The sanction of pensions to teacher belonging to Madras, Bombay and Hyderabad States who had retired prior to reorganisation of States is an affair is an pertaining to the parent States.

(*b*) Does not arise in view of reply to Clause (*a*) above.

(*c*) Does not arise in view of reply to Clause (*a*) above.

SMT. WINNIFRED F. FERNANDES.—In answer to (a) it is stated that it is an affair pertaining to the parent States. If representations are to be received from teachers who have retired before 1956 and have not been getting any pension, will the Government write to the concerned parent Governments and see that pension benefit is given to them ?

SRI N. M. KOTRABASIAH SOGI.—If there was any provision for pension benefits under the then existing rules under the then existing Governments, those benefits will be continued by the present Government also and those who have retired prior to Reorganisation have been getting pension. If they were not eligible for pension benefits under the then existing rules under those Governments, their cases cannot be considered by this Government

SMT. WINNIFRED F. FERNANDES.—There are a few cases of teachers who retired in 1956 and 1957, in South Kanara and they are denied pension benefits for no fault of theirs. Will Government consider those cases and see that at least some benefit is given to them ?

SRI N. M. KOTRABASIAH SOGI.—Under the then existing rules if those teachers were eligible to any benefits such as pension, increments etc., all such benefits would be continued by this Government also. If they were not eligible to any benefits under the then rules, the cases of those teachers cannot be considered by the Government.

ಶ್ರೀ ಬೋಳಾರಘುರಾಮಶೆಟ್ಟಿ.—ರಾಜ್ಯಗಳ ಪುನರ್ವಿಂಗಡಣೆ ಮುನ್ನ ಮದ್ರಾಸು, ಬೊಂಬಾಯಿ ಮತ್ತು ಹೈದ್ರಾಬಾದು ರಾಜ್ಯಗಳಿಗೆ ಸೇರಿದು ೧೯೫೪ ರಿಂದ ೧೯೫೬ರ ವರೆಗಿನ ಅವಧಿಯಲ್ಲಿ ನಿವೃತ್ತರಾದಂಥ ಉಪಾಧ್ಯಾಯರುಗಳಿಗೆ ನಿವೃತ್ತಿವೇತನವನ್ನು ಕೊಡುತ್ತಿದ್ದಿರಾ ? ಆ ರೀತಿ ಕೊಡುವುದಾದರೆ ನಮ್ಮ ರಾಜ್ಯದಲ್ಲಿರುವ ಹಿಂದೆ ರಿಟೈರ್ಡ್ ಆದಂಥ ಟೀಚರ್ಸ್‌ಗೆ ಅದೇ ರೀತಿ ಕೊಡಿಸುತ್ತೀರಾ ?

ಶ್ರೀ ಎನ್. ಎಂ. ಕೊಟ್ರಬಸಯ್ಯ ಸೋಗಿ. ಅದನ್ನು ಈಗಾಗಲೇ ಸ್ಪಷ್ಟಪಡಿಸಿದ್ದೇನೆ. ಎಸ್‌ಆರ್‌ಸಿ. ಆಕ್ಟ್‌ಗೆ ಅದರ ನಿಬಂಧನಗಣನವಾಗಿ ಅವರು ಪೆನ್‌ಷನ್‌ಗೆ ಎಲಿಜಿಬಲ್ ಆಗಿದ್ದರೆ ಅದರ ಪ್ರಕಾರ ಅವರಿಗೆ ಪೆನ್‌ಷನ್ ಬರುತ್ತಾ ಇದೆ. ಅದನ್ನು ಸರ್ಕಾರ ಮಂಜೂರು ಮಾಡುವುದಕ್ಕೂ ಸಿದ್ಧವಾಗಿದ್ದಾರೆ. ಆ ಕಾಯಿದೆಗನುಗುಣವಾಗಿ ಪೆನ್‌ಷನ್, ಬೆನಿಫಿಟ್ ಇಲ್ಲದೇ ಹೋಗಿದ್ದರೆ ಅದನ್ನು ನಾವು ಏನೂ ಮಾಡುವುದ ಕ್ಕಾಗುವುದಿಲ್ಲ.

SMT. WINNIFRED F. FERNANDES.—From the last two years so many representations were made by these teachers and the Government has not given any reply to them. May I know the reasons for that ?

SRI N. M. KOTRABASIAH SOGI.—I am not aware of the representatoins. Anyway, if they were entitled to any benefits under the then existing rules, those benefits will certainly be continued to be given to them.

ಶ್ರೀ ಎಂ. ನಾಗಪ್ಪ.—ಸ್ವಾಮಿ, ಮಾನ್ಯ ಸದಸ್ಯರಾದ ಶ್ರೀ ಬೋಳರಘುರಾಮಶೆಟ್ಟರು ರಾಜ್ಯಗಳ ಪುನರ್ವಿಂಗಡಣೆ ಮುನ್ನ ಮದ್ರಾಸು, ಬೊಂಬಾಯಿ ಮತ್ತು ಹೈದ್ರಾಬಾದ್ ರಾಜ್ಯಗಳಿಗೆ ಸೇರಿದ್ದು ೧೯೫೪ ರಿಂದ ೧೯೫೬ರ ವರೆಗಿನ ಅವಧಿಯಲ್ಲಿ ನಿವೃತ್ತರಾದಂಥ ಉಪಾಧ್ಯಾಯರುಗಳಿಗೆ ಆಯಾಯ ಕಾಯಿದೆಗನು ಗುಣವಾಗಿಯೇ ಅಂತಹ ಸವಲತ್ತುಗಳನ್ನು ಸರ್ಕಾರ ಕೊಡಲಿಲ್ಲ ಎನ್ನುವ ಭಾವನೆಯಿಂದ ಕೇಳಿದ್ದಾರೆ. ಮತ್ತು ಆದು ಅವರ ಪೇರೆಂಟ್ಸ್ ಸ್ಟೇಟ್‌ಗೆ ಸಂಬಂಧಪಟ್ಟಂತೆ ೧೯೫೪ ರಿಂದ ೧೯೫೬ರ ವರೆಗಿನ ಅವಧಿಯಲ್ಲಿ ನಿವೃತ್ತ ಉಪಾಧ್ಯಾಯರುಗಳಿಗೆ ಕೊಡಲಿಲ್ಲ ಎಂದು ಹೇಳಿದ್ದಾರೆ. ಆದುದರಿಂದ ಈಗಲಾದರೂ ಕೂಡ ಆಯಾಯಾ ರಾಜ್ಯಗಳಲ್ಲಿ ಹೈದಾರಾಬಾದ್, ಬಾಂಬೆ, ಮದ್ರಾಸ್ ರಾಜ್ಯಗಳಲ್ಲಿರುವ ನಿವೃತ್ತಿ ಉಪಾಧ್ಯಾಯ ರುಗಳು ಆ ಕಾಯಿದೆಗನುಗುಣವಾಗಿ ಎನ್‌ಟೈಟಲ್ ಆಗಿದ್ದರೆ ಅವರಿಗೆ ಪೆನ್‌ಷನ್ ಬೆನಿಫಿಟ್ ಮತ್ತು ಏನೇನು ಹಕ್ಕುಗಳು, ಸವಲತ್ತುಗಳು ಬರಬೇಕೋ ಅದನ್ನು ಗ್ಯಾರಂಟಿಯಾಗಿ ಕೊಡಿಸುತ್ತೇವೆ ಎನ್ನುವ ಭರವಸೆ ಕೊಡುತ್ತೀರಾ ?

1-30 P. M.

ಶ್ರೀ ಎನ್. ಎಂ. ಕೊಟ್ರಬಸವಯ್ಯ ಸೋಗಿ.—ಅದನ್ನು ಈಗಾಗಲೇ ಸ್ಪಷ್ಟಪಡಿಸಿದ್ದೇನೆ. ೧೯೫೬ರ ಮುಂಚೆ ಹೈದರಾಬಾದ್, ಮದ್ರಾಸ್, ಬೊಂಬಾಯಿ ಸರ್ಕಾರದಲ್ಲಾಗಲಿ ಅವರು ಕಾಯಿದೆ ಪ್ರಕಾರವಾಗಿ ಏನೇನು ಪೆನ್‌ಷನ್, ಸವಲತ್ತುಗಳನ್ನು ಕೊಡುತ್ತಾ ಇದ್ದರು ಅದನ್ನೇ ನಾವು ಮುಂದುವರಿಸಿಕೊಂಡು ಹೋಗುತ್ತಾ ಇದ್ದೇವೆ. ಅದು ಅವರಿಗೆ ದೊರೆಯುತ್ತಾ ಇದೆ. ಆ ಕಾಲದಲ್ಲಿ ಅವರಿಗೆ ಅಲ್ಲಿ ಪೆನ್‌ಷನ್ ಸವಲತ್ತುಗಳು ಸಿಕ್ಕದೇ ಹೋಗಿದ್ದರೆ ನಾವು ಹೊಸದಾಗಿ ಪೆನ್‌ಷನ್ ಬೆನಿಫಿಟ್ ಯಾವುದೇ ಆಗಲಿ ಕಾಯಿದೆ ಪ್ರಕಾರ ಕೊಡುವುದಕ್ಕೆ ಸಾಧ್ಯವಾಗುವುದಿಲ್ಲ.

GRANT OF LAND TO AN INDUSTRIALIST IN BELUR TALUK HASSAN DISTRICT

473. SRI B. NANJAPPA (Gandasi):—

Will the Minister of State for Forests be pleased to state :—

(*a*) whether it is a fact that the Government has granted about 1,000 acres of land in the Ramdevarahalla Kaval in Belur Taluk, Hassan District to an industrialist ; if so, whether it is on upset price or on lease basis ;

(*b*) the terms and conditions stipulated at the time of grant of this land ;

(*c*) whether it is a fact that the said industrialist is trying to mortgage this land and take the loan from a Scheduled Bank for the purpose other than the one for which the land was granted ;

(*d*) the action the Government propose to take in this behalf ?

SRI ALUR HANUMANTHAPPA (Minister of State for Forests).—

(*a*) Yes, on lease basis.

(*b*) *Vide* statement appended.

(*c*) No. The firm has been permitted to raise loan from a Scheduled Bank for their Industry.

(*d*) If the firm takes loan and utilises for the proposes other than Multi-purpose food project, action as deemed fit will be taken for violation of the terms and conditions of lease.

STATEMENT

Showing the Terms and Conditions Stipulated

(1) The lease will be for a period of thirty years on a lease amount of Rs. 25 per acre per year with a right of renewal for a like period on a lease amount subject to a ceiling of Rs. 50 per acre per year, the amount to be recovered being 10 per cent of the aforesaid lease amount for the first two years, 25 per cent in the third year, 50 per cent in the fourth year, 75 per cent in the fifth year and the full lease amount from the sixth year onwards.

(2) The land should be used for the purpose for which it is granted.

(3) The cattle that is being maintained by the company should not be allowed for grazing in the surrounding regenerated forest areas.

(SRI ALUR HANUMANTHAPPA)

(4) The area granted should be properly demarcated and fenced at the cost of the grantee.

(5) The grantee should pay Rs. 30,353-40 together with the interest representing the cost of plantations before taking possession of the land.

(6) If the land is utilised for any purpose other than the one for which it is granted the same is liable to be resumed to Government without any claims for compensation.

(7) The company lessee should abide by such of the rules and regulations of the Forest Department as exist or as are made from time to time.

(8) The lessee should utilise the land within 5 years by utilising 300 acres within a period of two years, a further extent of 200 acres before the end of 3 years, a further extent of 250 acres before the end of 4 years, and the entire balance before the end of 5 years.

(9) The lessee should pay the water rate in accordance with the rates notified by Government under the Mysore Irrigation (Levy of Betterment Contribution and Water Rates) Act, if the lands or any portion of the lands are irrigated by a source of irrigation belonging to Government.

(10) Casein produced by the Industry, should be used for the manufacture of casein based food products by itself or sold to other industry for use in the production of casein based food products. The manufacture of casein and its diversion for industrial uses not connected with food products, should be specifically prohibited.

(11) The lessee should execute a lease bond embodying the aforesaid terms.

ಶ್ರೀ ಬಿ. ನಂಜಪ್ಪ :— ಹಾಸನಾ ಜಿಲ್ಲೆಯಲ್ಲಿರುವ ರಾಮದೇವರ ಹಳ್ಳಿ ಕಾವಲಿನಲ್ಲಿ ಕೈಗಾರಿಕೋದ್ಯಮಿಗಳಿಗೆ ಜಮೀನು ಕೊಟ್ಟಿದ್ದೇವೆಂದು ಹೇಳಿದ್ದೀರಿ, ಹಾಗಾದರೆ ಅವರು ಯಾರು, ಅವರು ಯಾವಾಗ ಅರ್ಜಿ ಹಾಕಿದ್ದರು, ಯಾವಾಗ ತಾವು ಮಂಜೂರು ಮಾಡಿದ್ದೀರಿ ?

† ಶ್ರೀ ಆಲೂರು ಹನುಮಂತಪ್ಪ :— ಅವರು ೨೧ನೇ ಡಿಸೆಂಬರ್ ೧೯೬೫ರಲ್ಲಿ ಅರ್ಜಿ ಹಾಕಿದ್ದರು. ಸರ್ಕಾರದವರು ೫ನೇ ಅಕ್ಟೋಬರ್ ೧೯೬೭ರಲ್ಲಿ ಮಂಜೂರು ಮಾಡಿದ್ದಾರೆ.

SRI H. N. NANJE GOWDA :— The Hon. Minister was pleased to say that this land was granted in 1967. I want to know what is the amount that has been collected towards these lands ?

SRI ALUR HANUMANTHAPPA :— As per the decision of the Cabinet on 5th October 1967, the lease of land has been fixed for a period of 30 years, renewable for subsequent years, and for the first thirty years

it is Rs. 25 per acre per annum. He has deposited Rs. 10,000 and by way of value that has been fixed for the trees grown in the area of 135 acres, Rs. 30,353.

SRI H. N. NANJE GOWDA :— I want to know when it was granted in 1967, whether yearly collections were made and if so, what is the amount. I have gone through the agreement. I want to know the correct amount collected uptodate.

SRI ALUR HANUMANTHAPPA :— I have already said that he has deposited Rs. 10,000 and the tree value of Rs. 30,353 and they have also paid the annual rent of Rs. 2,500.

ಶ್ರೀ ಬಿ. ನಂಜಪ್ಪ :— ಅವರು ಪೆಡ್ಕೂಲ್ ಬ್ಯಾಂಕಿನಲ್ಲಿ ಸಾಲವನ್ನು ತೆಗೆದುಕೊಂಡಿದ್ದಾರೆಂದು ಹೇಳಿದ್ದೀರಿ, ಯಾವ ಬ್ಯಾಂಕಿನಲ್ಲಿ ಎಷ್ಟು ಸಾಲವನ್ನು ತೆಗೆದುಕೊಂಡಿದ್ದಾರೆ ? ಅದು ಕಾನೂನು ಬದ್ಧವಾಗಿದೆಯೇ ಹೇಗೆ ಎಂಬುದನ್ನು ಹೇಳುತ್ತೀರಾ ?

SRI ALUR HANUMANTHAPPA :— According to the information available they have not raised loans so far. As per the decision taken and communication sent to them, only lease right has been given as mortgage but without affecting the interest of the Government on the eased land.

ಶ್ರೀ ಎಚ್. ಡಿ. ದೇವೇಗೌಡ :— ಈಗ ಅವರು ೩೦೦ ಎಕರೆ ಜಮೀನನ್ನು ಯಾವ ಉದ್ದೇಶಕ್ಕಾಗಿ ತೆಗೆದುಕೊಂಡಿದ್ದಾರೆಯೋ, ೧೦೦೦ ಎಕರೆ ಜಮೀನನ್ನು ಯಾವ ಉದ್ದೇಶಕ್ಕಾಗಿ ತೆಗೆದುಕೊಂಡಿದ್ದಾರೆಯೋ ಆ ಉದ್ದೇಶವನ್ನು ಅವರು ಕಾರ್ಯಗತ ಮಾಡುತ್ತಿದ್ದಾರೆಯೇ, ಅವರು ಬ್ಯಾಂಕಿನಿಂದ ಸಾಲವನ್ನು ತೆಗೆದುಕೊಳ್ಳುವುದಕ್ಕೆ ಅವಕಾಶವನ್ನು ಕೊಟ್ಟಿದ್ದೇವೆ ಎಂದು ಹೇಳಿದ್ದೀರಿ, ಆ ಜಮೀನನ್ನು ಅವರಿಗೆ ೧೯೬೯ನೇ ಇಸವಿಯಲ್ಲಿ ಮಂಜೂರು ಮಾಡಿದ್ದೀರಿ, ಈಗ ೧೯೭೦ನೇ ಇಸವಿ ಬಂದರೂ ಕೂಡ ನೀವು ಅವರಿಗೆ ಯಾವ ಉದ್ದೇಶಕ್ಕಾಗಿ ಜಮೀನನ್ನು ಕೊಟ್ಟಿದ್ದೀರೋ ಆ ಉದ್ದೇಶಕ್ಕೆ ಅವರು ಅದನ್ನು ಉಪಯೋಗ ಮಾಡಿದ್ದಾರೆಯೇ? ಅವರು ಬ್ಯಾಂಕಿನಲ್ಲಿ ಲೋನ್ ರೈಜ್ ಮಾಡುವುದಕ್ಕೆ ಸರ್ಕಾರದವರು ಅನುಮತಿಯನ್ನು ಕೊಟ್ಟ ಮೇಲೆ ಅವರು ಕಂಡೀಷನ್ ಫುಲ್‌ಫಿಲ್ ಮಾಡದೇ ಹೋದರೆ ಬ್ಯಾಂಕಿನ ಹಣಕ್ಕೆ ಸರ್ಕಾರದವರು ಹೊಣೆಗಾರರಾಗುತ್ತಾರೆಯೇ ?

SRI ALUR HANUMANTHAPPA :— They must fulfil the conditions of the agreement and see within five years they must make use of the land. According to the terms and conditions of the agreement they must bring under cultivation 300 acres within two years and 200 acres before the third year and 250 acres before the fourth year and the balance thereafter. There is no binding on the Government regarding the loan raised by this company in any of the banks. In the Government communication itself it is made clear that the Government is not in any way affected by the loans raised by them This is a private company ; they have share capital of 25 lakhs and in regard to the leased land there cannot be any binding on the Government.

ಶ್ರೀ ಎಂ. ಎಚ್. ಜಯಪ್ರಕಾಶನಾರಾಯಣ್ :— ಅವರು ಬ್ಯಾಂಕಿನಲ್ಲಿ ಸಾಲ ತೆಗೆದುಕೊಳ್ಳುವುದಕ್ಕೆ ಹೇಗೆ ಪರ್ಮಿಷನ್ ಕೊಟ್ಟಿದ್ದೀರಿ ?

SRI ALUR HANUMANTHAPPA :— I have already stated that there is no binding on the land itself. Only lease rights they can mortgage to any of the banks, if they so desire. One of the conditions is, if the land is not put to use for which it is granted the Government has the right to resume the land.

ಶ್ರೀ ಎಸ್. ಎಚ್. ಪುಟ್ಟರಂಗನಾಥ್ : ಈಗ ತಾವು ಯಾವ ಉದ್ದೇಶಕ್ಕೊಸ್ಕರ ಅವರಿಗೆ ಜಮೀನನ್ನು ಕೊಟ್ಟಿದ್ದೀರೋ ಆ ಉದ್ದೇಶಕ್ಕಲ್ಲದೆ ಬೇರೆ ಉದ್ದೇಶಕ್ಕೆ ಆ ಜಮೀನನ್ನು ಉಪಯೋಗಿಸಬೇಕಂ ಎಂದು ಅವರು ಪ್ರಯತ್ನ ಮಾಡುತ್ತಿರುವುದು ತಮ್ಮ ಗಮನಕ್ಕೆ ಬಂದಿದೆಯೇ ? ಮತ್ತು ಆ ಜಮೀನಿನ ಪಕ್ಕದಲ್ಲಿರುವ ಜಮೀನನ್ನು ತಮಗೆ ಕೊಡಬೇಕೆಂದು ಅವರು ಸರ್ಕಾರಕ್ಕೆ ಅರ್ಜಿ ಹಾಕಿರುವುದು ನಿಜವೇ?

SRI ALUR HANUMANTHAPPA :— We will take the proceedings against them. They cannot do it. They cannot violate the agreement. ಆದರ ಪಕ್ಕದಲ್ಲಿರುವ ಜಮೀನು ತಮಗೆ ಕೊಡಬೇಕೆಂದು ಅವರು ಅರ್ಜಿ ಹಾಕಿರುವುದು ಸರ್ಕಾರದ ಮುಂದೆ ಇಲ್ಲ.

ಶ್ರೀ ಬಿ. ನಂಜಪ್ಪ :— ಈಗ ತಾವು ಅವರಿಗೆ ೧೦೦೦ ಎಕರೆ ಜಮೀನನ್ನು ಕೊಟ್ಟು ೩ ವರ್ಷ ಮುಗಿಯಿತು. ತಾವು ಯಾವ ಉದ್ದೇಶಕ್ಕಾಗಿ ಅವರಿಗೆ ಜಮೀನನ್ನು ಕೊಟ್ಟಿದ್ದೀರೋ ಆ ಉದ್ದೇಶಕ್ಕೆ ಅವರು ಆದನ್ನು ೫ ವರ್ಷಗಳ ಒಳಗೆ ಉಪಯೋಗ ಮಾಡಬೇಕು. ಆದರೆ ಅವರು ಆ ಉದ್ದೇಶಕ್ಕೆ ಆ ಜಮೀನನ್ನು ಉಪಯೋಗ ಮಾಡಿಲ್ಲ. ಆದ್ದರಿಂದ ಅದನ್ನು ಲೀಜ್ ಕ್ಯಾನ್ಸಲ್ ಮಾಡಿ ಅದನ್ನು ಭೂಹೀನ ರೈತರಿಗೆ ಕೊಡುತ್ತೀರಾ ?

SRI ALUR HANUMANTHAPPA :— I have no information as to what extent they have put the land into use. I will get it examined. If they violate the agreement I will see the conditions are fulfilled.

ಶ್ರೀ ಸಿ. ಎಂ. ಎಸ್. ಶಾಸ್ತ್ರಿ :— ಹಾಸನಾ ಜಿಲ್ಲೆಯಲ್ಲಿ ಒಬ್ಬರು ಕೈಗಾರಿಕೋದ್ಯಮಿಗಳಿಗೆ ಸರ್ಕಾರ ದವರು ೧೦೦೦ ಎಕರೆ ಜಮೀನು ಕೊಟ್ಟಿರುವುದು ಏನಿದೆ ಅದರಲ್ಲಿರತಕ್ಕಂಥ ಮರಗಳನ್ನೆಲ್ಲಾ ಆ ಕೈಗಾರಿಕೋದ್ಯಮಿಗಳು ಕಡಿದು ಮಾರಿಕೊಂಡು ಆ ಭೂಮಿಯನ್ನು ಬೇರನ್ ಲ್ಯಾಂಡ್ ಮಾಡಿ ಬಿಟ್ಟುಕೊಟ್ಟು ಹೋಗುತ್ತಾರೆಂಬುದು ತಮ್ಮ ಗಮನಕ್ಕೆ ಬಂದಿದೆಯೇ ? ಮತ್ತು ಅವರಿಗೆ ತಾವು ಜಮೀನು ಕೊಡುವಾಗ ಏನು ಕಂಡೀಷನ್ ಹಾಕಿಕೊಟ್ಟಿದ್ದೀರಿ, ಆ ಕಂಡೀಷನ್ ಪ್ರಕಾರ ಅವರು ಇಲ್ಲಿಯವರೆಗೂ ನಡೆಸಿಕೊಂಡು ಬಂದಿಲ್ಲದೆ ಇರುವುದರಿಂದ ಅವರಿಗೆ ಆ ಜಮೀನು ಕೊಟ್ಟಿರುವುದನ್ನು ಏತಕ್ಕೆ ಕ್ಯಾನ್ಸಲ್ ಮಾಡಲಿಲ್ಲ ?

ಶ್ರೀ ಆಲೂರು ಹನುಮಂತಪ್ಪ:—ಅವರು ಮರಗಳನ್ನು ಕಡಿದು ಅಲ್ಲಿರತಕ್ಕಂತಹ ಮರದಿಂದ ಪಣ ಸಂಪಾದನೆ ಮಾಡಿದ್ದಾರೆಂಬುದರ ಬಗ್ಗೆ ನನ್ನ ಹತ್ತಿರ ವಿವರವಿಲ್ಲ.ಆದರೆ ವ್ಯಾಲ್ಯುಯೇಶನ್ ಫಿಕ್ಸ್ ಮಾಡಿ ಮರಗಳನ್ನು ಕೊಟ್ಟಿದ್ದೇವೆ. ಅದನ್ನು ಮಾತ್ರ ಅವರು ತೆಗೆದಿರಬಹುದು. ಇದನ್ನು ಒಂದು ಮಹತ್ತರ ಸಾಧನೆಗೋಸ್ಕರ ಕೊಟ್ಟದ್ದು. ಅಲ್ಲಿ ಫುಡ್ ಪ್ರೊಡಕ್ಟ್ಸ್ ತಯಾರು ಮಾಡುವುದಕ್ಕೆ ಕೊಟ್ಟದ್ದು. ಇಲ್ಲಿ ೩೮೦ ಬಫೆಲೊಸ್ ಇಡುವಂತದ್ದು ಇದೆ.

It was a scrub forest. There was no tree growth there. We have planted in 135 acres and the value of it is Rs 35,535. it has been given after the recovery of the amount. This is for production of high protein food, cheese, casein, and various other food products.

2-00 P.M

REDUCTION OF AMOUNT UNDER COMMUNICATION AND BUILDINGS

481 SRI K. H. RANGANATH (Mudigere). —Will the Minister for Finance, Planning and Youth Welfare be pleased to state:—

(*a*) whether the Resources Committee has recommended reduction in the amount proposed in the Budget Estimate for 1969-70 under Communication and Building and if so the total amount so recommende

(b) whether the said recommendation has been accepted by the Government and the proposed cut that is being resorted to (Circle wise Gistrict wiseres may be furnished)?

SRI RAMAKRISHNA HEGDE:—(Minister for Finance, Planning and Youth Welfare)

(*a*) Yes.

Rs·1 50 lakhs

(*b*) The saving is anticipated by deferring fresh works which have not beeu taken up or works although sanctioned, have not been started and alsoby reducing the expenditure under Tools and Plant The [illegible] savings are to be effected in consultation with the concerned Department. No. breakup can be given.

ಶ್ರೀ ಕೆ. ಎಚ್. ರಂಗನಾಥ್:—ತಾವು (ಅ) ಉತ್ತರದಲ್ಲಿ ಹೊಸ ಕಾಮಗಾರಿಗಳನ್ನು ಅಥವಾ ಕಾಮಗಾರಿಗಳು ಮಂಜೂರಾಗಿ ದ್ದೂ ಪ್ರಾರಂಭಿಸದಿರುವ ಕಾಮಗಾರಿಗಳನ್ನೂ ಮುಂದೂಡುವ ಮೂಲಕ ಹಾಗೂ ಯಂತ್ರೋಪಕರಣಗಳ ಬಾಬಿನಲ್ಲಿ ವೆಚ್ಚವನ್ನು ಕಡಿಮೆಗೊಳಿಸುವುದರ ಮೂಲಕ ಉಳಿತಾಯವನ್ನು ನಿರೀಕ್ಷಿಸಲಾಗಿದೆ, ಸಂಬಂಧಪಟ್ಟ ಇಲಾಖೆಯೊಡನೆ ಸಮಾಲೋಚಿಸಿ ವಾಸ್ತವವಾಗಿ ಉಳಿತಾಯ ಮಾಡ ಬೇಕಾಗಿದೆ. ಪ್ರತ್ಯೇಕ ಅಂಕಿ ಅಂಶಗಳನ್ನು ಒದಗಿಸುವುದು ಸಾಧ್ಯವಿಲ್ಲವೆಂದು ಹೇಳಿದ್ದೀರಿ ಆದ್ದರಿಂದ ಸರ್ಕಲ್ ವೈಸ್, ಜಿಲ್ಲಾವೈಸ್ ಬ್ರೇಕ್ ಆಪ್ ಕೊಡಿಂವುದಕ್ಕೆ ಸರ್ಕಾರಕ್ಕೆ ಇರುವ ಕಷ್ಟವೇನು?

ಶ್ರೀ ರಾಮಕೃಷ್ಣ ಹೆಗಡೆ:— ಕಷ್ಟಸ್ಪಷ್ಟವಾಗಿದೆ. ಈಗ ಬಡ್ಜೆಟ್ಟಿನಲ್ಲಿ ಸೇರಿಸಿರತಕ್ಕಂತಹ ಕೆಲಸಗಳಲ್ಲಿ ಯಾವುದು ಇದುವರೆಗೂ ಅಪ್ರಾವ್ ಆಗಿಲವ್ವೋ ಅದನ್ನು ತಡೆಹಿಡಿಯುತ್ತೇವೆ. ಮತ್ತು ಪ್ಲಾಂಟ್ಸ್ ಅಂಡ್ ಮ್ಯಾಶಿನರಿಗೆ ಖರ್ಚು ಮಾಡತಕ್ಕ ಹಣ ನಿಗದಿ ಮಾಡಿ ಖರ್ಚು ಮಾಡುವುದಿಲ್ಲ. ಹೀಗೆ ಒಂದು-ಒಂದೂವರೆ ಕೋಟಿ ರೂಪಾಯಿ ಉಳಿತಾಯ ಆಗುತ್ತದೆ. ಮತ್ತು ಸರ್ಕಲ್‌ವೈಸ್, ಜಿಲ್ಲಾವೈಸ್ ಬ್ರೇಕ್ ಅಪ್ಸ್ ಹೇಳುವುದಕ್ಕಾಗುವುದಿಲ್ಲ.

ಶ್ರೀ ಎಚ್. ಡಿ. ದೇವೆಗೌಡ —ಪ್ಲಾಂಟ್ಸ್ ಅಂಡ್ ಮೇಶಿನರಿಗೆ ಖರ್ಚು ಮಾಡತಕ್ಕ ಹಣದಲ್ಲಿ ಕಡಿತ ಮಾಡುವುದರಿಂದ, ಮೇಜರ್ ಇರಿಗೇಶನ್‌ಗೆ ಬೇಕಾದ ಬುಲ್‌ಡೋಸರ್‌ಗಳು, ಸ್ಕ್ರೇಪರ್ಸ್ ಇತ್ಯಾದಿಗಳನ್ನು ಕೊಂಡುಕೊಳ್ಳದಿದ್ದರೆ, ಬಹಳ ತೊಂದರೆಯಾಗುತ್ತದೆ. ಆದ್ದರಿಂದ ನಮ್ಮ ಮೇಜರ್ ಇರಿಗೇಶನ್‌ಗೆ ಪ್ರೋಗ್ರಾಂಗಳು ಕುಂಠಿತವಾಗುವುದಿಲ್ಲವೇ?

ಶ್ರೀ ರಾಮಕೃಷ್ಣ ಹೆಗಡೆ.— ಇದು ಮೇಜರ್ ಇರಿಗೇಶನಿಗೆ ಸಂಬಂಧಪಟ್ಟದ್ದಲ್ಲ. ಇದು ಕೇವಲ ಪಿ ಡಬ್ಲ್ಯೂ ಡಿ ಯಲ್ಲಿರುವ ರೋಡ್ ಮತ್ತು ಬಿಲ್ಡಿಂಗ್ಸ್ ಅವುಗಳಿಗೆ ಸಂಬಂಧಪಟ್ಟದ್ದು. ಅಲ್ಲಿ ಟ್ರಕ್ ರೋಡ್ ರೋಲರ್ಸ್ ಮುಂತಾದವುಗಳನ್ನು ನಿಲ್ಲಿಸಬೇಕಾಗುತ್ತದೆ. ಮೇಜರ್ ಇರಿಗೇಶನಿಗೆ ಇದು ಅಫೆಕ್ಟ್ ಆಗುವುದಿಲ್ಲ.

ಶ್ರೀ ಕೆ ಎನ್ ವೀರಪ್ಪ ಗೌಡ—. ನೀವು ಒಂದುಸಲ ಎಲ್ಲಾಕಡೆಗೂ ಒಂದೇ ತರದ ಅನುಕೂ ಇವತ್ತುಕಲಿಸಬೇಕೆಂದು ಹೇಳುತ್ತಿದಿರಿ. ಮಲೆನಾಡಿನಲ್ಲಿ ನೀವು ನೀರು ಕೊಡದೆ, ಅವರು ಆಹಾರಧಾನ್ಯ ಕೊಡುತ್ತಿದ್ದಾಗ ಅಲ್ಲಿ ಆಗತಕ್ಕ ರೋಡುಗಳು ಮತ್ತು ಸಣ್ಣ ಬ್ರಿಜ್‌ಗಳನ್ನು ನಿಲ್ಲಿಸಿ ಯಾವುದೋ ಒಂದು ಏರಿಯಾದ ಅಣೆಕಟ್ಟಿಗೆಹಣವನ್ನು ಹಾಕತಕ್ಕದ್ದು ನ್ಯಾಯವೆ ? ಇದು ಪಕ್ಷಪಾತವಾಗುವುದಿಲ್ಲವೆ? ಇಂದು ಮಲೆನಾಡಿನಲ್ಲಿ ಎಷ್ಟು ಭತ್ತವನ್ನು ಬೆಳೆಯುತ್ತಿದ್ದಾರೆ ಎಂಬುದು ತಮ್ಮ ಗಮನಕ್ಕೆ ಬಂದಿದೆಯೇ?

ಶ್ರೀ ರಾಮಕೃಷ್ಣ ಹೆಗಡೆ.— ಮಾನ್ಯ ಸದಸ್ಯರಿಗೆ ನಾನು ಆಶ್ವಾಸನೆಯನ್ನು ಕೊಡುತ್ತೇನೆ —ಚಿಕ್ಕ ಮಗಳೂರು ಜಿಲ್ಲೆಗೆ ಯಾವುದೇ ಕಡಿತವನ್ನು ಮಾಡಿಲ್ಲ. ಈ ವರ್ಷದಲ್ಲಿ ಅತೀ ಹೆಚ್ಚಿನ ಪ್ರೊವಿಜನ್ ಮಾಡಿದ್ದೇವೆ. ಆದ್ದರಿಂದ ಯಾವುದೇ ವ್ಯಥೆ ಅವರು ಪಡಬೇಕಾಗಿಲ್ಲ.

MINOR IRRIGATION SCHEMES IN DODDABALLAPUR

490 SRI. G. RAME GOWDA. (Doddaballapur):—

Will the Minister of State for Minor Irrigation be pleased to state:-

(*a*) the number of sanctioned works in Doddaballapur Constituency under Minor Irrigation Scheme:

(*b*) the date of sanction and cost ofr estimate of each scheme;

(c) the date of starting of each work and the expenditure incurred on each work;

(*d*) the reasons fo not completing these works (reasons in each case may be given separately)?

SMT. BASAWARAJESAWARI-(Deputy Minister for Social Welfare (on behalf of) SRI A. J. DODDAMETI.—Minister of State for Minor Irrigation.

(*a*) 12.

(*b*), (c) and (*d*) *Vide* statement appended.

* *

Statement showing the details of sanctioned Minor Statement Irrigation Works.

	Name of Work	Estimated Cost	Date of sanction	Dated of Starting	Outlay to end of 12/69	Reasons
1	2	3	4	5	6	7
1	Construction of a pick up across Madagahalla R.E near Byappanahalli	1,19, 100 1,91, 000	16/63-64	12/63	77,679	Work stopped due to change in design and Revised Esti mate is under finalisation
2	Construction of Kotlige Machenahalli Tank	1,03,000	23/66-67	3/67	48,625	Old agency stopped the work Tenders have been called for balance work
3	Construction of Moodlakalinahalli	1,88,000	9/68-69	1/69	27,663	Old agency stopped the work Fresh agency is fixed and work is resumed,
4	Restoration of Mele-kotikenchegondanakere	3,75 000	957/67-68	10/68	20.450	As there is water in the Tank further work will bo resumed after depletion of water in this tank.
5	Restoration of Sympadipura	21,500	951/68	10/68	20,450	Revetment work is held up due to water in the Tank
6	Restoration of Gulya Nandigondanakere	36,500	968/67-68	1/68	9,215	Old contractor stopped the work. Fresh agency is proposed to be fixed early to resume the work

1	2	3	4	5	6	7
7	Restoration of Hadripura	31,000	6/68-69	8/68	30,232	Work under progress
8	Restoration of Doddavaddagere	44,000	12/67-68	1/68	23,444	Work under progress.
9	Construction of new tank Channaveeranahalli	24,000 RE 39,000	300/67-68	7/66	30,379	Work under progress
10	Construction of a new tank near Thenneranahally	56,000	91/66-67	7/66	49,270	Earthwork to bund completed except halla portion work There is flow of water
11	Construction of a new Tank near Lagumenahalli	68,000	12/66-67	1/67	39,473	The contractor stopped the work and he he has just resumed the work.
12	Construcit on of a new tank near Jakkanahalli	56,000	13/66-67	9/68	4,583	Since there is no response to the tender, an agency has been fixed up recently on P. W. System.

ಶ್ರೀ ಜಿ. ರಾಮೇಗೌಡ:—ಒಂದೇ ಐಟಂ ೧೯೬೩ನೇ ಇಸವಿಯಿಂದ ನಡೆಯುತ್ತಿದೆ. ಒಂದು ಲಕ್ಷ ರೂಪಾಯಿಯ ಕೆಲಸ ಮಾಡಿಸುವುದಕ್ಕೆ ಎಷ್ಟು ವರ್ಷಬೇಕಾಗುತ್ತದೆ ಮತ್ತು ಈ ರಿವೈಸ್ಡ್ ಎಸ್ಟಿಮೇಟ್ ಸಂಪೂರ್ಣಗೆ ಇಳಿಸಬೇಕಾದರೆ ಎಷ್ಟು ದಿನ ಬೇಕಾಗುತ್ತದೆ.

†ಶ್ರೀಮತಿ ಬಸವರಾಜೇಶ್ವರಿ :—ಸುಮಾರು ೧೨ ಕೆಲಸದ ಬಗ್ಗೆ ಮಾಹಿತಿ ಕೇಳಿದ್ದಾರೆ. ಎಲ್ಲಾ ಮಾಹಿತಿ ಒದಗಿಸಿದ್ದೇವೆ. ಆದರೆ ಈ ಕೆಲಸಗಳನ್ನು ಅಭಾವ ಪರಿಸ್ಥಿತಿಯಲ್ಲಿ ಶುರು ಮಾಡಿದ್ದೇವೆ. ಇದು ಟೆಂಡರ್ ಮಗೈರೆ ಮಾಡಿ ಯೂರಿಗೊ ಕಂಟ್ರಾಕ್ಟರಿಗೆ ಕೊಟ್ಟು ಕೆಲಸ ಮಾಡಿಸಿದ್ದಲ್ಲ ಕೇವಲ ಪೀಸ್ ವರ್ಕ್ ಆಗಿ ಈ ಕೆಲಸಗಳನ್ನು ಮಾಡ್ದೆವೆ. ಇಲ್ಲಿಯವರೆಗೂ ಅದಕ್ಕೆ ಲೇಬರರ್ಸ್‌ನ ಅಭಾವ ಇತ್ತು, ಮತ್ತು ಕಂಟ್ರಾಕ್ಟರ್ಸ್ ಯಾರೂ ಮುಂದೆ ಬರಲಿಲ್ಲ. ಆದ್ದರಿಂದ ಇಂಥ ನಿಗದಿಯಾದ ಸಮಯದಲ್ಲಿ ಮಾಡಬೇಕೆಂದು ಈ ಪೀಸ್ ಮಿಲ್ ಕೆಲಸಗಳನ್ನು ಕೊಟ್ಟಿರಲಿಲ್ಲ ಅಭಾವ ಪರಿಸ್ಥಿತಿ ಇರುವುದರಿಂದ ಅನೇಕ ವಿಚಾರಗಳಲ್ಲಿ ವಿಳಂಬವಾಗಿದೆ ಇದಕ್ಕೆ ಒಂದು ಎಜೆನ್ಸಿ ಫಿಕ್ಸ್ ಮಾಡಿ ತೀವ್ರಗತಿಯಿಂದ ಸಂಪೂರ್ಣ ಕೆಲಸ ಮಾಡಿಸಬೇಕೆಂದು ಸರ್ಕಾರದಪರ ವಿಚಾರ ಇದೆ. ಮೊದಲನೆಯ ಪ್ರಶ್ನೆಗೆ ನಿಗದಿಯಾದ ವಿವರ ಕೊಟ್ಟಿದ್ದೇವೆ ಡಿಸೈನ್ ಬದಲಾವಣೆ ಮಾಡತಕ್ಕ ಕಾಲದಲ್ಲಿ ರಿವೈಸ್ಡ್ ಎಸ್ಟಿಮೇಟ್ ಮಾಡಿದ್ದಾರೆ ಅದಷ್ಟು ಜಾಗ್ರತೆ ಏಜೆನ್ಸಿ ಫಿಕ್ಸ್ ಮಾಡಿ ಪೂರ್ತಿ. ಮಾಡುತ್ತೇವೆ.

ಶ್ರೀ ಸಿ ಆರ್. ರಂಗೇಗೌಡ; —ಐಟಂ ನಂ. ೪ರಲ್ಲಿ ೩,೭೫,೦೦೦ ರೂಪಾಯಿ ಎಂದು ತೋರಿಸಿದ್ದಾರೆ. ಇದು ರೆಸ್ಟೋರೇಷನ್ ಕೆಲಸ. ಇದಕ್ಕೆ ಇಷ್ಟು ಆಗುವುದು ನಿಜವೇ, ಸುಳ್ಳೇ ಎಂದು ಹೇಳಬೇಕು.

ಶ್ರೀಮತಿ ಬಸವರಾಜೇಶ್ವರಿ :—ಅದನ್ನು ಇನೊಂದು ಸಲ ವೆರಿಫೈ ಮಾಡುತ್ತೇನೆ.

[Mr. SPEAKER in the Chair]

ಶ್ರೀ ಬಿ ನಂಜಪ್ಪ :—ನಂಬರ್ ೫–೬ ದೊಡ್ಡಬಳಾ ಪುರ ಕ್ಷೇತ್ರಕ್ಕೆ ಸೇರಿದ್ದೇ, ಅಥವಾ ಅದರ ಹೊರಗಡೆ ಇದೆಯೇ ?

ಶ್ರೀಮತಿ ಬಸವರಾಜೇಶ್ವರಿ:—ಅದು ಆ ಕ್ಷೇತ್ರದ ಹೊರಗಡೆ ಇದೆಯೇ, ಅಥವಾ ಒಳಗಡೆ ಇದೆಯೇ ಎಂದು ಗೊತ್ತಿಲ್ಲ. ಇದ್ದ ವಿವರಗಳನ್ನು ಮಾತ್ರ ಕೊಟ್ಟಿದ್ದೇವೆ.

MR. SPEAKER —I shall hold over the remaining questions They will be taken up in due course. Next we will taken up Short Notice Questions.

Short Notice Questions and Answers

SALE OF MOVEABLES FROM THE OFFICE OF THE DEPUTY COMMISSIONER, NORTH KANARA

9. SMT. WINNIFRED F. FERNANDES (Coondapur):—

Will the Minister for Revenue be pleased to state :—

(*a*) whether it has come to the notice of the Government that orders have been passed recently by the Civil Judge, Karwar, North Kanara for the sale of moveables from the Office of the Deputy Commissioner, North Kanara for recovery of a sum of of Rs 508–94.

(*b*) the reason for allowing the matter to reach such a stage.

Sri H. V. KOUJALGI. (Minister for Revenue) :—

(*a*) No,

(*b*) Does not arise.

ATTACHMENT OF FURNITURE OF THE OFFICE OF THE DEPUTY COMMISSIONER, NORTH KANARA.

10. SRI M. H. JAYAPRAKASH NARAYAN (Sirsi).—

Will the Minister for Revenue be pleased to state :—

(*a*) whether it is a fact that the furniture of the Office of the Deputy Commissioner of North Kanara District at Karwar was attached on 22-1-1970 as per the Court Order ;

(*b*) the reasons for such an instance :

(*c*) the person responsible for this lapse and the action taken by them in that behalf ?

SRI H. V. KOUJALGI,— (MINISTER FOR REVENUE)

(*a*) No.

(*b*) and (*c*) Do not arise.

SMT. WINNIFRED F. FERNANDES :— For the question in (a), the Government have stated 'No.' I think the Government has not used its common-sense because.....

SRI M. H. JAYAPRAKASH NARAYAN ;— When the Hon. Speaker was not in the Chair, there was lot of discussion about that word.

MR. SPEAKER : I was listening to everything. The use of that word was not rather happy. But why does the Hon. Member Smt. Fernandes commit the same mistake ? She should avoid using that word.

SMT. WINNIFRED F. FERNANDES : I am using that word because the Hon. Minister has not given me a correct answer.

MR. SPEAKER : The Hon. Member should avoid that word.

SMT. WINNIFRED F. FERNANDES : In the "Indian Express", the following report has appeared under date 22nd January :

"The Civil Judge of Karwar Mr. V. D. Puned recently issued orders in an execution proceeding for the sale of moveables from the office of the Deputy Commissioner,North Kanara, for the recovery of a decree amount of Rs. 508. 94.

"The Government having failed to pay the amount to the decree holder, Mr. Vittal Manjunath Prabhu, a former godown keeper, the Civil Judge directed the issue of a "char" warrant against the Governmment for the recovery of the amount under the court decree by attaching and sale of the moveables from th offiece of the Deputy Commissioner, North Kanara.

"Mr. Prabhu had sued the Government for the payment of the excess amount recovered from him as godown keeper and obtained a decree against the Government. He took out execution proceedings against the Government for the recovery of the decretal dues as the Government failed to pay the amount."

This in what has appeared in the papers. Then how does the Governmant say that nothing has come to their knowledge, that it is not a fact and that the question of fixing responsibility does not arise?

I want to know whether what is published in the paper is a fact and if so, what action you are going to take against the officer who has given this answer ?

SRI H. V. KOUJALGI : I request the Hon. Member to read the question carefully. Orders regarding the sale of the property is not passed and that has not come to the notice of the Government. Only execution proceedings were started and as soonas it came to our notice the money was paid.

SMT. WINNIFRED FERNANDES : When the decree amount was only Rs. 508 and when the movables of the Deputy Commissioner's office were attached for that small amount is it not a slur on the administration?

SRI H. V. KOUJALGI ; I again repeat that there was a request but there was no order and no attachment. I think it is a legal procedure. The member will understand that there was no attachment at all. Assoon as execution application was failed it was brought to the notice and the money was paid.

SRI H. SIDDAVEERAPPA : What was the prayer in the execution application and what was the order of the Court?

SRI H. V. KOJALGI : The prayer was for attachment of moveables and recovery of money.

ಶ್ರೀ ಬೋಳ ರಘುರಾಮಶೆಟ್ಟಿ : ಡಿಕ್ರಿ ಯಾವಾಗ ಆಯಿತು? ಡಿಕ್ರಿ ಯಾದನಂತರ ಇಷ್ಟು ಸಣ್ಣ ಮೊಬಲಗನ್ನು ಇನ್ನೂ ಕೂಡದೇ ಇರಲು ಕಾರಣವೇನು?

SRI H. V. KOUJALGI : I think the decree was passed on 31st January 1969.

ಶ್ರೀ ಎಂ. ನಾಗಪ್ಪ : ೧೯೬೯ನೇ ಜನವರಿಯಲಿ ಡಿಕ್ರಿಯಾದರೂ ಸಹ ಒಂದು ವರ್ಷದವರೆಗೂ ಹಣ ಕೂಡದೆ ಹಾಗೆಯೇ ಬಿಟ್ಟಿರುವುದಕ್ಕೆ ಕಾರಣವೇನು? ೨೨ನೇ ಜನವರಿ ೧೯೭೦ಕ್ಕೆ ಅಟ್ಯಾಚ್‌ಮೆಂಟ್ ಮಾಡಿ ಎಂದು ಸಿವಿಲ್ ಜಡ್ಜ್ ಆರ್ಡರ್ ಪಾಸ್ ಮಾಡಿದ್ದು ನಿಜವೇ?

SRI H. V. KOUJALGI : From the records I find that there was only a prayer and the orders were not yet passed.

ಶ್ರೀ ಬಿ. ಭಾಸ್ಕರಶೆಟ್ಟಿ : ೨೨ನೇ ಜನವರಿ ೧೯೭೦ಕ್ಕೆ ಜಪ್ತಿ ಮಾಡಿದ್ದು ನಿಜವೇ? ಅವಲ್ ಜಾರಿ ಯಾಗಿದೆಯೆಂದು ಹೇಳಿದ್ದೀರಿ. ೫೦೯-೯೪ ರೂಪಾಯಿಗಳನ್ನು ವಸೂಲು ಮಾಡಿಕೊಳ್ಳುವುದಕ್ಕೆ ಅಮಲ್ ಜಾರಿ ಬಂದಿದೆಯೆಂದರೆ, ಇಷ್ಟು ದೊಡ್ಡ ಸಿಂಡಿಕೇಟ್ ಸರ್ಕಾರಕ್ಕೆ ನಾಚಿಕೆಯಲ್ಲವೇ?

